
ಹೊಳಲ್ಕೆರೆ ಪಟ್ಟಣದ ಚಾರಿತ್ರಿಕ ಅಧ್ಯಯನ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ)



ಸಂಶೋಧಕರು

ಲತಾ ಬಿ.ಕೆ.

ಮಾರ್ಗದರ್ಶಕರು

ಡಾ.ಸಿ.ಮಹದೇವ

ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೪

ಹೊಳಲ್ಕೆರೆ ಪಟ್ಟಣದ ಚಾರಿತ್ರಿಕ ಅಧ್ಯಯನ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ)

ಸಂಶೋಧಕರು

ಲತಾ ಬಿ.ಕೆ.

ಮಾರ್ಗದರ್ಶಕರು

ಡಾ.ಸಿ.ಮಹದೇವ

ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩೨೭೬

೨೦೧೪

ಪ್ರಮಾಣ ಪತ್ರ

ಹೊಳಲ್ಕೆರೆ ಪಟ್ಟಣದ ಚಾರಿತ್ರಿಕ ಅಧ್ಯಯನ ಎಂಬ ಶೀರ್ಷಿಕೆ ಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ.ಮಹದೇವ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಸಂಶೋಧನಾ ನಿಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಅಥವಾ ಇತರೆ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

Latha B.K.

(ಲತಾ ಬಿ.ಕೆ.)

ದಿನಾಂಕ: 30/6/14

ಸ್ಥಳ: ವಿದ್ಯಾರಣ್ಯ

ದೃಢೀಕರಣ ಪತ್ರ

ಕುಮಾರಿ ಲತಾ ಬಿ.ಕೆ. ಅವರು **ಹೊಳಲ್ಕೆರೆ ಪಟ್ಟಣದ ಚಾರಿತ್ರಿಕ ಅಧ್ಯಯನ** ಎಂಬ ಶೀರ್ಷಿಕೆ ಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಲೆಂದು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಈ ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇತರ ಉದ್ದೇಶಗಳಿಗಾಗಲಿ ಇವರು ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ.ಸಿ.ಮಹದೇವ

ಪ್ರಾಧ್ಯಾಪಕರು

ದಿನಾಂಕ:30/6/14

ಸ್ಥಳ: ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ಒಂದು

ಪ್ರಸ್ತಾವನೆ

ಮಾನವನು ಪ್ರಾರಂಭದಲ್ಲಿ ಒಂದು ಕಡೆ ನೆಲೆಸದೆ ಅಲೆಮಾರಿಯಾಗಿ ಅನುಕೂಲಕರ ಪ್ರದೇಶದಲ್ಲಿ ಅಲೆದಾಡುತ್ತಾ ಜೀವನ ಕಳೆಯುತ್ತಿದ್ದ. ನಂತರ ಒಂದೆಡೆ ಶಾಶ್ವತವಾಗಿ ನೆಲೆನಿಂತು ತನಗೆ ಬೇಕಾದ ಆಹಾರ ಪದಾರ್ಥಗಳನ್ನು ತಾನೇ ಬೆಳೆದು ತಿನ್ನಲು ಪ್ರಾರಂಭಿಸಿದ. ಇದು ಮಾನವನ ಅಲೆಮಾರಿ ಮತ್ತು ಕೃಷಿ ಸಂಸ್ಕೃತಿಗಳ ವಿಕಾಸವನ್ನು ಸೂಚಿಸುತ್ತದೆ. ಈ ಬೆಳವಣಿಗೆ ನಂತರದಲ್ಲಿ ಗ್ರಾಮ, ನಗರ, ಸಂಸ್ಕೃತಿಯಾಗಿ ಮಾರ್ಪಟ್ಟಿರುವುದನ್ನು ಕಾಣಬಹುದಾಗಿದೆ.

ಚರಿತ್ರೆಯೆಂದರೆ ರಾಜ, ರಾಣಿ, ಅವರ ಅರಮನೆ, ಸಾಮ್ರಾಜ್ಯದ ವರ್ಣನೆ ಎಂದು ಭಾವಿಸಲಾಗಿತ್ತು. ಆದರೆ ಪ್ರತಿಯೊಂದು ಗ್ರಾಮ, ತಾಲೂಕು, ಜಿಲ್ಲೆ ಹಾಗೂ ರಾಜ್ಯಕ್ಕೂ ತನ್ನದೇ ಆದ ಇತಿಹಾಸವಿದೆ. ಕೆಲವು ದಶಕಗಳಿಂದಿಚೆಗೆ ಸ್ಥಳೀಯ ಚರಿತ್ರೆಯಲ್ಲಿ ಗ್ರಾಮ, ಹೋಬಳಿ, ನಗರ, ತಾಲೂಕು, ಹಾಗೂ ಜಿಲ್ಲೆಗಳ ಮಟ್ಟದಲ್ಲಿ ಅಧ್ಯಯನಗಳು ನಡೆಯುತ್ತಿವೆ. ಇಂತಹ ಅಧ್ಯಯನಗಳು ಸ್ಥಳೀಯ ಚರಿತ್ರೆಯನ್ನು ತಿಳಿಸುವ ಜೊತೆಗೆ ರಾಜಕೀಯ ಇತಿಹಾಸದ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನು ಪುನರ್ ರೂಪಿಸಲು ಸಹಕಾರಿಯಾಗಿದೆ.

ಆಯಾಯ ಪ್ರದೇಶದಲ್ಲಿ ಬದುಕಿ ಬಾಳಿದ ಮಾನವನ ಜೀವನ ವಿಧಾನ, ಅನುಸರಿಸಿ ಎದುರಿಸಿದ ಸಮಸ್ಯೆ, ಜೀವನ ಮೌಲ್ಯ, ಹಾಗೂ ಭೌತಿಕ ಅವಶೇಷ ಮೊದಲಾದವುಗಳ ವಿಶ್ಲೇಷಣೆಯೇ ಅಧ್ಯಯನವಾಗಿದೆ. ಹಾಗಾಗಿ ಸ್ಥಳೀಯ ಚರಿತ್ರೆಯನ್ನು ಕಟ್ಟಲು ಆಕರಗಳು ಬಹಳ ಮುಖ್ಯ. ಅಂತಹ ಆಕರಗಳಲ್ಲಿ ಪ್ರಧಾನವಾಗಿ ಸಾಹಿತ್ಯಿಕ ಆಕರಗಳು, ಪುರಾತತ್ವ ಆಕರಗಳು, ಮೌಖಿಕ ಆಕರಗಳು, ಮುಖ್ಯವಾದವು. ಒಂದು ಪ್ರದೇಶದ ಅಧ್ಯಯನದಲ್ಲಿ ಸಾಹಿತ್ಯ, ಶಾಸನ, ಪುರಾತತ್ವೀಯ ಹಾಗೂ ಮೌಖಿಕ ಆಕರಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವುದರಿಂದ ಆಯಾಯ ಪ್ರದೇಶದ ಮಾನವನ ಚರಿತ್ರೆ ಹಾಗೂ ಸಂಸ್ಕೃತಿಯನ್ನು ವ್ಯವಸ್ಥಿತವಾಗಿ ಕಟ್ಟಿಕೊಂಡಬಹುದು.

ಪ್ರಸ್ತುತ 'ಹೊಳಲ್ಕೆರೆ ಪಟ್ಟಣದ ಚಾರಿತ್ರಿಕ ಅಧ್ಯಯನ' ಎಂಬ ಶೀರ್ಷಿಕೆಯ ಅಡಿಯಲ್ಲಿ ಇಡೀ ಹೊಳಲ್ಕೆರೆ ಪಟ್ಟಣದ ಚರಿತ್ರೆ ಮತ್ತು ಸಂಸ್ಕೃತಿಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಲಾಗಿದೆ. ಕರ್ನಾಟಕದ ಮಧ್ಯಭಾಗದಲ್ಲಿರುವ ಚಿತ್ರದುರ್ಗ ಜಿಲ್ಲೆಯು ಪ್ರಾಗೈತಿಹಾಸಿಕವಾಗಿ, ಚಾರಿತ್ರಿಕವಾಗಿ ಮಹತ್ವದ ಸ್ಥಾನ ಪಡೆದಿದೆ. ಸ್ಥಳೀಯ ಚರಿತ್ರೆಯ ದೃಷ್ಟಿಯಿಂದ ವಿಶೇಷವಾಗಿದೆ. ಚಿತ್ರದುರ್ಗ ಜಿಲ್ಲೆಯ ತಾಲೂಕು

ಕೇಂದ್ರಗಳಲ್ಲಿ ಹೊಳಲ್ಕೆರೆಯು ಒಂದು. ಚಿತ್ರದುರ್ಗ ಜಿಲ್ಲೆಯಲ್ಲಿ ಅನೇಕ ನಗರಗಳಿವೆ. ಅವುಗಳಿಗೆ ಹೋಲಿಸಿದರೆ ಹೊಳಲ್ಕೆರೆ ಪಟ್ಟಣದ ಭೌಗೋಳಿಕ ಲಕ್ಷಣ ವಿಶೇಷವಾಗಿದ್ದು ಅರೆಮಲೆನಾಡಾಗಿದೆ. ಪಟ್ಟಣದ ಸುತ್ತಮುತ್ತ ಅನೇಕ ಕೆರೆಕಟ್ಟೆ, ಬಾವಿಗಳಿವೆ. ನೀರಾವರಿಯ ಅನುಕೂಲದಿಂದ ಜನಜೀವನಕ್ಕೆ ಯೋಗ್ಯ ಪ್ರದೇಶವೆನಿಸಿದೆ. ಚಾರಿತ್ರಿಕ ಕಾಲಘಟ್ಟದಲ್ಲಿ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಪಾಂಡ್ಯ, ಸೇವುಣ, ಹೊಯ್ಸಳ, ಕಂಪಿಲದೇವ, ವಿಜಯನಗರ, ಸಂತೆಬೆನ್ನೂರು ನಾಯಕರು, ಪಾಳೆಯಗಾರರು, ಮೈಸೂರು ಒಡೆಯರು, ಬಿಜಾಪುರ ಹಾಗೂ ಮೊಗಲ್ ಸಾಮ್ರಾಜ್ಯ, ಪ್ರಾಚೀನ ಕುರುಹುಗಳು ಈ ನಗರದ ಸುತ್ತಮುತ್ತಲಿನ ಭಾಗದಲ್ಲಿ ಗೋಚರಿಸುತ್ತದೆ. ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣದಲ್ಲಿ ಸ್ಮಾರಕ, ಕೋಟೆ–ಕೊತ್ತಲು, ಕೆರೆಕಟ್ಟೆ, ಬಾವಿ, ಶಿಲ್ಪಗಳು ಅಮೂಲಾಗ್ರ ಪಾತ್ರವನ್ನು ವಹಿಸುತ್ತವೆ. ಇಲ್ಲಿನ ದೇವಾಲಯ ಶಾಸನ, ಐತಿಹ್ಯಗಳು ಹೊಳಲ್ಕೆರೆ ಪಟ್ಟಣದ ಚಾರಿತ್ರಿಕ ಅಧ್ಯಯನದ ಆಕರ ಸಂಪತ್ತಾಗಿವೆ. ಈ ಪ್ರದೇಶ ಉಚ್ಚಂಗಿ ಪಾಂಡ್ಯ, ಹೊಯ್ಸಳ, ವಿಜಯನಗರ ಇತ್ಯಾದಿ ಅರಸರ ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣಕ್ಕೆ ಸಹಕಾರಿಯಾಗಿದೆ. ಜೈನ, ವೈಷ್ಣವ, ಶೈವ, ಮುಂತಾದ ಧಾರ್ಮಿಕ ಪಂಥಗಳ ಪ್ರಾಚೀನ ಕುರುಹುಗಳು ಇಲ್ಲಿನ ದೇವಾಲಯ, ಗುಡಿಗಳಲ್ಲಿ ಉಳಿದಿವೆ. ಮೌಖಿಕ ಸಾಹಿತ್ಯದಲ್ಲಿ ಉಲ್ಲೇಖಗೊಂಡಿರುವ ಹೊಳಲ್ಕೆರೆ ಪಟ್ಟಣದಲ್ಲಿನ ನಂಬಿಕೆ, ಆಚರಣೆ, ಜಾತ್ರೆ, ಉತ್ಸವಗಳು ಈ ಪಟ್ಟಣದ ಸಾಂಸ್ಕೃತಿಕ ವೈಶಿಷ್ಟ್ಯತೆಗೆ ಸಾಕ್ಷಿಯಾಗಿ ನಿಂತಿವೆ.

ಅಧ್ಯಯನದ ಉದ್ದೇಶ

ಕರ್ನಾಟಕ ಇತಿಹಾಸದಲ್ಲಿ ಚಿತ್ರದುರ್ಗ ಜಿಲ್ಲೆಯು ಒಂದು ಪ್ರಮುಖ ಐತಿಹಾಸಿಕ ಮಹತ್ವವನ್ನು ಪಡೆದಿದೆ. ಜಿಲ್ಲೆಯ ಮಧ್ಯಭಾಗದಲ್ಲಿರುವ ಹೊಳಲ್ಕೆರೆ ಪಟ್ಟಣವು ಚಾರಿತ್ರಿಕವಾಗಿ, ಐತಿಹಾಸಿಕವಾಗಿ ಶ್ರೀಮಂತವಾಗಿರುವ ಪ್ರಸ್ತುತ ಪ್ರದೇಶ ಅರೆಮಲೆನಾಡು ಎಂದು ಹೆಸರು ಪಡೆದಿದೆ. ಸಂಶೋಧನೆಯ ಅಧ್ಯಯನಕ್ಕೆ ಉದ್ದೇಶ ಬಹುಮುಖ್ಯ. ಉದ್ದೇಶವು ಅಧ್ಯಯನಕ್ಕೆ ಗುರಿ ಇದ್ದಂತೆ. ಅಧ್ಯಯನದ ಉದ್ದೇಶವನ್ನು ಸಾಧಿಸಿದರೆ ಗುರಿಯನ್ನು ಸಾಧಿಸಿದಂತೆ. ಸಮಸ್ಯೆಯ ರೂಪದಲ್ಲಿ ಎತ್ತಿದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಕೆಲಸವನ್ನು ಮಾಡುತ್ತದೆ. ಇದನ್ನೇ ಇನ್ನೊಂದು ವಿಧದಲ್ಲಿ ಹೇಳವುದಾದರೆ ಅಧ್ಯಯನ ಏನನ್ನು ಶೋಧಿಸಲು ಅಥವಾ ಪರೀಕ್ಷಿಸಲು ಅಥವಾ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ ಎನ್ನುವುದನ್ನು ಹೇಳುತ್ತದೆ. ಅಧ್ಯಯನದ ಉದ್ದೇಶಗಳು ಸಂಶೋಧನಾ ಕೆಲಸಕ್ಕೆ ಒಂದು ಮಾರ್ಗಸೂಚಿಯಂತೆ ಕೆಲಸ ಮಾಡುತ್ತದೆ. ಆದ್ದರಿಂದ ಸಂಶೋಧನಾ ಅಧ್ಯಯನಕ್ಕೆ ಉದ್ದೇಶವಿರಲೇಬೇಕು. ಕೆಲವೊಂದು ನಿರ್ದಿಷ್ಟ ಉದ್ದೇಶಗಳನ್ನಿಟ್ಟುಕೊಂಡು ಅಧ್ಯಯನ ಅಥವಾ ಸಂಶೋಧನೆಯನ್ನು ಕೈಗೊಂಡು ಕಾರ್ಯನಿರ್ವಹಿಸಿದಾಗ ಅದು ಪರಿಪೂರ್ಣವೆನಿಸುತ್ತದೆ.

ಪ್ರಸ್ತುತ ಅಧ್ಯಯನವು "ಹೊಳಲ್ಕೆರೆ ಪಟ್ಟಣದ ಚಾರಿತ್ರಿಕ ಅಧ್ಯಯನ" ಎಂಬ ಶೀರ್ಷಿಕೆಯನ್ನು ಹೊಂದಿದ್ದು, ಅಜ್ಞಾತವಾಗಿರುವ ಹೊಳಲ್ಕೆರೆ ಪಟ್ಟಣದ ಚರಿತ್ರೆ ಮತ್ತು ಸಂಸ್ಕೃತಿಯನ್ನು ಈ ಮೂಲಕ ಬೆಳಕಿಗೆ ತರುವ ಉದ್ದೇಶವನ್ನು ಹೊಂದಲಾಗಿದೆ. ಈ ಪ್ರದೇಶ ನೈಸರ್ಗಿಕವಾದ ಬೆಟ್ಟಗುಡ್ಡ, ಗವಿ,

ಕಲ್ಲಾಸರೆಗಳನ್ನು ಹೊಂದಿದ್ದು ಭೌಗೋಳಿಕವಾಗಿ ವಿಶಿಷ್ಟವಾಗಿದೆ. ಈ ಭೌಗೋಳಿಕ ಅಂಶಗಳು ಇಲ್ಲಿನ ಚರಿತ್ರೆ ಮತ್ತು ಸಂಸ್ಕೃತಿಯ ಮೇಲೆ ಬೀರಿರುವ ಪ್ರಭಾವವನ್ನು ಕುರಿತು ವಿವರವಾಗಿ ಚರ್ಚಿಸಲಾಗಿದೆ. ಚಾರಿತ್ರಿಕವಾಗಿ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಪಾಂಡ್ಯ, ಸೇವುಣ, ಹೊಯ್ಸಳ, ಕಂಪಿಲದೇವ, ವಿಜಯನಗರ, ಸಂತೆಬೆನ್ನೂರು ನಾಯಕರು, ಪಾಳೆಯಗಾರರು, ಮೈಸೂರು ಒಡೆಯರು, ಬಿಜಾಪುರದ ಹಾಗೂ ಮೊಗಲರ ಆಳ್ವಿಕೆಯ ಪ್ರಾಚೀನ ಕುರುಹುಗಳನ್ನು ದೊರೆತ ಚಾರಿತ್ರಿಕ ಮತ್ತು ಸಾಹಿತ್ಯಿಕ ಆಧಾರಗಳನ್ನು ಪ್ರಧಾನವಾಗಿ ಇಟ್ಟುಕೊಂಡು ವಿಶ್ಲೇಷಿಸಲಾಗಿದೆ. ಭೌಗೋಳಿಕವಾಗಿ ಪಟ್ಟಣದ ಪರಿಸರದ ಸುತ್ತಮುತ್ತ ಹಳೆಶಿಲಾಯುಗದಿಂದ ಬೃಹತ್ ಶಿಲಾಯುಗದವರೆಗೆ ಸಂಗತಿಗಳನ್ನು ಬೆಳಕಿಗೆ ತರುವುದರ ಮುಖೇನ ಇಲ್ಲಿನ ಪ್ರಾಚೀನ ಮಾನವನ ಸಂಸ್ಕೃತಿಯನ್ನು ಕುರಿತು ವಿವೇಚಿಸಲಾಗಿದೆ. ನೈಸರ್ಗಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಇಲ್ಲಿನ ಸ್ಥಳನಾಮಗಳು ವಿಶಿಷ್ಟವಾಗಿವೆ. ಅಂತಹ ಸ್ಥಳನಾಮ ಅಧ್ಯಯನಕ್ಕೆ ಅನುಗುಣವಾಗಿ ವ್ಯವಸ್ಥಿತವಾಗಿ ವಿಭಾಗಿಸಿಕೊಂಡು ಭೌಗೋಳಿಕ, ಪ್ರಾಗೈತಿಹಾಸಿಕವಾಗಿ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಚಾರಿತ್ರಿಕವಾಗಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಇಲ್ಲಿನ ಪ್ರಾಚೀನ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ, ದೇವಾಲಯ, ಕೋಟೆ, ಕೆರೆಕಟ್ಟೆ ಹಾಗೂ ಶಿಲ್ಪದಲ್ಲಿ ಸ್ಮಾರಕ ಶಿಲ್ಪಗಳನ್ನು ಕುರಿತು ವಿವರವಾಗಿ ಚರ್ಚಿಸಲಾಗಿದೆ. ಇಲ್ಲಿನ ಪ್ರಾಚೀನ ದೇವಾಲಯಗಳನ್ನು ಕಲ್ಯಾಣ ಚಾಲುಕ್ಯ, ವಿಜಯನಗರ, ಪಾಳೆಯಗಾರ ಇತ್ಯಾದಿಯಾಗಿ ಗಮನಿಸುತ್ತ ಚರ್ಚಿಸಿ, ಯಾವ ಮತ್ತು ಯಾರ ಕಾಲಘಟ್ಟಕ್ಕೆ ಸಂಬಂಧಿಸಿದವು ಎಂಬುದನ್ನು ಚರ್ಚಿಸುತ್ತ ಅದರ ಶೈಲಿಯನ್ನು ಕುರಿತು ಅಧ್ಯಯನಕ್ಕೆ ಒಳಪಡಿಸಲಾಗಿದೆ. ರಾಜಕೀಯ ಇತಿಹಾಸ ನಿರ್ಮಾಣದಲ್ಲಿ ಇಲ್ಲಿನ ಪ್ರಾಚೀನವಾದ ಕೋಟೆ ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸಿದ್ದು ಇವುಗಳ ರಚನೆ, ನಿರ್ಮಾಣದ ಉದ್ದೇಶ, ಕಾಲಮಾಲ, ಪ್ರಸ್ತುತ ಇವುಗಳ ಸ್ಥಿತಿ ಎಂಬಿತ್ಯಾದಿ ಸಂಗತಿಗಳನ್ನು ಸೋದಾಹರಣವಾಗಿ ಚರ್ಚಿಸಲಾಗಿದೆ.

ಪ್ರಾಚೀನ ಕೆರೆ ನೀರಾವರಿ ವ್ಯವಸ್ಥೆಯು ಅಂದಿನ ಆರ್ಥಿಕ ಜೀನವನದ ಬೆನ್ನೆಲುಬಾಗಿದ್ದು ಈ ಭಾಗದಲ್ಲಿ ಉಳಿದು ಬಂದಿರುವ ಹೊಯ್ಸಳ ಹಾಗೂ ವಿಜಯನಗರ ಕಾಲದ ಕೆರೆಕಟ್ಟೆಗಳನ್ನು ಕುರಿತು ಹಲವು ಆಕರಗಳ ಮೂಲಕ ವಿವರವಾಗಿ ಚರ್ಚಿಸಲಾಗಿದೆ. ಇನ್ನೂ ಮೌಖಿಕ ಸಾಹಿತ್ಯದ ಮೂಲಕ ಉಳಿದುಕೊಂಡು ಬಂದಿರುವ ಐತಿಹ್ಯ, ನಂಬಿಕೆ ಮತ್ತು ಆಚರಣೆಗಳು ಸಾಂಸ್ಕೃತಿಕವಾಗಿ ಜಾತ್ರೆ–ಉತ್ಸವಗಳನ್ನು ಕುರಿತು ದಾಖಲೀಕರಿಸಿ, ವಿಶ್ಲೇಷಣೆ ಮಾಡಲಾಗಿದೆ. ಹೊಳಲ್ಕೆರೆ ಪಟ್ಟಣ ಕುರಿತು ಇದುವರೆಗೂ ಬಿಡಿ ಲೇಖನಗಳನ್ನು ಹವ್ಯಾಸಿ ಸಂಶೋಧಕರು ಕೆಲವು ಲೇಖನಗಳನ್ನು ಪೂರಕವಾಗಿ ಬಳಸಿಕೊಂಡು ಹೊಳಲ್ಕೆರೆ ಪಟ್ಟಣವನ್ನು ಅಧ್ಯಯನಕ್ಕೆ ಒಳಪಡಿಸಿ ಚರಿತ್ರೆಗೆ ಸೇರಿಸುವ ಸದುದ್ದೇಶವನ್ನು ಇಟ್ಟುಕೊಳ್ಳಲಾಗಿದೆ.

ಒಟ್ಟಾರೆ ಇಲ್ಲಿನ ಪುರಾತತ್ವೀಯ, ಸಾಹಿತ್ಯಿಕ ಹಾಗೂ ಮೌಖಿಕ ಆಕರಗಳ ಮೂಲಕ ಇಡೀ ಹೊಳಲ್ಕೆರೆ ಪಟ್ಟಣದ ಸಮಗ್ರ ಚಾರಿತ್ರಿಕ ಅಧ್ಯಯನ ನಡೆಸುವ ಉದ್ದೇಶ ಪ್ರಸ್ತುತ ಅಧ್ಯಯನದ್ದು.

ಅಧ್ಯಯನದ ವ್ಯಾಪ್ತಿ

ಯಾವುದೇ ಒಂದು ಸಂಶೋಧನೆಗೆ ಚೌಕಟ್ಟು ಬಹಳ ಮುಖ್ಯ. ಅದರಂತೆಯೇ ಒಂದು ಅಧ್ಯಯನಕ್ಕೆ ವ್ಯಾಪ್ತಿ ಇರಬೇಕು. ಈ ಮಿತಿಯಲ್ಲಿ ಅಧ್ಯಯನ ಕೈಗೊಂಡಾಗ ಮಾತ್ರ ಪರಿಪೂರ್ಣವಾಗುತ್ತದೆ. ಈ ಚೌಕಟ್ಟಿನ ಕ್ರಮಬದ್ಧತೆಯಿಂದಾಗಿ ಸ್ಪಷ್ಟವಾದ ಇತಿಹಾಸವನ್ನು ರಚಿಸಲು ಸಾಧ್ಯವಾಗುತ್ತದೆ. ಅಧ್ಯಯನವು ಗೊಂದಲಮಯವಾಗಿ, ಅಸ್ಪಷ್ಟವಾದ ಚರಿತ್ರೆ ರೂಪುಗೊಳ್ಳುವ ಸಾಧ್ಯತೆಗಳಿವೆ.

ಅಧ್ಯಯನದ ವ್ಯಾಪ್ತಿಯು ಶೀರ್ಷಿಕೆಯನ್ವಯ 'ಹೊಳಲ್ಕೆರೆ ಪಟ್ಟಣದ ಚಾರಿತ್ರಿಕ ಅಧ್ಯಯನ' ವಿಷಯಗಳನ್ನು ಒಳಗೊಂಡಿದೆ. ಪ್ರಸ್ತುತ ಅಧ್ಯಯನದಲ್ಲಿ ನಾನು ಭೌಗೋಳಿಕ ವ್ಯಾಪ್ತಿಗೆ ಅನುಗುಣವಾಗಿ ಅಲ್ಲದೆ ಸಂದರ್ಭನುಸಾರ ಇತರ ಗ್ರಾಮಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡು ಪ್ರಾಗೈತಿಹಾಸಿಕ ಕಾಲದಿಂದ ಆಧುನಿಕ ಕಾಲದವರೆಗಿನ ವಿವಿಧ ಆಯಾಮಗಳನ್ನು ಚಾರಿತ್ರಿಕ, ಸಾಂಸ್ಕೃತಿಕ ಸಂಗತಿಗಳ ಮುಖೇನ ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ, ಹೊಳಲ್ಕೆರೆ ಪಟ್ಟಣದಲ್ಲಿರುವ ಐತಿಹಾಸಿಕ ಕುರುಹುಗಳು, ಅಲ್ಲಿ ನಂಬಿಕೊಂಡು ಬಂದಿರುವಂತಹ ಐತಿಹ್ಯ, ನಂಬಿಕೆ, ಆಚರಣೆಗಳನ್ನು ಮಾತ್ರ ಅಧ್ಯಯನದ ವ್ಯಾಪ್ತಿಗೆ ಸೇರಿಸಿಕೊಂಡು ಸಂದರ್ಭಕ್ಕನುಸಾರವಾಗಿ ಪಕ್ಕದ ಗ್ರಾಮಗಳನ್ನು ಸೇರಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಅಧ್ಯಯನದ ವಿಧಾನ

ಒಂದು ಕಾರ್ಯ ಯಶಸ್ವಿಯಾಗಬೇಕಾದರೆ ಕ್ರಮಬದ್ಧತೆ ಅತೀ ಮುಖ್ಯ. ಹಾಗಾಗಿ ಸಂಶೋಧನಾ ಕಾರ್ಯಕ್ಕೂ ವ್ಯವಸ್ಥಿತ ಅಧ್ಯಯನ ಬಹಳ ಅವಶ್ಯಕವಾದುದ್ದು. ಅಧ್ಯಯನ ವಿಧಾನವು ವೈಜ್ಞಾನಿಕವಾದ ಮಾರ್ಗ. ಪ್ರಸ್ತುತ ಅಧ್ಯಯನ ವಿಧಾನವು ಬಹುತೇಕ ಕ್ಷೇತ್ರಕಾರ್ಯ ಆಧಾರಿತವಾಗಿದೆ. ಸಂಶೋಧನೆಗಾಗಿ ಹೊಳಲ್ಕೆರೆ ಪಟ್ಟಣವನ್ನು ಆಯ್ದುಕೊಂಡಾಗ ತಾಲೂಕು ಕಛೇರಿಯಲ್ಲಿ ಪಟ್ಟಣದ ಮಾಹಿತಿ, ನಕಾಶೆ, ಇತರೆ ಮಾಹಿತಿಯನ್ನು ಪಡೆದು ಸ್ಮಾರಕ, ದೇವಾಲಯ, ಮೂರ್ತಿಶಿಲ್ಪ, ಶಾಸನ, ಕೆರೆಕಟ್ಟೆ, ಬಾವಿ ಇತ್ಯಾದಿ ವಿವರ ಸಂಗ್ರಹಿಸಿಕೊಂಡು ಈವರೆಗಿನ ಅಧ್ಯಯನಗಳನ್ನು ಗಮನಿಸಿ ಅಧ್ಯಯನ ಮಾಡಲಾಗಿದೆ. ಅಲ್ಲದೆ ಇವುಗಳ ಛಾಯಾಚಿತ್ರಗಳನ್ನು ತೆಗೆದುಕೊಳ್ಳುವುದರ ಜೊತೆಗೆ ಅಗತ್ಯ ನಕ್ಷೆಗಳನ್ನು ರಚಿಸಿಕೊಳ್ಳಲಾಯಿತು. ಕೇವಲ ಪಟ್ಟಣವನ್ನು ಮಾತ್ರ ಕ್ಷೇತ್ರಕಾರ್ಯ ಕೈಗೊಂಡು ಪರಿಸರದಲ್ಲಿ ಇರುವಂತಹ ಕುರುಹುಗಳನ್ನು ಪ್ರಾಗೈತಿಹಾಸಿಕ ಕಾಲದ ಮಾನವ ವಾಸದ ನೆಲೆಗಳನ್ನು ದಾಖಲಿಸಲಾಯಿತು. ಸಾಂಸ್ಕೃತಿಕವಾಗಿ ಇಂದಿಗೂ ನಡೆದುಕೊಂಡು ಬರುತ್ತಿರುವ ಜಾತ್ರೆ-ಉತ್ಸವಗಳಿಗೆ ಭೇಟಿ ನೀಡಿ ಛಾಯಚಿತ್ರ ಸಂಗ್ರಹಿಸಲಾಗಿದೆ. ಹೀಗೆ ಪಟ್ಟಣದ ಪರಿಸರದ ಭೌಗೋಳಿಕ, ಪ್ರಾಗೈತಿಹಾಸಿಕ, ಚಾರಿತ್ರಿಕ, ಪುರಾತತ್ವೀಯ ಸಾಂಸ್ಕೃತಿಕ ಅಂಶಗಳನ್ನು ಕ್ಷೇತ್ರಕಾರ್ಯದ ಮೂಲಕ ದಾಖಲಿಸಿಕೊಳ್ಳಲಾಯಿತು.

ಕ್ಷೇತ್ರ ಕಾರ್ಯದ ಮಾಹಿತಿಯಿಂದ ಸಂಶೋಧನೆ ಪೂರ್ಣವಾಗಲಾರದು. ಇದಕ್ಕೆ ಪೂರಕವಾಗಿ, ಆನುಷಂಗಿಕ (ಸಾಹಿತ್ಯಿಕ ಆಧಾರಗಳೂ) ಆಕರಗಳು ಬೇಕು. ಹಾಗಾಗಿ ಕರ್ನಾಟಕದ ಕೆಲವು ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಿಗೆ ಭೇಟಿ ನೀಡಿ ಆನುಷಂಗಿಕ ಆಕರಗಳನ್ನು ಸಂಗ್ರಹಿಸಿ, ಜೊತೆಗೆ

ವಿದ್ವಾಂಸರ ಭೇಟಿ ನೀಡಿ ಮಾಹಿತಿ ಪಡೆದು ಪ್ರಾಥಮಿಕ ಹಾಗೂ ಆನುಷಂಗಿಕ ದತ್ತಾಂಶಗಳನ್ನು ವಿಮರ್ಶೆಗೆ ಒಳಪಡಿಸಿ ವಿಶ್ಲೇಷಿಸಿ ಕಿರುಪ್ರಬಂಧವನ್ನು ರಚಿಸಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಕಿರುಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಎಂಟು ಅಧ್ಯಾಯಗಳಾಗಿ ವಿಭಾಗಿಸಿಕೊಳ್ಳಲಾಗಿದೆ.

ಮೊದಲನೆಯ ಅಧ್ಯಾಯವು ಪ್ರಸ್ತಾವನೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಮತ್ತು ಸ್ವರೂಪ, ಹಾಗೂ ಸಮೀಕ್ಷೆಗಳನ್ನು ಒಳಗೊಂಡಿದ್ದು ಅಧ್ಯಯನದ ಒಟ್ಟು ರೂಪುರೇಷೆಯನ್ನು ಕುರಿತು ಚರ್ಚಿಸುತ್ತದೆ.

ಎರಡನೆಯ ಅಧ್ಯಾಯವು ಭೌಗೋಳಿಕ ಹಾಗೂ ಚಾರಿತ್ರಿಕ ಹಿನ್ನೆಲೆಯನ್ನು ಒಳಗೊಂಡಿದೆ. ಭೌಗೋಳಿಕ ಹಿನ್ನೆಲೆಯಲ್ಲಿ ಹೊಳಲ್ಕೆರೆ ತಾಲೂಕಿನ ಭೌಗೋಳಿಕ ಪರಿಸರ ವಿಶಿಷ್ಟವಾಗಿದ್ದು ಇದೊಂದು ಅರೆಮಲೆನಾಡಾಗಿದೆ. ಇಲ್ಲಿನ ಭೌಗೋಳಿಕ ಸನ್ನಿವೇಶಗಳು ಚಾರಿತ್ರಿಕ ಚರಿತ್ರೆಯ ನಿರ್ಮಾಣದಲ್ಲಿ ಹೇಗೆ ಪೂರಕವಾಗಿವೆ ಎಂಬ ಅಂಶಗಳನ್ನು ಕುರಿತು ಈ ಅಧ್ಯಯನದಲ್ಲಿ ಸವಿವರವಾಗಿ ಚರ್ಚಿಸಲಾಗಿದೆ. ಈ ಪಟ್ಟಣ ಪರಿಸರದಲ್ಲಿ ಕಂಡುಬಂದಿರುವ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಪಾಂಡ್ಯ, ಸೇವುಣ, ಹೊಯ್ಸಳ, ಕಂಪಿಲದೇವ, ವಿಜಯನಗರ, ಸಂತೆಬೆನ್ನೂರು ನಾಯಕರು, ಪಾಳೆಗಾರರು, ಮೈಸೂರು ಒಡೆಯರು, ಹಾಗೂ ಬಿಜಾಪುರದ ಹಾಗೂ ಮೊಗಲರ ಆಳ್ವಿಕೆ ಒಳಗೊಂಡಂತೆ ಹಲವು ಚಾರಿತ್ರಿಕ ಕುರುಹುಗಳನ್ನು ಚಾರಿತ್ರಿಕ ಹಿನ್ನೆಲೆ ಎಂಬ ಉಪಶೀರ್ಷಿಕೆಯ ಅಡಿಯಲ್ಲಿ ಚರ್ಚಿಸಲಾಗಿದೆ. ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ದಾಖಲೆ, ಶಾಸನ ಹಾಗೂ ಸಮಕಾಲೀನ ಸಾಹಿತ್ಯಿಕ ಆಕರಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಮೂರನೆಯ ಅಧ್ಯಯದಲ್ಲಿ ಶಾಸನಗಳ ಹುಟ್ಟು ಬೆಳವಣಿಗೆ ಮತ್ತು ಪಟ್ಟಣದಲ್ಲಿ ಇದುವರೆಗೆ ದೊರೆತ ಶಾಸನಗಳಿಂದ ಅಲ್ಲಿಯ ಸಂಸ್ಕೃತಿ, ಆಚಾರ-ವಿಚಾರಗಳನ್ನು ಚರ್ಚಿಸಲು ಸಹಾಯಕವಾಗಿದೆ. ಹಾಗೂ ಅಲ್ಲಿಯ ರಾಜಕೀಯ ಇತಿಹಾಸಕ್ಕೆ ತುಂಬ ಸಹಕಾರಿಯಾಗಿದೆ. ಕೆಲವು ಪ್ರಕಟಿತ ಶಾಸನ ಮತ್ತು ಅಪ್ರಕಟಿತ ಶಾಸನಗಳು, ವೀರಗಲ್ಲು ಮತ್ತು ಮಹಾಸತಿಗಲ್ಲುಗಳ ಮೇಲೆ ಶಾಸನ ರಹಿತ ಶಿಲ್ಪಗಳು ಇರುವುದರಿಂದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯದ ಬಗ್ಗೆ ತಿಳಿಯಲು ಸಹಾಯಕವಾಗಿದೆ. ಇದರಲ್ಲೂ ದಾನಶಾಸನ, ವೀರಗಲ್ಲು ಶಾಸನ ಪ್ರಮುಖವಾಗಿವೆ.

ನಾಲ್ಕನೆಯ ಅಧ್ಯಾಯದಲ್ಲಿ ಐತಿಹ್ಯ, ಸ್ಥಳಪುರಾಣ, ಸ್ಥಳನಾಮಗಳನ್ನು ಕುರಿತು ಚರ್ಚಿಸಲಾಗಿದೆ. ಯಾವುದೇ ಪ್ರದೇಶದ ಚರಿತ್ರೆಯನ್ನು ಕುರಿತು ಅಧ್ಯಯನ ಮಾಡುವಾಗ ಅಲ್ಲಿನ ಸ್ಥಳನಾಮ ಕುರಿತು ವಿವೇಚಿಸುವುದು ಅವಶ್ಯಕವಾದುದು. ಇಲ್ಲಿನ ಸ್ಥಳನಾಮ ಸಾಮಾನ್ಯವಾಗಿ ಭೌಗೋಳಿಕ, ನೈಸರ್ಗಿಕ, ಚಾರಿತ್ರಿಕ ಹಾಗೂ ಭಾಷಿಕ ಹಿನ್ನೆಲೆಯಲ್ಲಿ ನಿಷ್ಪತ್ತಿಗೊಂಡಿವೆ. ಭೌಗೋಳಿಕವಾಗಿ ಇಲ್ಲಿ ಬೆಟ್ಟಗುಡ್ಡ

ಕೆರೆಕಟ್ಟೆ ಅರಣ್ಯಪ್ರದೇಶ ಕಂಡುಬಂದಿರುವುದರಿಂದ ಆದಿಮಾನವನ ಪ್ರಾಗೈತಿಹಾಸಿಕ ಕಾಲಘಟ್ಟದಿಂದ ಬೃಹತ್ ಶಿಲಾಯುಗ ಹಾಗೂ ಚಾರಿತ್ರಿಕ ಕಾಲಘಟ್ಟದವರೆಗೆ ಪಾಳೆಯಗಾರರ ಪ್ರಾಚೀನ ಕುರುಹುಗಳನ್ನು ಈ ಭಾಗದಲ್ಲಿ ಗುರುತಿಸಬಹುದಾಗಿದೆ.

ಐದನೆಯ ಅಧ್ಯಯವು ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪವನ್ನು ಕುರಿತಾಗಿದ್ದು ವಾಸ್ತುಶಿಲ್ಪ ಭಾಗದಲ್ಲಿ ದೇವಾಲಯ ಉಗಮ, ವಿಕಾಸದ ಬಗ್ಗೆ ಮತ್ತು ಇಲ್ಲಿಯ ಶೈವ, ವೈಷ್ಣವ, ಶಾಕ್ತ ಹಾಗೂ ಜೈನಬಸದಿ ದೇವಾಲಯಗಳು ಎಂದು ವಿಂಗಡನೆಯೊಂದಿಗೆ ವಿಶ್ಲೇಷಿಸಲಾಗಿದೆ. ಇಲ್ಲಿನ ಶೈವ ದೇವಾಲಯಗಳು, ಹೊಯ್ಸಳ, ಪಾಳೆಯಗಾರರ ಕಾಲಘಟ್ಟದಲ್ಲಿ ಕ್ರಿ.ಶ. ೯–೧೦ನೆಯ ಶತಮಾನದಿಂದ ೧೧–೧೪ನೇ ಶತಮಾನದವರೆಗೆ ಪ್ರಾಬಲ್ಯತೆ ಗಳಿಸಿದ್ದವು. ಶೈವ ದೇವಾಲಯದ ಸಂಸ್ಕೃತಿಯನ್ನು ಇವರು ಪೋಷಿಸಿಕೊಂಡು ಬಂದಂತೆ ವೈಷ್ಣವ ದೇವಾಲಯ ಸಂಸ್ಕೃತಿಯನ್ನು ಸಹ ಕ್ರಿ.ಶ. ೧೪–೧೫ನೆಯ ಶತಮಾನದಿಂದ ೧೭–೨೦ನೆಯ ಶತಮಾನದವರೆಗೆ ಅಂದರೆ ಹೊಯ್ಸಳ ಕಾಲದಿಂದ ವಿಜಯನಗರೋತ್ತರ ಕಾಲದವರೆಗೆ ಕಾಣಬಹುದಾಗಿದೆ. ಪಟ್ಟಣದಲ್ಲಿರುವ ವೇಣುಗೋಪಾಲಸ್ವಾಮಿ ದೇವಾಲಯವು ವೈಷ್ಣವರದ್ದಾಗಿದೆ. ಇಲ್ಲಿ ಶಾಕ್ತ ದೇವಾಲಯಗಳು ಹೆಚ್ಚಾಗಿದ್ದು ಪ್ರಮುಖ ಕುಕ್ಕಾವಡೇಶ್ವರಿ, ಹೊನ್ನಮ್ಮ, ಹೊಳಲಮ್ಮ , ಬಂಡಿಚಿಕ್ಕಮ್ಮ, ಕೊಪ್ಪದಮ್ಮ ಮುಂತಾದವನ್ನು ಗಮನಿಸಬಹುದು. ಈ ದೇವಾಲಯಗಳಲ್ಲಿ ಮೂರ್ತಿಶಿಲ್ಪ ಭಾಗದಲ್ಲಿ ವಿಭಿನ್ನ ರೀತಿಯ ಶಿಲ್ಪಗಳು ಇರುವುದು ಕಂಡುಬಂದಿದ್ದು, ವಿಷ್ಣುಶಿಲ್ಪ ಅನೇಕ ಶಿಲ್ಪಗಳು ಶೈವ, ವೈಷ್ಣವ, ಶಾಕ್ತ, ಜೈನ ಶಿಲ್ಪಗಳು ಹೆಚ್ಚಾಗಿ ಕಂಡುಬಂದಿವೆ.

ಆರನೆಯ ಅಧ್ಯಯದಲ್ಲಿ ಕೆರೆಕಟ್ಟೆಗಳು ಕುರಿತು ವಿವರಿಸಲಾಗಿದೆ. ಪ್ರಮುಖವಾಗಿ ಇಲ್ಲಿ ಪ್ರಾಚೀನ ಕಾಲದಲ್ಲಿ ಮೂರು ಕೆರೆಗಳ ಬಗ್ಗೆ ತಿಳಿಯಬಹುದು. ಅವುಗಳೆಂದರೆ, ಹೊನ್ನೆಕೆರೆ, ಹಿರೇಕೆರೆ, ಕೆಸಕಟ್ಟೆ ಎಂದು. ಈ ಕೆರೆಗಳ ನಿರ್ಮಾಣಕ್ಕೆ ಐತಿಹಾಸಿಕವಾಗಿ ಪುರಾಣ, ಕಥೆ ಕಟ್ಟುಕಥೆಗಳನ್ನು ಹೇಳುತ್ತಾರೆ. ಇದರಿಂದ ಕೆರೆಯ ವಿಸ್ತೀರ್ಣತೆ ಮತ್ತು ಪ್ರಾಚೀನತೆ ಮತ್ತು ಕಲ್ಯಾಣಿಯ ಬಗ್ಗೆ ತಿಳಿಯಲು ಸಹಾಕಾರಿಯಾಗಿದೆ.

ಏಳನೆಯ ಅಧ್ಯಾಯವು ನಂಬಿಕೆ ಮತ್ತು ಆಚರಣೆಯಾಗಿದ್ದು ಪಟ್ಟಣದಲ್ಲಿ ಅನೇಕ ರೀತಿಯ ನಂಬಿಕೆ, ಆಚರಣೆಯನ್ನು ನಡೆಸುತ್ತಿರುವುದು ಕಂಡುಬರುತ್ತದೆ.

ಎಂಟನೆಯ ಅಧ್ಯಾಯವು ಸಮರೋಪವಾಗಿದ್ದು ಇದು ಇಡೀ ಅಧ್ಯಯನದಲ್ಲಿ ಕಂಡುಕೊಂಡ ಒಟ್ಟಾರೆ ಸಂಶೋಧನೆಯ ಫಲಿತಾಂಶಗಳ ಸಂಕ್ಷಿಪ್ತ ರೂಪವನ್ನು ಒಳಗೊಂಡಿದೆ.

ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಂಡ ಕೃತಿ, ಲೇಖನ, ಶಾಸನ ಸಂಪುಟ, ಅಪ್ರಕಟಿತ ಸಂಶೋಧನ ಪ್ರೌಢ ಪ್ರಬಂಧ ಮುಂತಾದ ವಿವರಗಳನ್ನು ಗ್ರಂಥಋಣದಲ್ಲಿ ನೀಡಲಾಗಿದೆ. ಅಧ್ಯಯನಕ್ಕೆ ಸಂಬಂಧಿಸಿದ ಛಾಯಾಚಿತ್ರಗಳು, ಅಗತ್ಯ ನಕ್ಷೆಗಳನ್ನು ಅನುಬಂಧದಲ್ಲಿ ಅಳವಡಿಸಲಾಗಿದೆ.

ಅಧ್ಯಯನಗಳ ಸಮೀಕ್ಷೆ

ಹೊಳಲ್ಕೆರೆ ಪಟ್ಟಣದಲ್ಲಿ ಈವರೆಗೆ ಕೆಲವು ವಿದ್ವಾಂಸರು ಪುರಾತತ್ವ ಸಂಶೋಧನ ಕಾರ್ಯಗಳನ್ನು ಮಾಡಿದ್ದಾರೆ. ಮೊದಲು ಈ ಭಾಗದಲ್ಲಿ ದೊರೆತ ಆಧಾಗಳು ಎಂದರೆ ದೇವಾಲಯಗಳು ಹಾಗೂ ಸಮಕಾಲೀನ ಶಾಸನಗಳು. ಹಾಗಾಗಿ ಇಡೀ ಅಧ್ಯಯನವು ಕ್ಷೇತ್ರಕಾರ್ಯವನ್ನು ಆಧರಿಸಿ ತಯಾರಾಗಿದೆ. ಈ ಭಾಗದ ಶಾಸನಗಳು ಪ್ರಕಟಗೊಂಡಿರುವ ಎಫಿಗ್ರಾಫಿಯ ಕರ್ನಾಟಿಕ ಸಂಪುಟ-೧೧, ಸೌತ್ ಇಂಡಿಯನ್ ಇನ್‌ಸ್ಕ್ರಿಷನ್ಸ್ ಸಂಪುಟ-೯, ಎಫಿಗ್ರಾಫಿಯ ಕರ್ನಾಟಿಕ ಸಂಪುಟ-೭, ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್ಸ್, (೧೯೨೯-೧೯೪೬), ಚಿತ್ರದುರ್ಗ ಜಿಲ್ಲಾ ಗ್ಯಾಜಿಟಿಯರ್, ಹಾಗೂ ಚಿತ್ರದುರ್ಗ ಜಿಲ್ಲಾ ದರ್ಶಿನಿ, ಪ್ರಮುಖ ಆಕರಗಳನ್ನಾಗಿ ಬಳಸಲಾಗಿದೆ.

ಹೊಳಲ್ಕೆರೆ ತಾಲೂಕಿನ ಪ್ರಾಚೀನತೆ, ರಾಜಕೀಯ ಚರಿತ್ರೆ, ಐತಿಹಾಸಿಕ ಸ್ಥಳಗಳ ಪರಿಚಯ ಮತ್ತು ಜನಪದ ಸಾಹಿತ್ಯ ಮುಂತಾದ ವಿಷಯಗಳನ್ನು ಕುರಿತಂತೆ ಕೇವಲ ಕೆಲವು ಅಧ್ಯಯನಗಳು ನಡೆದಿದ್ದು ಕೆಲವು ಬಿಡಿ ಲೇಖನ, ಪರಿಚಯ ಕೈಪಿಡಿ, ಸ್ಮರಣ ಸಂಚಿಕೆಗಳು ಪ್ರಕಟಗೊಂಡಿವೆ.

ಹೊಳಲ್ಕೆರೆ ಪಟ್ಟಣದ ರಾಜಕೀಯ ಚರಿತ್ರೆಗೆ ಸಂಬಂದಿಸಿದಂತೆ ಎಂ.ವಿ. ಶ್ರೀನಿವಾಸ್, ಲಕ್ಷ್ಮಣ್ ತೆಲಗಾವಿ ಅವರು 'ಹುಲ್ಲೂರು ಶ್ರೀನಿವಾಸ ಜೊಯಿಸರ ಸಂಶೋಧನ ಲೇಖನಗಳು' ಸಂಪಾದಿತ ಕೃತಿಯಲ್ಲಿ ಚಾರಿತ್ರಿಕ ಸಂಗತಿಗಳನ್ನು ತಿಳಿಯಲು ಸಹಾಯಕವಾಗಿದೆ. ಎಂ.ಎಂ. ಕಲಬುರ್ಗಿ ಅವರು ಸಂಪಾದಿಸಿರುವ 'ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು ಭಾಗ-೧'ರಲ್ಲಿ ಸ್ಥಳನಾಮದ ರೂಪಾಂತರವನ್ನು ನೀಡುತ್ತವೆ. ರಾಜಶೇಖರಪ್ಪ ಅವರು ತಮ್ಮ ಕೃತಿಗಳಾದ ದುರ್ಗಶೋಧನ, ಇತಿಹಾಸ ಕಥನಗಳಲ್ಲಿ ಪಟ್ಟಣದಲ್ಲಿರುವ ಒಂಟಿ ಕಂಬದ ಮಠ, ಗಣಪತಿ ವಿಗ್ರಹ, ಸ್ಥಳಿಯವಾಗಿ ದೊರೆತಿರುವ ಶಾಸನಗಳ ಕುರಿತು ದಾಖಲಿಸಿದ್ದಾರೆ. ಕೆ.ಬಿ. ಶಿವತಾರಕ್ ಅವರು 'ಕರ್ನಾಟಕ ಪುರಾತತ್ವ ನೆಲೆಗಳ ಶೋಧ' ಎಂಬ ಕೃತಿಯಲ್ಲಿ ಹೊಳಲ್ಕೆರೆ ತಾಲೂಕಿನ ನೆಲೆಯ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ ಬಿ. ಸುರೇಶ್ ಅವರು 'ಚಿತ್ರದುರ್ಗ-ದಾವಣಗೆರೆ ಜಿಲ್ಲೆಯ ದೇವಾಲಯ' ಎಂಬ ಕೃತಿಯಲ್ಲಿ ಹೊಳಲ್ಕೆರೆಯ ಜೈನಶಿಲ್ಪದ ಬಗ್ಗೆ ತಿಳಿಸಿದ್ದಾರೆ. ಟಿ. ಗಿರಿಜ ಅವರು 'ಚಿತ್ರದುರ್ಗ ಜಿಲ್ಲಾದರ್ಶಿನಿ' ಕೃತಿಯು ಹೊಳಲ್ಕೆರೆ ತಾಲೂಕಿನ ಗ್ರಾಮವಾರು ಮಾಹಿತಿಯನ್ನು ನೀಡುತ್ತದೆ.

ಎಂ.ವಿ. ವಸು ಅವರು 'ದಕ್ಷಿಣ ಕರ್ನಾಟಕದ ಅರಸು ಮನೆತನಗಳು' ಎಂಬ ಸಂಪಾದಿತ ಕೃತಿಯಲ್ಲಿ ಹೊಳಲ್ಕೆರೆ ಪಟ್ಟಣದಲ್ಲಿ ಆಳ್ವಿಕೆ ಮಾಡಿದ ಅರಸರುಗಳ ಬಗ್ಗೆ ವಿವರಿಸಿದ್ದಾರೆ. ಆರ್. ಗೋಪಾಲ್ ಅವರು 'ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ' ಎಂಬ ಸಂಪಾದಿತ ಕೃತಿಯಲ್ಲಿ ಬಿ.ಆರ್. ಭಾರತಿ ಅವರು 'ಜಿಲ್ಲೆಯಲ್ಲಿ ದೊರೆತ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟರ ಶಾಸನಗಳನ್ನು' ಕುರಿತು ಚರ್ಚಿಸಿದ್ದಾರೆ. ಟಿ.ಎಂ. ಮಂಜುನಾಥಯ್ಯ ಅವರು 'ಕಂಪಿಲದೇವನ ಆಳ್ವಿಕೆಯನ್ನು' ಚರ್ಚಿಸಿದ್ದಾರೆ. ಕೂ.ಸ. ಅಪರ್ಣ ಅವರು 'ದೇವಾಲಯ ಮತ್ತು ವಾಸ್ತುಶಿಲ್ಪ' ಎಂಬ ತಮ್ಮ ಕೃತಿಯಲ್ಲಿ ಹೊಳಲ್ಕೆರೆ ಪಟ್ಟಣ ದೇವಾಲಯ ಬಗ್ಗೆ ಚರ್ಚಿಸಿದ್ದಾರೆ. ವಿ. ಅನುರಾಧ ಅವರು 'ಮೂರ್ತಿಶಿಲ್ಪ ಮತ್ತು ಶಿಲ್ಪಕಲೆಯ' ಬಗ್ಗೆ ಹೇಳಿದ್ದಾರೆ.

ಲಕ್ಷ್ಮಣ್ ತೆಲಗಾವಿ, ಎಂ.ವಿ. ಶ್ರೀನಿವಾಸ ಅವರು ಸಂಪಾದಿಸಿದ ಕೃತಿ 'ಚಂದ್ರವಳ್ಳಿ'ಯಲ್ಲಿ ಹೊಳಲ್ಕೆರೆಯ ರಾಜಕೀಯ ಚರಿತ್ರೆ ಮತ್ತು ಶಾಸನಗಳ ಕುರಿತಾಗಿನ ಲೇಖನಗಳಿವೆ. ಇದೇ ಕೃತಿಯ ಸಿ.ಕೆ.ವೈ. ದೀಕ್ಷಿತ್ ಅವರು ಚಾಲುಕ್ಯರ ಆಳ್ವಿಕೆ ಬಗ್ಗೆ ಚರ್ಚಿಸಿದ್ದಾರೆ. ರಾಷ್ಟ್ರಕೂಟರ ಶಾಸನಗಳ ಬಗ್ಗೆ ಸೀತರಾಮ್ ಜಾಗೀರ್‌ದಾರ್ ಅವರು ಲೇಖನಗಳ ಮುಖೇನ ಪರಿಚಯಿಸಿದ್ದಾರೆ. ಸಿ.ಎಸ್. ಬಸವಲಿಂಗಪ್ಪ 'ಚಿತ್ರದುರ್ಗ ಜಿಲ್ಲೆಯಲ್ಲಿ ನೊಳಂಬರ ಆಳ್ವಿಕೆಯನ್ನು' ಕುರಿತು ಚರ್ಚಿಸಿದ್ದಾರೆ. ಹಾಗೂ ಶ್ರೀ ಲತೆ ಅವರು ಹೊಯ್ಸಳರ ರಾಜಕೀಯತೆಯ ಬಗ್ಗೆ ಹೇಳಿದ್ದಾರೆ. ಲಕ್ಷ್ಮಣ್ ತೆಲಗಾವಿ, ಎಂ.ವಿ. ಶ್ರೀನಿವಾಸ ಅವರ ಸಂಪಾದಿತ 'ದುರ್ಗಸಿರಿ' ಕೃತಿಯಲ್ಲಿ ಹೊಳಲ್ಕೆರೆಯ ಪಟ್ಟಣದ ಬಗ್ಗೆ ರಾಜಕೀಯ ಚರಿತ್ರೆ, ಸ್ಥಳಪುರಾಣ, ಐತಿಹ್ಯಗಳ ಕುರಿತಂತೆ ಕೆಲವು ಲೇಖನಗಳಿವೆ. ಎನ್.ಎಸ್. ಮಹಂತೇಶ್ ಅವರು ಇತಿಹಾಸ ದರ್ಶನ ಸಂಪುಟ–೨೭ರಲ್ಲಿ ಹೊಳಲ್ಕೆರೆ ತಾಲೂಕಿನ 'ಬೃಹತ್ ಶಿಲಾಯುಗದ ನೆಲೆಗಳ ಶೋಧ' ಎಂಬ ಲೇಖನ ಪ್ರಕಟಿಸಿದ್ದಾರೆ. ಬಿ.ಎಸ್. ಶ್ರೀನಿವಾಸ ನಾಯಕ ಅವರು 'ಚಿತ್ರದುರ್ಗ ಕಾಮಗೇತಿ ಅರಸರು' ಬಗ್ಗೆ ತಿಳಿಸಿದ್ದಾರೆ. ಮೀರಾಸಾಬಿಹಳ್ಳಿ ಶಿವಣ್ಣನವರು ಬುಕ್ಯಾನನ್ ಕಂಡ ಚಿತ್ರದುರ್ಗ ಜಿಲ್ಲೆ ಬಗ್ಗೆ ತಿಳಿಸಿದ್ದಾರೆ.

ಇದುವರೆಗಿನ ಅಧ್ಯಯನಗಳನ್ನು ಗಮನಿಸಿದರೆ ಹೊಳಲ್ಕೆರೆ ತಾಲೂಕಿನ ರಾಜಕೀಯ ಚರಿತ್ರೆ, ಜನಪದ ಆಚರಣೆ, ಐತಿಹಾಸಿಕ ಸ್ಥಳದ ಪರಿಚಯಾತ್ಮಕ ಅಧ್ಯಯನಗಳು ನಡೆದಿವೆಯೇ ಹೊರತು ಇಡೀ ಹೊಳಲ್ಕೆರೆಯ ಪಟ್ಟಣ ಪರಿಸರದ ವ್ಯವಸ್ಥಿತವಾದ ಚಾರಿತ್ರಿಕ ಅಧ್ಯಯನ ನಡೆದಿಲ್ಲವೆಂದೆ ಹೇಳಬಹುದು. ಆದುದರಿಂದ ಪ್ರಸ್ತುತ ಅಧ್ಯಯನದ ಮುಖೇನ ಹೊಳಲ್ಕೆರೆ ಪಟ್ಟಣದ ಚಾರಿತ್ರಿಕ ಸಾಂಸ್ಕೃತಿಕ ಸಂಗತಿಗಳನ್ನು ವ್ಯವಸ್ಥಿತವಾಗಿ ಕಟ್ಟಿಕೊಡುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಅಧ್ಯಾಯ ಎರಡು

ಭೌಗೋಳಿಕ ಹಿನ್ನೆಲೆ ಮತ್ತು ಚಾರಿತ್ರಿಕ ಹಿನ್ನೆಲೆ

ಭೌಗೋಳಿಕ ಹಿನ್ನೆಲೆ

ಹೊಳಲ್ಕೆರೆ ಪಟ್ಟಣವು ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆಯಲ್ಲಿರುವ ಒಂದು ತಾಲೂಕು ಕೇಂದ್ರ. ಇದರ ಉತ್ತರದಲ್ಲಿ ದಾವಣಗೆರೆ, ಚಿತ್ರದುರ್ಗ, ಪೂರ್ವದಲ್ಲಿ ಹಿರಿಯೂರು, ದಕ್ಷಿಣದಲ್ಲಿ ಹೊಸದುರ್ಗ, ನೈರುತ್ಯದಲ್ಲಿ ತರೀಕೆರೆ, ಪಶ್ಚಿಮದಲ್ಲಿ ಚನ್ನಗಿರಿ, ತಾಲೂಕುಗಳಿಂದ ಸುತ್ತುವರೆದಿದೆ. ತಾಲೂಕಿನ ವಿಸ್ತೀರ್ಣ ೧,೯೭೭.೪ ಚ.ಕಿ.ಮೀ. ದಕ್ಷಿಣದಿಂದ ಉತ್ತರದ ಅರಸನಘಟ್ಟದವರೆಗೆ ಬೆಟ್ಟಶ್ರೇಣಿ ಹಾದುಹೋಗಿದ್ದು, ಈ ಶ್ರೇಣಿಯಲ್ಲಿನ ಒಂದು ಕವಲು ಪಶ್ಚಿಮದಲ್ಲಿ ರಾಮಗಿರಿಯವರೆಗೂ ಹಬ್ಬಿದೆ. ರಾಮಗಿರಿ, ಗುಂಡೇರಿ, ಶಿವಗಂಗ, ದೇವರಗುಡ್ಡ ಮುಂತಾದ ಕಡೆ ಬೆಟ್ಟಗುಡ್ಡಗಳಿವೆ. ಇವುಗಳಲ್ಲಿ ಮುಖ್ಯವಾದವು ದೇವರಗುಡ್ಡ ಅರಣ್ಯದಲ್ಲಿರುವ ದೊಡ್ಡ ಹೊಟ್ಟೆರಂಗಪ್ಪನಗುಡ್ಡ (ದೊ.ಹೊ.ರಂಗಪ್ಪನಗುಡ್ಡ ೩೭೧೫ ಅಡಿ) ಮತ್ತು ಜಾನಕಲ್ಲಿನ ವಡೇರಗುಡ್ಡಗಳನ್ನು (ವೇಡರಗುಡ್ಡ ೩೧೩೮ ಅಡಿ ಎತ್ತರವಾಗಿದೆ) ಹೆಸರಿಸಬಹುದು. ತಾಲೂಕಿನಲ್ಲಿ ಸರಾಸರಿ ವಾರ್ಷಿಕ ಮಳೆ ೬೪೦.೧೬ ಮಿ.ಮಿ. ೮,೯೧೬ ಹೆಕ್ಟೆರ್ ಅರಣ್ಯ ಪ್ರದೇಶವನ್ನು ಹೊಂದಿದೆ.

ಹೊಳಲ್ಕೆರೆಯ ಪಶ್ಚಿಮದ ಬೆಟ್ಟಗಳಲ್ಲಿ ಸ್ಯಾಗಲೆಹಳ್ಳ (ಸ್ಯಾಗಲ ತೊರೆ) ಹುಟ್ಟಿ, ಚಿತ್ರದುರ್ಗ ಜಿಲ್ಲೆಯಲ್ಲಿ ೭೨ ಕಿ.ಮಿ. ಹರಿದು ತುಂಗಭದ್ರಾ ನದಿಯನ್ನು ಸೇರುತ್ತದೆ. ತಾಲೂಕಿನಾದ್ಯಂತ ಅನೇಕ ಕೆರೆಕಟ್ಟೆ ಹಾಗೂ ಬಾವಿಗಳಿದ್ದು ನೀರಾವರಿಗೆ ಅನುಕೂಲಕರವಾಗಿದೆ. ಹೊಳಲ್ಕೆರೆ ತಾಲೂಕು ನಾಲ್ಕು ಹೋಬಳಿ ಕೇಂದ್ರಗಳನ್ನು (ಕಸಬಾ, ತಾಳ್ಯ, ರಾಮಗಿರಿ, ಭರಮಣ್ಣನಾಯ್ಕನದುರ್ಗ) ಹೊಂದಿದೆ. ಹಾಗೂ ೧೯೭೧ರ ಲೆಕ್ಕದ ಪ್ರಕಾರ ತಾಲೂಕಿನಲ್ಲಿ ೨೦೧ ಗ್ರಾಮಗಳಿವೆ. (ಇದರಲ್ಲಿ ಹಟ್ಟಿ ಮುಂತಾದವುಗಳು ಸೇರಿಲ್ಲ, ಆದರೆ ಕಾವಲುಗಳು, ಬೇಚಿರಾಕ್ ಗ್ರಾಮಗಳು ಸೇರಿವೆ[೧].

ಇದೊಂದು ಅರೆಮಾಲೆನಾಡು ಎಂದು ಹೆಸರು ಪಡೆದಿದೆ. ಇಲ್ಲಿ ಅಡಿಕೆ, ತೆಂಗು, ಮೆಕ್ಕೆಜೋಳಗಳನ್ನು ವಾಣಿಜ್ಯ ಬೆಳೆಗಳಾಗಿ ಬೆಳೆಯುತ್ತಾರೆ. ಈ ಭಾಗದಲ್ಲಿ ಹುಣಸೆ, ಮಾವು, ಹಿಪ್ಪೆಮರ, ಜಾಲಿ ಜಾತಿಯ ಗಿಡಮರಗಳು ಹಾಗೂ ವಿವಿಧ ಪಕ್ಷಿ, ಪ್ರಾಣಿಗಳಾದ ಚಿರತೆ, ಕತ್ತೆಕಿರುಬ, ಕರಡಿ, ಕಾಡುಹಂದಿ ಹುಲಿ, ಜಿಂಕೆ, ನಾಗರಹಾವು, ಮಂಡಲದ ಹಾವು, ಮಂಡರಗಪ್ಪೆ, ಚೇಳುಗಳಿವೆ. ಕಾಡುಕಾಗೆ, ಮೈನ ಮರಕುಟಿಗ ಕಾಡುಪಾರಿವಾಳ, ಕಾಡುಕೋಳಿ, ಕವುಜುಗ, ನೀರುಕೋಳಿ, ಕೋಗಿಲೆ, ಮೊದಲಾದ ಪಕ್ಷಿಗಳನ್ನು ಕಾಣಬಹುದಾಗಿದೆ.

ಕ್ರಿ.ಶ. ೧೯೮೧ರ ಜನಗಣತಿಯ ಪ್ರಕಾರ ತಾಲೂಕಿನಲ್ಲಿ ಜನಸಂಖ್ಯೆ ೧,೫೭,೮೧೭.೪. ೨೦೧೧ರ ವರದಿಯ ಪ್ರಕಾರ ೨,೦೭೨೬೦, ಪುರುಷರು ೧,೦೪,೯೨ ಮಹಿಳೆಯರು ೧,೦೨,೨೬೮. ಸಾಕ್ಷರತೆಯ ಪ್ರಮಾಣ ೧,೪೧,೦೦೪, ಅನಕ್ಷರತೆಯ ಪ್ರಮಾಣ ೬೬,೨೫೬, ಹೊಳಲ್ಕೆರೆ ಪಟ್ಟಣವು ಪಟ್ಟಣ ಪಂಚಾಯಿತಿಯಾಗಿದ್ದು ೧೫ ವಾರ್ಡಗಳಿವೆ. ೨೦೧೧ರ ವರದಿಯಂತೆ ಒಟ್ಟು ಪುರುಷರ ಜನಸಂಖ್ಯೆ ೧೫,೭೮೩. ೮,೦೦೪ ಮಹಿಳೆಯರು ೭,೭೭೯, ಮಕ್ಕಳು. ೨೦೧೩ರ ಚುನಾಯಿತ ಪ್ರತಿನಿದಿಗಳು ೬ ಜನ ಮಹಿಳೆಯರು ೭ ಜನ ಪುರುಷರಿದ್ದಾರೆ.

ಚಾರಿತ್ರಿಕ ಹಿನ್ನೆಲೆ

ಹೊಳಲ್ಕೆರೆ ಪರಿಸರದಲ್ಲಿ ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯ, ಪಾಂಡ್ಯ, ಸೇವುಣ, ಹೊಯ್ಸಳ, ಕಂಪಿಲದೇವ, ವಿಜಯನಗರ, ಪಾಳೆಗಾರರು, ಸಂತೆಬೆನ್ನೂರು ನಾಯಕರು, ಮೈಸೂರು ಒಡೆಯರು, ಬಿಜಾಪುರದ ಮೊಗಲ ಅರಸರ ಚಾರಿತ್ರಿಕ ಕುರುಹುಗಳು ಕಂಡುಬರುತ್ತವೆ. ಹೀಗಿದ್ದು ಶಿಲಾಯುಗ ಕಾಲದಿಂದಲೂ ಮಾನವನಿಗೆ ವಾಸಸ್ಥಾನವಾಗಿತ್ತೆಂಬುದಕ್ಕೆ ತಾಲೂಕಿನಾದ್ಯಂತ ಇದುವರೆಗೂ ಪತ್ತೆಯಾಗಿರುವ ಪ್ರಮುಖ ಪ್ರಾಗ್ಯೈತಿಹಾಸಿಕ, ನೆಲೆಗಳೆ ಪಟ್ಟಣದ ಪ್ರಾಚೀನತೆಯನ್ನು ತಿಳಿಸುತ್ತವೆ.

ಹೊಳಲ್ಕೆರೆ ತಾಲೂಕು ಪರಿಸರದ ಪ್ರಾಗ್ಯೈತಿಹಾಸಿಕ ನೆಲೆಗಳನ್ನು ಗಮನಿಸಿದಾಗ ಆದಿಹಳೆಶಿಲಾಯುಗ ಸಂಸ್ಕೃತಿಯ ಕುರುಹುಗಳು ಗೋಚರಿಸಿವೆ. ಮುಖ್ಯವಾಗಿ ತಾಳ್ಯದಲ್ಲಿ ರಾಬರ್ಟ ಬ್ರೂಸ್‌ಪೂಟ್ ಅವರು ಹಳೆಶಿಲಾಯುಗದ ಮೂರು ಆಯುಧಗಳನ್ನು ಪತ್ತೆಹಚ್ಚಿದ್ದಾರೆ.[೨] ನೂತನ ಶಿಲಾಯುಗ ಸಂಸ್ಕೃತಿ ಸಂಬಧಿಸಿದ ಹಾಗೆ ಹೊಳಲ್ಕೆರೆ ತಾಲೂಕಿನ ಗಂಜಿಗುಂಟೆ, ತಾಳ್ಯ, ನಂದನಹೊಸೂರು ಒಳಗೊಂಡಂತೆ ಹಲವು ಭಾಗಗಳಲ್ಲಿ ಬೃಹತ್ ಶಿಲಾಗೋರಿಗಳು ಪತ್ತೆಯಾಗಿವೆ.[೩] ಮಹಾಂತೇಶ್ ಅವರು ಇತ್ತಿಚೆಗೆ ಸಿರಾಪ್ಪನಹಳ್ಳಿ, ಗೂಳಿಹೊಸಹಳ್ಳಿ, ಹಳೆಹಳ್ಳಿ, ಲಂಬಾಣಿಹಟ್ಟಿ, ಹುಲಿಕೆರೆ[೪] ಎಂಬ ಗ್ರಾಮಗಳಲ್ಲಿ ಬೃಹತ್ ಶಿಲಾಯುಗದ ನೆಲೆಗಳನ್ನು ಪತ್ತೆಹಚ್ಚಿದ್ದಾರೆ.

ಪಟ್ಟಣದ ಇತಿಹಾಸ

ಹೊಳಲ್ಕೆರೆ ಪಟ್ಟಣದಲ್ಲಿ ಕ್ರಿ.ಶ. ೩ನೆಯ ಶತಮಾನದಿಂದ ಕ್ರಿ.ಶ.೧೫-೧೬ನೆಯ ಶತಮಾನದ ವರೆಗೂ ಕದಂಬರಾಧಿಯಾಗಿ ಸೇವುಣ, ನೊಳಂಬ, ಪಾಂಡ್ಯ, ಹೊಯ್ಸಳ, ವಿಜಯನಗರ, ಪಾಳೆಗಾರರ ಕಾಲದವರೆಗೂ ವಿವಿಧ ಅರಸೊತ್ತಿಗೆಗಳ ಅರಸರು ದಂಡನಾಯಕರು ಆಳ್ವಿಕೆ ಮಾಡಿದ್ದಾರೆ. ಪಾಂಡ್ಯರ ನಂತರ ಬಂದಂತಹ ಹೊಯ್ಸಳರು ಈ ಪ್ರದೇಶವನ್ನು ಪಾಂಡ್ಯನಾಡೆಂದು ಕರೆದರು. ಕ್ರಿ.ಶ. ೧೫೫೪ರಲ್ಲಿ ವಿಜಯನಗರದ ಅರಸರಿಂದ ಚಿತ್ರದುರ್ಗದ ಪಾಳೆಯಗಾರ ಮತ್ತಿತಿಮ್ಮಣ್ಣನಾಯಕನಿಗೆ ಅಮರಮಾಗಣಿ ದೊರೆತಿದ್ದು ಮುಂದೆ ಆತ ತನ್ನ ಮೈದುನ ಗುಲ್ಲೆಪ್ಪನಾಯಕನಿಗೆ ಈ ಪ್ರದೇಶದ ಆಡಳಿತ ವಹಿಸಿದ. ಪಾಳೆಯಗಾರರ ಅವನತಿಯ ನಂತರ ಹೈದರ್-ಟಿಪ್ಪು ಸುಲ್ತಾನರು, ಮೈಸೂರು ಒಡೆಯರು, ಬ್ರಿಟಿಷರು ಆಳ್ವಿಕೆ ಮಾಡಿದರು ಪ್ರಸ್ತುತ ಈಗ ದಾವಣಗೆರೆ ಉಪ ವಿಭಾಗಕ್ಕೆ ಸೇರಿದೆ.[೫]

ರಾಷ್ಟ್ರಕೂಟರು

ಕನ್ನಡನಾಡನ್ನು ಆಳ್ವಿಕೆ ಮಾಡಿದ ಅರಸು ಮನೆತನಗಳಲ್ಲಿ ರಾಷ್ಟ್ರಕೂಟರು ಪ್ರಮುಖರು ಮಾನ್ಯಖೇಟ ಅಥವಾ ಮಾಳಖೇಡ ರಾಷ್ಟ್ರಕೂಟರ ರಾಜಧಾನಿಯಾಗಿತ್ತು. ಇವರು ಗಂಗ ಹಾಗೂ ಚೋಳರೊಂದಿಗೆ ವೈವಾಹಿಕ ಸಂಬಂಧಗಳನ್ನು ಹೊಂದಿದ್ದು ಕರ್ನಾಟಕದ ಸಂಸ್ಕೃತಿಗೆ ಪ್ರಮುಖ ಕೊಡುಗೆಗಳನ್ನು ನೀಡಿದ್ದಾರೆ.

ಹೊಳಲ್ಕೆರೆ ತಾಲೂಕಿನಲ್ಲಿ ಇವರ ಶಾಸನಗಳು ಬಹುಸಂಖ್ಯೆಯಲ್ಲಿ ದೊರಕಿವೆ. ಈ ಪ್ರದೇಶ ನೇರ ಆಳ್ವಿಕೆಗೆ ಒಳಪಟ್ಟಿರುವುದು ಇಲ್ಲಿನ ಶಾಸನಗಳಿಂದ ತಿಳಿಯುತ್ತದೆ. ಅವರ ಶಾಸನಗಳು ಎಫಿಗ್ರಾಫಿಯ ಕರ್ನಾಟಿಕ ಸಂಪುಟ–೧೧ರಲ್ಲಿ ಪ್ರಕಟಗೊಂಡಿವೆ. ಪ್ರಮುಖವಾಗಿ ಚಿಕ್ಕಜಾಜೂರು ಶಾಸನವು ತುರುಗೋಳಿನಲ್ಲಿ ವೀರನೊಬ್ಬ ಸತ್ತಿದ್ದನ್ನು ದಾಖಲಿಸುತ್ತದೆ.[೬]

ಕ್ರಿ.ಶ. ೯೬೪ರ ಆಡನೂರು ಶಾಸನದಲ್ಲಿ ಏಳುಗ್ರಾಮಗಳ ಗೌಡಿಕೆಯನ್ನು ಆಳ್ವಿಕೆ ಮಾಡುತ್ತಿರುವುದು ಹಾಗು ತೋಟ, ಭೂಮಿ ಉಂಬಳಿಯಾಗಿ ಬಿಟ್ಟಿರುವುದು ತಿಳಿಸುತ್ತದೆ.[೭] ಮತ್ತೊಂದು ಶಾಸನ ಕ್ರಿ.ಶ. ೯೬೨ರ ಚಿಕ್ಕಜಾಜೂರು ಶಾಸನದಲ್ಲಿ ಜಾಜೂರನ್ನು ಜಾತಿಲೂರು ಎಂಬ ಉಲ್ಲೇಖವಿದೆ.[೮] ಕಾಲದ ಉಲ್ಲೇಖವಿಲ್ಲದ ಮೂರನೆಯ ಕೃಷ್ಣನ ಹೆಬ್ಬಳಿ ಶಾಸನದಲ್ಲಿ ಮಾರಸಿಂಗ ಪೆರ್ಮಾಡಿಯ ಗಂಗವಾಡಿ ೯೬,೦೦೦ ಆಳುತ್ತಿದ್ದನೆಂಬ ಉಲ್ಲೇಖವಿದೆ.[೯] ೩ನೆಯ ಕೃಷ್ಣನ ಸಾಮಂತನಾಗಿ ಆತನ ಪಾದಪದ್ಮೋಪಜೀವಿಯಾಗಿ ಬಾಳಿದುದು ಹೊಳಲ್ಕೆರೆಯ ಶಾಸನವೊಂದರಿಂದ ಸ್ಪಷ್ಟವಾಗಿದೆ. ಈತ ೩ನೆಯ ಕೃಷ್ಣನ ತಂದೆಯ ಕಾಲದಿಂದಲೂ ಕದಂಬಳಿಗೆ–೧೦೦೦ವನ್ನು ಆಳುತ್ತಿದ್ದನ್ನು ಎಂದು ಶಾಸನಗಳಲ್ಲಿ ಸ್ಪಷ್ಟವಾಗಿ ತಿಳಿದುಬಂದಿದೆ.[೧೦] ಇವರ ಕಾಲದ ಈ ಪ್ರದೇಶವನ್ನು ಕದಂಬಳಿಗೆ ೧೦೦೦ ಎನ್ನುವ ಆಡಳಿತ ವಿಭಾಗದ ಹೆಸರಿನಿಂದ ಕರೆಯಲಾಗುತ್ತಿತ್ತು.

ಕಲ್ಯಾಣ ಚಾಲುಕ್ಯರು

ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಆರಂಭದ ದಿನಗಳನ್ನು ಪರಿಚಯಿಸಿಕೊಳ್ಳಲು ಹೊಳಲ್ಕೆರೆ ಪಟ್ಟಣದ ಪರಿಸರದಲ್ಲಿ ದೊರೆತಿರುವ ಶಾಸನಗಳು ಬಹುಮುಖ್ಯ ಆಕರಗಳಾಗಿವೆ. ಕ್ರಿ.ಶ. ೧೦೯೩ರ ವೇಳೆಗೆ ಈ ಭಾಗದಲ್ಲಿ ನೊಳಂಬ ಪಲ್ಲವರ ಅಧಿಕಾರವು ದುರ್ಬಲವಾಗಿದ್ದಂತೆ ತೋರುತ್ತದೆ. ಶಾಸನದಲ್ಲಿ ಪೊಳಲಕೆರೆ ಎಂದು ಸಂಬೋಧಿತವಾಗಿರುವ ಹೊಳಲ್ಕೆರೆಯ ಶಾಸನವೊಂದರಲ್ಲಿ[೧೧] ತಿಳಿದುಬರುವುದು. ತ್ರಿಭುವನಮಲ್ಲ ರಾಜ್ಯವನ್ನು ಹೆಸರಿಸಿ ಮಹಾಸಾಮಂತ ದಾಕರಸ ಎಂಬ ಹೆರ್ಜುಂಕದ ಅಧಿಕಾರಿಯು ನೀಡಿದ ದಾನವನ್ನು ದಾಖಲಿಸಲಾಗಿದೆ. ಅಲ್ಲಿಯ ಇನೊಂದು ಶಾಸನವೂ ಕ್ರಿ.ಶ. ೧೧೦೦ರಲ್ಲಿ ಮಾರನಾಯಕ ಎನ್ನುವ ಒಬ್ಬ ಅಧಿಕಾರಿಯನ್ನು ಹೆಸರಿಸಿದೆ.[೧೨] ಹೊಳಲ್ಕೆರೆ ಕ್ರಿ.ಶ. ೧೧೫೪ರ ಶಾಸನ[೧೩] ಪಟ್ಟಣದ ಶಾಂತಿನಾಥ ಬಸದಿಯ ಜೀರ್ಣೋದ್ಧಾರ, ಅಲ್ಲಿಯ ಗುರುಗಳ ಅಮೃತಪಡಿ ಮತ್ತು ಆಹಾರ ದಾನದತ್ತಿಯನ್ನು ಉಲ್ಲೇಖಿಸುತ್ತದೆ.

ಈ ರೀತಿಯಾಗಿ ಕಲ್ಯಾಣ ಚಾಲುಕ್ಯರು ಹೊಳಲ್ಕೆರೆ ಪಟ್ಟಣದಲ್ಲಿ ಆಳ್ವಿಕೆ ನಡೆಸಿ ಮತ್ತು ಬಸದಿಯ ಜೀರ್ಣೋದ್ಧಾರ ಮಾಡಿ, ಅದರ ದಾನ ದತ್ತಿಯ ವಿವರವನ್ನು ಶಾಸನದಲ್ಲಿ ತಿಳಿಸಲಾಗಿದೆ. ಆದರೆ ಪಟ್ಟಣದಲ್ಲಿ ಇವರು ಆಳ್ವಿಕೆ ನಡೆಸಿದ ಆರನೆಯ ವಿಕ್ರಮಾದಿತ್ಯನ ಶಾಸನ ಮತ್ತು ೩ನೆಯ ಸೋಮೇಶ್ವರನ ಒಂದು ಶಾಸನ ದಾವಣಗೆರೆ ತಾಲೂಕಿನ ಅಧಿಕಾರಿ ವೀರಪಾಂಡ್ಯನನ್ನು ಉಲ್ಲೇಖಿಸುತ್ತದೆ. ಅನೇಕ ಶಾಸನಗಳು ಪ್ರಸ್ತುತ ಪ್ರದೇಶದಲ್ಲಿ ದೊರೆತು ಅವರ ಸಾಮಂತರಾಗಿ ಪಾಂಡ್ಯರು ಈ ಭಾಗದಲ್ಲಿ ಆಳ್ವಿಕೆ ನಡೆಸಿದ್ದಾರೆ.

ಪಾಂಡ್ಯರು

ಉಚ್ಚಂಗಿ ಪಾಂಡ್ಯರ ಶಾಸನಗಳು ಈ ಪರಿಸರದಲ್ಲಿ ಸುಮಾರು ೪೨ಕ್ಕೂ ಹೆಚ್ಚು ದೊರೆತಿವೆ. ಈ ಶಾಸನಗಳು ಅವರನ್ನು ಕಲ್ಯಾಣ ಚಾಲುಕ್ಯರ ಸಾಮಂತರಷ್ಟೇ ಅಲ್ಲದೆ ಅವರ ಸಾಧನೆ ಹಾಗೂ ಸಾಹಸಮಯವಾದ ವಿಷಯಗಳನ್ನು ಒಳಗೊಂಡಿವೆ. ಇವರು ಕ್ರಿ.ಶ. ೧೧ನೆಯ ಶತಮಾನದಿಂದ ಕ್ರಿ.ಶ. ೧೩ನೆಯ ಶತಮಾನದವರೆಗೆ ಆಳುತ್ತಿದ್ದರೆಂಬ ಅಂಶ ಸ್ಪಷ್ಟವಾಗಿದೆ.

ಇವರು ಉಚ್ಚಂಗಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಉಚ್ಚಂಗಿ ಪಾಂಡ್ಯರ ತ್ರಿಭುವನಮಲ್ಲ ಪಾಂಡ್ಯನನ್ನು ಇರುಕ್ಕವೇಲ ಎಂದು ಕರೆಯುತ್ತಿದ್ದರು. ಇವನು ಪಾಂಡ್ಯ ಸಿಂಹಾಸನವನ್ನು ಏರಿದ ವಿಷಯ ಕ್ರಿ.ಶ. ೧೦೮೩ರಲ್ಲಿ ಚನ್ನಗಿರಿ ಶಾಸನ ತ್ರಿಭುವನ ಮಲ್ಲನ ಅನೇಕ ಸಾಹಸಮಯ ಕಾರ್ಯದ ಬಗ್ಗೆ ಉಕ್ತವಾಗಿದೆ. ಎರಡನೆಯ ಶಾಸನವು ಪ್ರಥಮ ಬಾರಿಗೆ ಉಚ್ಚಂಗಿ ಪಾಂಡ್ಯನು ಬೆಲೂರನ್ನು ತನ್ನ ಸ್ಥಾಯಿ ರಾಜಧಾನಿಯಾಗಿ ಮಾಡಿಕೊಂಡಿರುವುದು, ಅದು ನೊಳಂಬವಾಡಿ ೩೨,೦೦೦ದಿಂದ ಆಳುತ್ತಿದ್ದನೆಂದು ಹೇಳುತ್ತದೆ. ಹೊಳಲ್ಕೆರೆ ತಾಲೂಕಿನ ಗುಂಜಿನಗನೂರು ಗ್ರಾಮದಲ್ಲಿ ಕ್ರಿ.ಶ. ೧೧೨೭ರ ತ್ರಿಭುವನಮಲ್ಲ ಪಾಂಡ್ಯನನ್ನು ಕುರಿತು ದಾಖಲಿಸಿದೆ.[೧೪]

ಪಾಂಡ್ಯರು ತಮಿಳುನಾಡಿನ ಮೂಲದವರಾಗಿದ್ದು. ಹೊಳಲ್ಕೆರೆ ತಾಲೂಕಿನಲ್ಲಿ ಆಳ್ವಿಕೆಯನ್ನು ನಡೆಸಿ ಅನೇಕ ಬಿರುದುಗಳನ್ನು ಧರಿಸಿರುವುದು ಇಲ್ಲಿ ಸಿಕ್ಕಿರುವ ಶಾಸನದಿಂದ ತಿಳಿಯುತ್ತದೆ. ತ್ರಿಭುವನಮಲ್ಲನ ಕೊನೆ ಆಳ್ವಿಕೆಯ ಘಟ್ಟ ಎಂಬುದು ಈ ಪರಿಸರದ ಶಾಸನಗಳಿಂದ ತಿಳಿದುಬರುತ್ತದೆ. ಇವರು ಇಲ್ಲಿ ಆಡಳಿತ ನಡೆಸಿದ್ದು ಅಲ್ಪಕಾಲವೆ ಆಗಲಿ ಹೊಳಲ್ಕೆರೆ ಪಾಂತ್ಯಕ್ಕೆ ಅವಿಸ್ಮಾರಣಿಯರಾಗಿದ್ದರೆ.

ಸೇವುಣರು

ಸೇವುಣರು ಅಥವಾ ಯಾದವರು ರಾಜಕೀಯ ಪ್ರಭಾವವನ್ನು ತಿಳಿಸುವ ಸುಮಾರು ೨೦ಕ್ಕೂ ಹೆಚ್ಚು ಶಾಸನಗಳು, ಇದುವರೆಗೂ ಆಳ್ವಿಕೆ ನಡೆಸಿದ ಕಲ್ಯಾಣ ಚಾಲುಕ್ಯರು, ರಾಷ್ಟ್ರಕೂಟರ ಅರಸರಂತೆ ಇವರು ಆಳ್ವಿಕೆ ನಡೆಸಿದ್ದಾರೆನ್ನಬಹುದು. ದೇವರಿಯನ್ನು ರಾಜಧಾನಿಯಾನ್ನಾಗಿ ಆಳಿದರು. ದಾವಣಗೆರೆ ತಾಲೂಕಿನಲ್ಲಿ ೧೮ಕ್ಕೂ ಹೆಚ್ಚು ಶಾಸನಗಳಿವೆ, ಜಗಲೂರು, ಹೊಳಲ್ಕೆರೆ ತಾಲೂಕುಗಳಲೂ ಅವರ ಶಾಸನಗಳು ದೊರಕಿರುವುದರಿಂದ ಆ ಜಿಲ್ಲೆಯ ಕೆಲವು ಭಾಗಗಳು ಅವರ ಅಧೀನಕ್ಕೆ

ಒಳಪಟ್ಟಿದ್ದವೆಂಬುದು ಸ್ಪಷ್ಟವಾಗುತ್ತವೆ. ಸೇವುಣರು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸುವ ದೃಷ್ಟಿಯಿಂದ ಇವರು ಹೊಳಲ್ಕೆರೆ ತಾಲೂಕಿನಾದ್ಯಂತ ಇವರ ಶಾಸನಗಳು ದೊರಕಿರುವುದರಿಂದ ಈ ಪ್ರದೇಶವು ಇವರ ಆಳ್ವಿಕೆಗೆ ಒಳಪಟ್ಟಿತ್ತೆಂದು ಹೇಳಬಹುದು.

ಹೊಯ್ಸಳರ

ಕರ್ನಾಟಕದಲ್ಲಿ ಹೊಯ್ಸಳರ ಆಡಳಿತ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಿತು. ಪ್ರಸುತ್ತ ಹೊಳಲ್ಕೆರೆ ಪ್ರದೇಶದಲ್ಲಿ ಮತ್ತು ಪಟ್ಟಣದಲ್ಲಿ ಇವರು ಸುವ್ಯವಸ್ಥಿತವಾಗಿ ಆಳ್ವಿಕೆ ನಡೆಸಿರುವುದು ಇಲ್ಲಿ ದೊರೆತಿರುವ ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ.ಶ. ೧೧೯೩ರ ಈ ಮನೆತನದ ಮೊದಲ ಶಾಸನ ಇಮ್ಮಡಿಬಲ್ಲಾಳನಿಂದ ಮೊದಲ್ಗೊಂಡು ಮುಮ್ಮಡಿ ಬಲ್ಲಾಳನ ಕಾಲದ ಎರಡು ಶಾಸನಗಳು ಹಿರಿಯೂರು–೭೦ ಮತ್ತು ಹೊಳಲ್ಕೆರೆ–೨೮ ಅವರ ಸಾಮಂತರು ಇಲ್ಲಿ ಆಡಳಿತ ನಡೆಸುತ್ತಿದ್ದುದನ್ನು ತಿಳಿಸುತ್ತದೆ. ಹೊಳಲ್ಕೆರೆಯಲ್ಲಿ ಎರಡು ಶಾಸನಗಳು ನಾರಾಯಣ ದೇವರಿಗೆ ದತ್ತಿ ನೀಡಿದ ಬಗ್ಗೆ, ಪದ್ಮನಾರಾಯಣ ದೇವಾಲಯದ ಮುಂದೆ ಕೊಳವನ್ನು ನಿರ್ಮಿಸಿದ್ದುದು ಭೂಮಿಯನ್ನು, ತೋಟವನ್ನು, ದತ್ತಿ ಬಿಟ್ಟರುವುದು ಇಮ್ಮುಡಿಬಲ್ಲಾಳ, ಪದ್ಮಲಾದೇವಿ, ಶಾಂತಿನಾಥಬಸದಿ ದೇವಾಲಯದ ಜಿರ್ಣೋದ್ಧಾರ ಬಗ್ಗೆ ವ್ಯಕ್ತಪಡಿಸುತ್ತವೆ.[೧೫]

ಹೊಳಲ್ಕೆರೆಯ ಪಟ್ಟಣದಲ್ಲಿ ಎರಡನೆಯ ಶಾಸನ ಚಿತ್ರದುರ್ಗವನ್ನು 'ಬೆಮ್ಮತೂರು ಪಟ್ಟಣ'ವೆಂದು ಕರೆಯಾಲಾಗುತಿತ್ತೆಂದು ತಿಳಿಸುತ್ತದೆ. ಸೋಮಣದಣ್ಣಾಯಕ ಬೆಮ್ಮತೂರು ಪಟ್ಟಣ ನೋಡಿಕೊಳ್ಳವುದರ ಬಗ್ಗೆ, ಶಾಂತಿನಾಥಬಸದಿಗೆ ನಿತ್ಯ ಸೇವೆಸಲ್ಲಿಸುವ ದತ್ತಿಬಿಟ್ಟ ಬಗ್ಗೆ ಇದೆ.[೧೬]

ಹೊಳಲ್ಕೆರೆ ತಾಲೂಕು ಹಿರೇಎಮ್ಮಿಗನೂರು ಕಲ್ಲೇಶ್ವರ ದೇವಾಲಯದ ಕ್ರಿ.ಶ. ೧೨೨೦ರ ಶಾಸನ ಇಮ್ಮಡಿಬಲ್ಲಾಳನು ಪಾಂಡ್ಯರ ಅಧೀನದಲ್ಲಿದ್ದ 'ನೊಳಂಬವಾಡಿ–೩೨,೦೦೦' ಪ್ರಾಂತ್ಯವನ್ನು ಹೋರಾಟದಲ್ಲಿ ಗೆದ್ದನೆಂದು ಹೇಳುತ್ತದೆ.[೧೭] ಈಗಾಗಲೇ ತಿಳಿದಂತೆ ಹೊಳಲ್ಕೆರೆ ತಾಲೂಕು ಪರಿಸರ 'ನೊಳಂಬವಾಡಿ ೩೨,೦೦೦' ಪ್ರಾಂತ್ಯದ ಒಂದು ಭಾಗವಾಗಿತ್ತು. ಬಾಗೂರು ಸಮೀಪದ ಮಳಲಿ ಗ್ರಾಮದ ಈಶ್ವರ ದೇವಾಲಯದ ಮುಂದಿನ ಶಾಸನ ಕ್ರಿ.ಶ. ೧೨೨೬ರಲ್ಲಿ ವೀರಗಲ್ಲು ಶಾಸನದಲ್ಲಿ 'ವೀರನರಸಿಂಹ ದೇವನು' 'ಗಂಗವಾಡಿ ೯೬,೦೦೦' ಮತ್ತು 'ನೊಳಂಬವಾಡಿ ೩೨,೦೦೦' ನಾಡುಗಳನ್ನು ಆಳುವಾಗ ಶ್ರೀ ಕೇಶವಪುರವಾದ ಮಳಲಿಯ ಚಿಕ್ಕಗಾವುಂಡನ ಮಗ ಮಾಚಗಾಂವುಡ ಅವನ ಮಗ ಮಾದಿಗಾಂವುಡ ಹೋರಾಟದಲ್ಲಿ ಮರಣ ಹೊಂದಿದ್ದಕ್ಕಾಗಿ ಆ ಗ್ರಾಮದ ಗೌಡರು ಅವನ ಹೆಸರಿನಲ್ಲಿ ಶ್ರೀ ಕಲಿದೇವರಿಗೆ ಭೂದತ್ತಿ ಬಿಟ್ಟುಕೊಟ್ಟರೆಂದು ಹೇಳುತ್ತದೆ.[೧೮] ಇದೇ ಸ್ಥಳದ ಕ್ರಿ.ಶ. ೧೨೩೭ರ ತುರುಗೋಳ್ ಸ್ಮಾರಕ ಶಾಸನದಲ್ಲಿ ಸೋಮೇಶ್ವರನು ಆಳುವಾಗ ಮಾವಿನಹಳ್ಳಿಯ ಕೆಲವರು ಹಸುಗಳನ್ನು ಕದ್ದು ಒಯ್ಯುವಾಗ ಚಿಕ್ಕಬೊಮ್ಮನೆಂಬುವವನು ಅವರೊಡನೆ ಕಾದಾಡಿ ವೀರಸ್ವರ್ಗ ಪಡೆದ ಸಂದರ್ಭದಲ್ಲಿ ಅವನ ಹೆಸರಿನಲ್ಲಿ ಮಾರಬೋಮ್ಮ ಎಂಬುವವನು ವೀರಗಲ್ಲು ನಿಲ್ಲಿಸಿದ ಬಂದಿದೆ.[೧೯] ಈ ಎರಡು ವೀರಗಲ್ಲುಗಳು ದೊರೆತಿರುವ ಮಳಲಿಯ ವೀರನರಸಿಂಹ ಹಾಗೂ

ಸೋಮೇಶ್ವರನ ಕಾಲದಲ್ಲಿ ಒಂದು ಪ್ರಮುಖ ಅಗ್ರಹಾರವಾಗಿತ್ತೆಂದು ತಿಳಿದು ಬರುತ್ತದೆ. ಕಾರಣ ಇದನು ಶಾಸನದಲ್ಲಿ 'ಶ್ರೀ ಕೇಶವಪುರ' ಎಂದು ಕರೆದಿರುವುದು ಕಂಡು ಬರುತ್ತದೆ. ಕ್ರಿ.ಶ. ೧೩೦೭ರಲ್ಲಿ ಹೊನ್ನೆಕೆರೆ ಕಲ್ಲೇಶ್ವರ ದೇವಾಲಯದಲ್ಲಿರುವ ಶಾಸನ ಮುಮ್ಮಡಿಬಲ್ಲಾಳನ ಮೆದಗಿದೇವ ದಣ್ಣಾಯಕನೊಂದಿಗೆ ಸಾಮ್ರಾಜ್ಯ ಆಳುತ್ತಿದ್ದ. ಹೊಯ್ಸಳರ ಬಲ್ಲಾಳನು ಈ ಸಂದರ್ಭದಲ್ಲಿ ಮರಣ ಹೊಂದಿದನು. ಹೊಳಲ್ಕೆರೆ ಮತ್ತು ಹೊಕುಂದ ಈ ಎರಡು ಸೇರಿ ಹೊಯ್ಸಳರ ಒಂದು ಸಾಮಂತ ರಾಜ್ಯವಾಗಿತ್ತು. ಈ ಹೊಳಲ್ಕೆರೆ ಹೊಕುಂದ ರಾಜ್ಯಕ್ಕೆ ಮಾಚಿದೇವನು ಮಹಾಸಾಮಂತಾಧಿಪತಿ. ಈ ಕುಮಾರ ಮಾಚಿದೇವರಸನೂ ಶ್ರೀ ಮನ್ಮಹಾಸಾಮಂತ ಕಲಿಗಳಂಕುಶ ಹುಲ್ಲೂರು ಮಾಚಿದೇವರ ಪುತ್ರ ಮಾರೆನಾಯಕನೂ, ಅಗ್ಗಪ್ಪ ಹೆಗ್ಗಡೆಯೂ, ರಾಜಾಧ್ಯಕ್ಷ ವಾಮನಕ್ರಮಿತನೂ ಸೇರಿ ಹೊಳಲ್ಕೆರೆ ಹೊಕುಂದ ಸಾಮಂತ ರಾಜ್ಯವನ್ನು ಆಳುತ್ತಿದ್ದರು. ಹೊಳಲ್ಕೆರೆ-ಹೊಕುಂದ ರಾಜ್ಯದಲ್ಲಿ ಮುಖ್ಯವಾದ ನಗರಗಳನ್ನು ಆಳುತ್ತಿದ್ದ ಅಧಿಕಾರಿಗಳಿಗೆ ಪ್ರಭುಗಳು ಎಂದು ಹೆಸರು ಅವರಲ್ಲಿ ದೊಡ್ಡಘಟ್ಟವನ್ನು ಆಳುತ್ತಿದ್ದ ಪ್ರಭುವಿನ ವಂಶದ ಹೆಸರು ಇದೆ.[೨೦]

ಕಂಪಿಲದೇವನ ಆಳ್ವಿಕೆ

ವಿಜಯನಗರ ಸ್ಥಾಪನೆಗಿಂತ ಮೊದಲು ಆಳ್ವಿಕೆಯನ್ನವಯ ನಡೆಸಿದ ಮುಮ್ಮಡಿಸಿಂಗೆನಾಯಕನ ಮಗ ಕಂಪಿಲದೇವ ಮತ್ತು ಕುಮಾರ ರಾಮನಾಥ ಮತ್ತು ಹೊಯ್ಸಳ ಅರಸರಿಗೂ ಆಗಿಂದಾಗ್ಗೆ ನಡೆಯುತ್ತಿದ್ದವು. ಚಿತ್ರದುರ್ಗ ಪರಿಸರದಲ್ಲಿ ಯುದ್ಧಗಳು ನಡೆದಿರುವುದು ಸಂಗತಿಯಾಗಿದೆ. ಈ ಅಂಶವನ್ನು ಕುಮಾರರಾಮಚರಿತ್ರೆ, ಕೈಫಿಯತ್ತುಗಳು ಮತ್ತು ಶಿಲಾಶಾಸನಗಳು ಪುಷ್ಟೀಕರಿಸುತ್ತವೆ.

ಕ್ರಿ.ಶ. ೧೨೮೧ರಲ್ಲಿ ಹೊಳಲ್ಕೆರೆಯ ಲೋಕದಾಳು ಶಾಸನದಲ್ಲಿ ಉಲ್ಲೇಖಿತವಾಗಿರುವಂತೆ ಮುಮ್ಮಡಿಸಿಂಗೆನಾಯಕನು ವೇತಂಡಕಲ್ಲು ಮೇಲೆ ನಡೆದ ಯುದ್ಧವನ್ನು ನೆನಪಿಸುತ್ತದೆ. ಲೋಕದಾಳುವಿನಲ್ಲಿರುವ ಸಿದ್ದೇಶ್ವರ ದೇವಾಲಯವನ್ನು ಈ ಹಿನ್ನೆಲೆಯಲ್ಲಿ ಕಟ್ಟಲಾಗಿದೆ. ಈ ಯುದ್ಧದಲ್ಲಿ ಹೊಯ್ಸಳರ ಅಧಿಕಾರಿ ಸಂಗೈಯ ನಾಯಕನು ಯುದ್ಧದಲ್ಲಿ ಮಡಿದನೆಂದಿದೆ.[೨೧] ನಂತರ ಕ್ರಿ.ಶ. ೧೩೦೧ರ ಜಾನುಕಲ್ಲು ಶಾಸನದಲ್ಲಿ ಕಂಪಿಲದೇವನು ಹೊಳಲ್ಕೆರೆ ಮೇಲೆ ನಡೆಸಿದ ಈ ಯುದ್ಧದಲ್ಲಿ ಕೆಂದಾರಿದೇವರಸನ ಮಯಿದುನ ಬಸವನು ಮಡಿದನೆಂದು ಉಲ್ಲೇಖವಿದೆ. ಹಾಗು ಕ್ರಿ.ಶ. ೧೩೦೧ರ ಹೊಳಲ್ಕೆರೆಯ ಮೇಲೆ ಕಂಪಿಲದೇವನು ನಡೆಸಿದ ಯುದ್ಧದ ಉಲ್ಲೇಖಗಳು ಚಿಟ್ಟನಹಳ್ಳಿ, ಬಾಗಳಿ ಹಾಗೂ ಹರಿಹರದ ಶಾಸನಗಳಲ್ಲಿವೆ. ಹೊಳಲ್ಕೆರೆಗೆ ಕಂಪಿಲದೇವನು ಯುದ್ಧಕ್ಕೆ ಬಂದಾಗ ಬೆಮ್ಮತೂರು ಕಲ್ಲಿನ ಬಳಿ ಹೊಯ್ಸಳ ದಂಡಾಧಿಕಾರಿ ಸೋಮೆಯದಂಡನಾಯಕನು ಮಡಿದನೆಂಬ ವಿಷಯವಿದೆ. ಹರಿಹರದ ಶಾಸನದಲ್ಲಿ ಬೇಡರ ಪಡೆಯಿಂದ ಸೋಮೆಯ ದಂಡನಾಯಕನು ಮಡಿದನೆಂದು ಉಲ್ಲೇಖಿಸುತ್ತದೆ.[೨೨]

ವಿಜಯನಗರ ಸಾಮ್ರಾಜ್ಯ

ಹೊಯ್ಸಳರ ನಂತರ ಮಧ್ಯಕಾಲೀನ ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಹಾಗೂ ಆಳ್ವಿಕೆ ಅತ್ಯಂತ ಮಹತ್ವ ಪೂರ್ಣವಾದುದ್ದು. ವಿಜಯನಗರದ ಅರಸರು ಮೂಲತಃ

ಈಗಿನ ಆಂಧ್ರ ಪ್ರದೇಶದ ತಿರುಪತಿಯ ಜಡೆಕಲ್ಲುದುರ್ಗ ಎಂಬ ಸ್ಥಳದಿಂದ ವಲಸೆ ಬಂದು ಚಿತ್ರದುರ್ಗ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ನಿಂತು ಕ್ರಮೇಣ ರಾಜಕೀಯ ಸ್ಥಾನಮಾನಗಳನ್ನು ಸಂಪಾದಿಸಿದರು. ಈ ವಂಶದ ಒಂದು ಶಾಖೆಗೆ ಸೇರಿದ ತಿಮ್ಮಣ್ಣನಾಯಕನನ್ನು ಆನೆಗೊಂದಿಯ ಅರ್ಥಾತ್ ವಿಜಯನಗರದ ಅರಸರು ಕ್ರಮಾನುಗತವಾಗಿ ಹೊಳಲ್ಕೆರೆ ಅಧಿಕಾರವಹಿಸಿಕೊಂಡ ಈತ ಹಿರಿಯೂರು ಚಿತ್ರದುರ್ಗಕ್ಕೆ ನಾಯಕನನ್ನಾಗಿ ನೇಮಿಸಿದರು. ಚಿತ್ರದುರ್ಗದಲ್ಲಿ ಕೋಟೆ–ಕೊತ್ತಲಗಳನ್ನು ಕಟ್ಟಿಸಿ ಆಳ್ವಿಕೆ ನಡೆಸಿದ.[೨೩] ಒಬ್ಬ ಸಾಧಾರಣ ಅಮರನಾಯಕನಾಗಿ ಕ್ರಿ.ಶ. ೧೪೩೫ರಲ್ಲಿ ತಿಮ್ಮಣನಾಯಕನಿಗೆ ಹೊಳಲ್ಕೆರೆಯ ಅಮರನಾಯಕನಾಗಿ ಬಡ್ತಿನೀಡಿ, ಕ್ರಿ.ಶ. ೧೪೩೫ರಲ್ಲಿ ಅವನ್ನು ಚಿತ್ರದುರ್ಗದ ನಾಯಕನೆಂದು, ಹಾಗು ಕ್ರಿ.ಶ. ೧೫೦೨ರಲ್ಲಿ ವಿಜಯನಗರ ಸಾಮ್ರಾಜ್ಯದ ಸೌಧದ ಮುಖ್ಯ ಆಧಾರ ಸಂಭ್ತಗಳಲ್ಲಿ ಒಬ್ಬನೆಂದು ಗೌರವಿಸಲಾಯಿತು.[೨೪] ಕ್ರಿ.ಶ. ೧೭೦೯ರ ಭರಮಣ್ಣನಾಯಕನ ಕಾಲದ್ದು ಎಂದು ಗುರುತಿಸಿರುವ ರಾಮೇನಹಳ್ಳಿ ಶಾಸನವು

ಭರಮಣ್ಣನಾಯಕನು ಅಪ್ಪಳಾಚಾರ್ಯರೆಂಬುವರಿಗೆ ರಾಮೇನಹಳ್ಳಿ ಗ್ರಾಮವನ್ನು ದಾನವಾಗಿ ಕೊಟ್ಟನೆಂದು ತಿಳಿಸುತ್ತದೆ. ಇನ್ನೆರಡು ಶಾಸನಗಳು ರಾಮೇನಹಳ್ಳಿ ಗ್ರಾಮವು ತಿರುಮಲೆಯ ತಾತಯ್ಯಗಳ ಹೆಸರಿನಲ್ಲಿ ಅಗ್ರಹಾರವಾಗಿತ್ತೆಂದು ತಿಳಿಸುತ್ತದೆ. ತಾತಾಚಾರ್ಯರ ಗುರುಪರಂಪರೆ ಪ್ರಖ್ಯಾತವಾದುದು. ವಿಜಯನಗರ ಕಾಲದಲ್ಲಿ ಈ ಗುರುಪರಂಪರೆಗೆ ಭರಮಣ್ಣನಾಯಕನು ಭಕ್ತಿ ತೋರಿದನೆಂಬುದನ್ನು ಈ ಶಾಸನಗಳು ಶ್ರುತಪಡಿಸುತ್ತವೆ.

ಭೈರವಾರಾಧನೆಯ ವ್ಯಾಪಕತೆಯ ಬಗ್ಗೆ ಮುಗಳಿಕಟ್ಟೆ ಗ್ರಾಮದ ಶಾಸನದಲ್ಲಿ ೧೭ನೆಯ ಶತಮಾನಕ್ಕೆ ಸೇರಿದ ಗೌಡರ ತಿಮ್ಮಗೊಂಡ ಎಂಬುವನು ಈ ಕಲ್ಲನ್ನು ನಿಲ್ಲಿಸಿದ ಸಂಗತಿಯನ್ನು ಕುರಿತು ಈ ಬರಹ ತಿಳಿಸುತ್ತದೆ. ಕ್ರಿ.ಶ. ೧೭ನೆಯ ಶತವಮಾನದ ಕಾಲದಲ್ಲೂ ಭೈರವಾರಧನೆ ಹೇಗೆ ಸಾಗಿಬಂದಿದ್ದಿತೆಂಬುದನ್ನು ಇದು ಸೂಚಿಸುತ್ತದೆ. ಹೊಳಲ್ಕೆರೆ ತಾಲೂಕಿನ ಮತಿಗಟ್ಟ ಗ್ರಾಮದಲ್ಲಿ ದೊರೆತ ಎರಡು ತಾಮ್ರಪತ್ರಗಳು ಕ್ರಿ.ಶ. ೧೮ನೆಯ ಶತಮಾನದ ಆದಿಭಾಗ ಕ್ರಿ.ಶ. ೧೭೧೩ ಮಾರ್ಚ್ ೧೬ರಲ್ಲಿ ಹಾಕಿಸಿದ್ದು ಇನ್ನೊಂದು ಕ್ರಿ.ಶ. ೧೭೧೪ರ ಡಿಸೆಂಬರ್ ೨ರಂದು ಎರಡು ಶಾಸನ ಒಂದೇ ವಿಷಯವನ್ನು ಒಳಗೊಂಡಿದೆ. ದಳವಾಯಿಗಳ ಕಾಲದಲ್ಲಿ ಸಂಗೇನಹಳ್ಳಿ ಗೌಡಲೆಂಕಪ್ಪ ಎಂಬುವನು ಹೊರಕೆರೆದೇವಪುರದ ಸೀಮೆಯ ಮತಿಗಟ್ಟ ಗ್ರಾಮದ ಸಾದರ ಗೌಡರಿಂದ, ಗೌಡಿಕೆಯನ್ನು ಬಲಾತ್ಕಾರದಿಂದ ಕಸಿದುಕೊಂಡು ತಾನೇ ಗೌಡ ಎಂಬಂತೆ ನಡೆದುಕೊಂಡನು. ಈ ರೀತಿಯ ಅನೇಕ ತಪ್ಪೊಪ್ಪಿಗೆಯ ಈ ತಾಮ್ರಪತ್ರಗಳನ್ನು ಬರೆಯಿಸಿಕೊಟ್ಟಿರುವುದಾಗಿದೆ.[೨೫] ಇಲ್ಲಿ ದಳವಾಯಿಗಳ ಕಾಲದಲ್ಲಿ ಆದ ದೌರ್ಜನ್ಯವೊಂದು ಆಮೇಲೆ ಭರಮಣ್ಣನಾಯಕನ ಕಾಲದಲ್ಲಿ ಸರಿಹೋದುದ್ದಲ್ಲದೆ, ಪ್ರಾಯಶಃ ಮತ್ತೆ ಎಂದಾದರೂ ಕಿರಿಕಿರಿ ಮರುಕಳಿಸಬಾರದೆಂದು ಕಟ್ಟುಪಾಡು ಮಾಡಲು ಇದು ಆಗಿನ ಕಾಲದ ನ್ಯಾಯಶೀಲ ಆಡಳಿತದ ಒಂದು ಕ್ರಮವನ್ನು ತೋರಿಸುವಂತಿದೆ.

ಪಾಳೆಯಗಾರರು

ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ಸ್ಥಳೀಯ ನಾಯಕರಾದ ಪಾಳೆಯಗಾರರ ಸ್ಥಾನ ಅತ್ಯಂತ ಮಹತ್ವವಾದುದ್ದು.

ರಾಜಕೀಯ ಚರಿತ್ರೆಯಲ್ಲಿ ಇವರು ವಹಿಸಿದ ಪಾತ್ರ ಅದ್ವಿತೀಯವಾದುದ್ದು. ವಿಜಯನಗರ ಸಾಮ್ರಾಜ್ಯದ ಇತಿಹಾಸದ ಭಾಗವಾಗಿ ಮತ್ತು ಅದರ ಆಧಾರ ಸ್ತಂಭಗಳಾಗಿ ಪಾಳೆಯಗಾರರು 'ಅಮರನಾಯಕ'ರಾಗಿ ಅಥವಾ 'ನಾಯಕ'ರಾಗಿ ಕಾಣಿಸಿಕೊಳ್ಳುತ್ತಾರೆ. 'ಪಾಳೆಯ' ಎಂಬ ಪದ ದಂಡು, ಸೈನ್ಯ, ಸೇನಾ, ಶಿಬಿರ, ವಿಭಾಗ, ಠಾಣ್ಯ ಎಂಬ ಅರ್ಥವನ್ನು ಸೂಚಿಸುತ್ತದೆ. ಕನ್ನಡದ ಪಾಳೆಯಗಾರ ಎಂಬ ಹೆಸರಿನ ಇವರು ತೆಲುಗಿನಲ್ಲಿ 'ಪಾಳೆಗಾಡು', ತಮಿಳಿನಲ್ಲಿ 'ಪಾಲೈಕಾರನ್', ಮರಾಠಿಯಲ್ಲಿ ಪಾಳೇಗಾರ ಎಂದು ಪ್ರಸಿದ್ಧರಾಗಿದ್ದರು. ಇವರ ಅದೀನದಲ್ಲಿದ್ದ ಭೂಪ್ರದೇಶಕ್ಕೆ 'ಪೂಲ್ಲಂ' ಎಂದು ಹೆಸರಿದ್ದ ಕಾರಣ ಇವರಿಗೆ 'ಪಾಳೆಯಗಾರ' ಎಂಬ ಹೆಸರು ಪ್ರಾಪ್ತವಾದಂತೆ ತೋರುತ್ತದೆ.[೨೬]

ಕ್ರಿ.ಶ. ೧೫೬೪ರ ಹೊಳಲ್ಕೆರೆ ಶಾಸನ ವೀರಪ್ರತಾಪ ಸದಾಶಿವರಾಯ ಮಹಾರಾಯನಿಗೆ ಸಂಬಂಧಿಸಿದ್ದು, ಮಹಾಮಂಡಲೇಶ್ವರ ಅಳಿಯರಾಮರಾಯನ ಆಳ್ವಿಕೆಯ ಕಾಲದಲ್ಲಿ ತಿರುಮಲರಾಯ ರಾಜೇಯದೇವ ಹೊಳಲ್ಕೆರೆ ಸೀಮೆಯನ್ನು ಮಹಾನಾಯಕ ಚಾರ್ಯ ಕಾಮಗೇತಿ ಕಸ್ತೂರಿ ಮದಕರಿನಾಯಕನಿಗೆ ಅಮರಮಾಗಣಿಯಾಗಿ ನೀಡಿದ್ದನ್ನು ಉಲ್ಲೇಖಿಸುತ್ತದೆ. ಇದೇ ಕಾಲಘಟ್ಟಕ್ಕೆ ಸೇರಿದ ಇಲ್ಲಿಯ ಮತ್ತೊಂದು ಶಾಸನ ಗೋಪಾಲಕೃಷ್ಣ ದೇವಾಲಯದ ಜೀರ್ಣೋದ್ಧಾರ ಹಾಗೂ ಅರ್ಚಕರ ನೇಮಕದ ವಿವರಗಳನ್ನು ನೀಡುತ್ತದೆ. ಹೀಗೆ ವಿಜಯನಗರದ ಅರಸರಿಂದ ಅಮರಮಾಗಣಿಯಾಗಿ ಪಡೆದ ಪಾಳೆಯಗಾರನು ನಂತರ ಹೊಳಲ್ಕೆರೆ ಸೀಮೆಯಿಂದ ಹಿರಿಯೂರು ಸೀಮೆಯ ಅಧಿಕಾರಿಯಾಗಿ ಅಲ್ಲಿಂದ ಚಿತ್ರದುರ್ಗದ ಸೀಮೆಯ ಅಧಿಕಾರಿಯಾಗಿ ನೇಮಕಗೊಂಡು ನಂತರ ಸ್ವತಂತ್ರವಾಗಿ ಆಳ್ವಿಕೆ ನಡೆಸಿದ್ದನ್ನು ನೋಡಬಹುದು.

ಸಂತೆಬೆನ್ನೂರು ನಾಯಕ ಅರಸರು

ಕರ್ನಾಟಕದ ಅರೆಮಲೆನಾಡಿನ ಭಾಗವಾಗಿದ್ದ ಹೊಳಲ್ಕೆರೆ ತಾಲೂಕಿನಲ್ಲಿ ಸಂತೆಬೆನ್ನೂರು ನಾಯಕರ ಆಳ್ವಿಕೆಯನ್ನು ಗುರುತಿಸುವ ಸಂತೆಬೆನ್ನೂರು ರಾಜಪ್ಪನಾಯಕ, ಬಾಲಗಿರಿನಾಯಕ, ದವಳಪ್ಪನಾಯಕರ (ಕ್ರಿ.ಶ. ೧೫೭೦–೧೬೧೦) ಹೊಳಲ್ಕೆರೆಯಲ್ಲಿ ಶಾಸನಗಳಿವೆ. ಸಂತೆಬೆನ್ನೂರು ನಾಯಕರು ಚಿತ್ರದುರ್ಗ ಪ್ರದೇಶದ ಹೊಸದುರ್ಗ ಸೀಮೆ, ಬಾಗೂರುಸೀಮೆ, ಹೊಳಲ್ಕೆರೆ ಸೀಮೆಗಳನ್ನು ವಶಪಡಿಸಿಕೊಂಡು ನೇರವಾಗಿ ಆಳಿದ್ದಾರೆ.[೨೭] ದೈವಭಕ್ತರಾಗಿದ್ದ ಇವರು ತಮ್ಮ ಆಳ್ವಿಕೆಗೆ ಒಳಪಟ್ಟಿದ್ದ ಸೀಮೆಗಳಲ್ಲಿ ಹಲವಾರು ದೇವಾಲಯಗಳ ಜೀರ್ಣೋದ್ಧಾರ ಕಾರ್ಯ ಕೈಗೊಂಡು, ದಾನ-ದತ್ತಿಗಳನ್ನು ಬಿಟ್ಟಿರುವರು. ಹನುಮಪ್ಪನಾಯಕನ ಮಗ ರಾಜಪ್ಪನಾಯಕ ಬಾಗೂರು ಗ್ರಾಮದ ಪ್ರಸಿದ್ಧ ಚನ್ನಕೇಶವ ದೇವಾಲಯದ ಪ್ರಕಾರದಲ್ಲಿರುವ ಲಕ್ಷ್ಮೀದೇವಿ ದೇವಾಲಯದ ಜೀರ್ಣೋದ್ಧಾರ ಕಾರ್ಯವನ್ನು ಕ್ರಿ.ಶ. ೧೫೭೧ರಲ್ಲಿ ಮಾಡಿಸಿ, ಗದ್ದೆ ಹಾಗೂ ಇತರ ದಾನದತ್ತಿಗಳನ್ನು ನೀಡಿರುವುದಾಗಿ ತಿಳಿದುಬರುತ್ತದೆ.[೨೮] ಹೀಗೆ

ಹೊಳಲ್ಕೆರೆ ಪಟ್ಟಣ ಪರಿಸರದಲ್ಲಿ ಸಂತೆಬೆನ್ನೂರು ನಾಯಕರು ಆಳ್ವಿಕೆ ನಡೆಸಿರುವ ಸಂಗತಿಯನ್ನು ಈ ಮೇಲಿನ ಅಂಶಗಳಿಂದ ಮನಗಾಣಲಾಗಿದೆ.

ಮೈಸೂರು ಒಡೆಯರ ಆಳ್ವಿಕೆ

ಕ್ರಿ.ಶ. ೧೭೯೯ರಲ್ಲಿ ಬ್ರಿಟೀಷರು ಶ್ರೀರಂಗಪಟ್ಟಣದ ಮೇಲೆ ಸೈನಿಕ ಕಾರ್ಯಚರಣೆ ನಡೆಸಿದ ನಂತರ ಎಂದಿನಂತೆ ಮೈಸೂರು ಒಡೆಯರಿಗೆ ಪ್ರಾಶಸ್ತ್ಯ ದೊರಕಿತು. ಶ್ರೀರಂಗಪಟ್ಟಣವು ತನ್ನ ಭವ್ಯತೆಯನ್ನು ಕಳೆದುಕೊಂಡು ಅದೆಲ್ಲವೂ ಮೈಸೂರಿಗೆ ವರ್ಗಾವಣೆಯಾಯಿತು.

ಮುಮ್ಮಡಿ ಕೃಷ್ಣರಾಜರು ಸ್ಥಾಪಿಸಿದ ಆರು ತುಕಡಿಗಳಲ್ಲಿ ಚಿತ್ರದುರ್ಗ ತುಕಡಿಯೂ ಒಂದಾಗಿದ್ದು ಇದಕ್ಕೆ ೧೩ ತಾಲೂಕುಗಳು ಚಿತ್ರದುರ್ಗ, ಹಿರಿಯೂರು, ಅಣಜಿ, ದಾವಣಗೆರೆ, ಹೊಳಲ್ಕೆರೆ, ಹೊಸದುರ್ಗ, ಮಾಯಕೊಂಡ, ಕಣಕುಪ್ಪೆ, ಬಿಳಿಚೋಡು, ಮತ್ತೋಡು, ತಳಕು, ದೊಡ್ಡೇರಿ, ಮೊಳಕಾಲ್ಮೂರು ಸೇರಿದ್ದವು. ಅಲ್ಲದೆ ೫ ಸರಸಾಯರುಗಳನ್ನು ವಿಂಗಡಿಸಿದ್ದು, ಚಿತ್ರದುರ್ಗ ತುಕಡಿಯೂ ಒಂದು ಸರಸರಾಗಿದ್ದಿತು.[೨೯] ಪ್ರತಿ ತಾಲೂಕಿಗೂ ಸುಬೇಧಾರ, ಶ್ಯಾನುಬೋಗ, ಫೌಜುದಾರ, ಗುಮಾಸ್ತ, ಮುನ್ಷಿ ಮುಂತಾದವರಿರುತ್ತಿದ್ದರು.ಮುಮ್ಮಡಿಕೃಷ್ಣರಾಜ ಕ್ರಿ.ಶ. ೧೮೧೧–೧೮೩೧ರವರೆಗೆ ಸ್ವತಂತ್ರ ಆಡಳಿತ ನಡೆಸುತ್ತಿದ್ದ.

ಕ್ರಿ.ಶ. ೧೮೩೧ರಲ್ಲಿ ಅಧಿಕಾರವನ್ನು ಅನಿವಾರ್ಯವಾಗಿ ಬ್ರಿಟೀಷರಿಗೆ ವಹಿಸಿ ಕೊಡಬೇಕಾಯಿತು. ಕಮಿಷನರ್ ಆಡಳಿತ ವಹಿಸಿಕೊಂಡು ಬಂದು ವರ್ಷಕ್ಕೆ ನಗರದಲ್ಲಿ ಗಲಭೆ, ದಂಗೆಗಳು ಆರಂಭವಾದವು. ನಗರದ ಫೌಜುದಾರರ ವಿರುದ್ಧ ಚನ್ನಗಿರಿಯಲ್ಲಿ ಮೊದಲು ದಂಗೆ ಪ್ರಾರಂಭವಾಯಿತು. ಇದರಲ್ಲಿ ರೈತರೇ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರಿಂದ ಸುತ್ತಮುತ್ತ ರೈತರು ಚನ್ನಗಿರಿ ರೈತರನ್ನೇ ಅನುಸರಿಸಿದರು. ಅವರೆಲ್ಲರೂ ಬತ್ತೇರಿಹಳ್ಳಿಯಲ್ಲಿ ಒಂದುಗೂಡಿದರು ಪೌಜುದಾರ ಕಿರುಕುಳ ನೀಡುವನೆಂದೂ ರಕ್ಷಣೆಯ ಭರವಸೆ ನೀಡುವವರೆಗೆ ತಾವು ತಮ್ಮ ಪ್ರದೇಶಗಳಿಗೆ ಹಿಂದಿರುಗುವುದಿಲ್ಲ ಎಂದು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಆ ರೈತರು ಪತ್ರ ಬರೆದರು. ಆ ತಾಲೂಕುಗಳ ಅಮಲ್ದಾರನಾಗಿದ್ದ ರಂಗರಾವ್ ಎಂಬುವವನು ಇದನ್ನು ಪ್ರೋತ್ಸಾಹಿಸಿದನು. ನಗರದ ಫೌಜುದಾರಿಯಲ್ಲಿ ಗಲಭೆಗಳು ಪ್ರಾರಂಭಗೊಂಡ ನಂತರ, ಚಿತ್ರದುರ್ಗ ಫೌಜುದಾರರ ವಿರುದ್ದವೂ ದಂಗೆಕೋರರು ನುಸುಳಿ ಹೊಳಲ್ಕೆರೆ ತಾಲೂಕಿನ ರೈತರನ್ನು ತಮ್ಮೊಡನೆ ಸಹಕರಿಸುವಂತೆ ಕೇಳಿಕೊಂಡರು. ಆಗ ಚಿತ್ರದುರ್ಗದ ಫೌಜುದಾರನಾಗಿದ್ದ ಮೋತಿಖಾನೆ ನರಸಿಂಗರಾಯನ ಸಹೋದರ ಶೇಷಗಿರಿರಾವ್ ಎಂಬುವನು ಚಿತ್ರಹಳ್ಳಿ ಗ್ರಾಮದಲ್ಲಿ ದಂಗೆಯೇಳಲು ಸಜ್ಜುಗೊಳ್ಳುತ್ತಿದ್ದ ರೈತರನ್ನು ಸಮಾಧಾನಪಡಿಸಲು ಅಲ್ಲಿಗೆ ಹೋದಾಗ ಮಾವಿನಹಳ್ಳಿ ಗ್ರಾಮದ ರೈತರು ಸೇರಿಕೊಂಡು ಗಲಭೆ ಮಾಡುತ್ತಿರುವರೆಂಬ ಸುದ್ದಿ ತಲುಪಿತು. ಅದೇ ದಿವಸ ಸುಮಾರು ೬೦೦–೭೦೦ ಜನ ರೈತರು ಚಿತ್ರಹಳ್ಳಿ ಸಂತೆಯಲ್ಲಿ ಸೇರಿದ್ದ ವ್ಯಾಪಾರಿಗಳೊಡನೆ ಫೌಜುದಾರನಿಗಾಗಲಿ ಅಥವಾ ಅವನ ಸಂಗಡಿಗರಿಗಾಗಲಿ ಯಾವ ಪದಾರ್ಥವನ್ನು ಮಾರಾಟ ಮಾಡಬಾರದೆಂದು ಎಚ್ಚರಿಕೆ ನೀಡಿದರು. ನಂತರ ಹೊಳಲ್ಕೆರೆ ತಾಲೂಕಿನ

೫೦೦ಕ್ಕೂ ಹೆಚ್ಚು ರೈತರು ಚಿತ್ರಹಳ್ಳಿಗೆ ಬಂದು ಚಿತ್ರದುರ್ಗ ತಾಲೂಕಿನ ರೈತರೊಂದಿಗೆ ಸೇರಿಕೊಂಡರು, ಫೌಜುದಾರನನ್ನು ಗುಂಟನೂರಿಗೆ ಹೋಗುವಂತೆ ಬಲಾತ್ಕರಿಸಿದರು. ಅಲ್ಲಿನ ರೈತರೂ ಅವನ ವಿರುದ್ಧ ಕಾರ್ಯಚರಣೆಯನ್ನು ಪ್ರಾರಂಭಿಸಿದವರೇ ಆಗಿದ್ದರು.[೨೦]

ಮುಮ್ಮಡಿಕೃಷ್ಣರಾಜರು ಜಿಲ್ಲೆಯಾದ್ಯಂತ ಅಗ್ರಹಾರಗಳು, ದೇವಾಲಯಗಳು, ಮಠಗಳು, ಕೆರೆ-ಕಾಲುವೆಗಳು ಮೊದಲಾದವುಗಳಿಗೆ ದಾನದತ್ತಿಗಳನ್ನು ನೀಡಿ ಅಭಿವೃದ್ಧಿಗೊಳಿಸಿರುವುದು ಕಂಡು ಬರುತ್ತದೆ ಮತ್ತು ಇದಕ್ಕೆ ಸುತ್ತಮುತ್ತಲಿನ ರೈತರು ಪ್ರೋತ್ಸಾಹಿಸಿದರು. ಕೆಲವು ಶಾಸನಗಳು ಅಂದಿನ ಆಡಳಿತ ಪದ್ಧತಿಯನ್ನು ವ್ಯಕ್ತಪಡಿಸುತ್ತವೆ.

ಬಿಜಾಪುರ ಹಾಗೂ ಮೊಗಲರ ಆಳ್ವಿಕೆ

೧೫ನೆಯ ಶತಮಾನದ ಅಂತ್ಯ ಭಾಗದಲ್ಲಿ ಬಿಜಾಪುರ ರಾಜ್ಯವು ಹುಟ್ಟಿಕೊಂಡಿತು. ಆದಿಲ್ ಶಾಹಿ ದೊರೆಗಳು ಈ ರಾಜ್ಯವನ್ನು ೧೭ನೆಯ ಶತಮಾನದಲ್ಲಿ ಮೊಗಲರು ಆಕ್ರಮಿಸಿಕೊಳ್ಳುವವರೆಗೂ ಆಳಿದರು. ಚಿತ್ರದುರ್ಗದ ಪಾಳೆಯಗಾರರೊಡನೆ ಸಿರಾದ ಮೊಗಲ್ ಸುಬೇದಾರನು ಸ್ನೇಹ ಸಂಬಂಧವನ್ನು ಹೊಂದಿದ್ದಂತೆ ಕಂಡುಬರುತ್ತದೆ.

ಮೊಗಲರಿಗೆ ಸಂಬಂಧಿಸಿದ ಹಲವಾರು ಶಾಸನಗಳು ಜಿಲ್ಲೆಯ ಅನೇಕ ಭಾಗಗಳಲ್ಲಿ ಸಿಕ್ಕಿವೆ. ೧೬೯೨ರಲ್ಲಿ ಮೊಗಲ್ ಅಧಿಕಾರಿ ಪಚ್ಚಾಸಾಹೇಬನ ಆಡಳಿತದಲ್ಲಿ ಬಲ್ಲಾಳ ಸಮುದ್ರದ ವೀರಣ್ಣಗೌಡ, ರಾಮಯ್ಯ, ಮಹಂತಯ್ಯ ಇವರಿಗೆ ಒಡೆದು ಹೋಗಿದ್ದ ಕೆರೆಯನ್ನು ದುರಸ್ತಿ ಮಾಡಿಸಲು ಭೂಮಿಯನ್ನು ದಾನಮಾಡಿದುದಾಗಿ ಹೊಳಲ್ಕೆರೆ ಶಾಸನವು ತಿಳಿಸುತ್ತದೆ.[೨೧] ಹೊಳಲ್ಕೆರೆಯ ಶಾಸನವು ಮೊಗಲ್ ಕಂದಾಯ ಪದ್ಧತಿಯ ವಿವರವನ್ನು ಕೊಡುತ್ತದೆ.[೨೨] ಬಸವಾಪಟ್ಟಣದ ಹವಾಲ್‌ದಾರ್ ಬಾಬಾಸಾಹೇಬ್ ಕೆಳಸ್ಥರದ ಚನ್ನಣ್ಣ ವೃತ್ತಿದಾರರಿಗೆ ತೆರಿಗೆ ವಿನಾಯಿತಿಯನ್ನು ಕೊಟ್ಟನೆಂದು ತಿಳಿಸುತ್ತದೆ. ಅವನು ಅಣ್ಣಾಜಿಪಂತ್ ಮತ್ತು ಗ್ರಾಮದ ಶಾನುಬೋಗನ ಮಗ ಚಿಕ್ಕಣ್ಣ ಮೊದಲಾದವರಿಂದ ಈ ಜನರು ಹಿಂದಿನಿಂದಲೂ ವಿನಾಯಿತಿ ಪಡೆದಿದ್ದರೆಂಬುದನ್ನು ಖಚಿತ ಪಡಿಸಿಕೊಂಡು ಈ ಆಜ್ಞೆಯನ್ನು ಹೊರಡಿಸಿದನು.[೨೩] ಈ ಸಮಯದಲ್ಲಿ ಮೊಗಲ್ ದೊರೆ ಫರುಕ್ ಸಿಯರ್ ದೆಹಲಿಯಲ್ಲಿ ಚಕ್ರವರ್ತಿಯಾಗಿದ್ದನು. ಹೊಳಲ್ಕೆರೆಯಲ್ಲಿ ದೊರೆತ ಮತ್ತೊಂದು ಶಾಸನವು ಮೊಗಲರ ಆಡಳಿತ ವಿವರಗಳನ್ನು ಒಳಗೊಂಡಿದೆ. ಇದು ಮಹಮ್ಮದ್‌ಷಾನ ಕಾಲಕ್ಕೆ ಸಂಬಂಧಿಸಿದುದು ಶಾಸನವು ಅಳಿಸಿ ಹೋಗಿ ಹೆಚ್ಚಿನ ವಿವರಗಳನ್ನು ತಿಳಿಯಲು ಸಾಧ್ಯವಾಗಿಲ್ಲ. ಬಸವಾಪಟ್ಟಣದ ದೇಶಪಾಂಡೆ ದತ್ತಿಯನ್ನು ಕೊಟ್ಟ ವಿಷಯ ಉಲ್ಲೇಖಿಸಲ್ಪಟ್ಟಿದೆ.[೨೪]

ಮೇಲೆ ತಿಳಿಸಿದ ಎಲ್ಲಾ ರಾಜಮನೆತನಗಳ ಒಂದು ಆಡಳಿತವು ಹೊಳಲ್ಕೆರೆ ಪಟ್ಟಣಕ್ಕೆ ಮಾತ್ರ ಸೀಮಿತವಾಗಿರದೆ ತಾಲೂಕಿನಾದ್ಯಂತ ಮತ್ತು ಅಕ್ಕಪಕ್ಕದ ತಾಲೂಕಿನಾದ್ಯಂತ ಅರಸರು, ನಾಯಕರುಗಳು ಆಳ್ವಿಕೆ ನಡೆಸಿ ಪಟ್ಟಣವನ್ನು ವಿಸ್ತರಿಸಿ ಆಳ್ವಿಕೆ ನಡೆಸಿದ ಮತ್ತು ಅನೇಕ ದಾನದತ್ತಿಗಳು ನೀಡಿರುವುದು,

ಅಲ್ಲದೆ ದೇವಾಲಯಗಳ ನಿರ್ಮಾಣ, ಅನೇಕ ಧಾರ್ಮಿಕ ಕಾರ್ಯಗಳನ್ನು ಕೈಗೊಂಡಿರುವುದು ಹೊಳಲ್ಕೆರೆ ಪಟ್ಟಣದ ಇತಿಹಾಸದಿಂದ ಮನದಟ್ಟಾಗುತ್ತದೆ.

ಅಡಿಟಿಪ್ಪಣಿ

೧. ಗಿರಿಜ ಟಿ., ೧೯೯೧, ***ಚಿತ್ರದುರ್ಗ ಜಿಲ್ಲಾ ದರ್ಶಿನಿ,*** ಪು-೧೯೨-೧೯೩.

೨. ಸೋಮಶೇಖರ್ ಎಸ್.ವೈ., ೨೦೦೬, ***ಚಿತ್ರದುರ್ಗ ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳು; ದುರ್ಗಸಿರಿ,*** ರಾಜಶೇಖರಪ್ಪ ಬಿ, (ಸಂ)., ಪು-೧೪.

೩. ಶಿವತಾರಕ್ ಕೆ.ಬಿ., ೨೦೦೬, ***ಕರ್ನಾಟಕ ಪುರಾತತ್ವ ನೆಲೆಗಳು,*** ಪು೩೧,

೪. ಮಹಂತೇಶ್ ಎನ್.ಎಸ್., ೨೦೧೨, ***ಹೊಳಲ್ಕೆರೆ ತಾಲೂಕಿನಲ್ಲಿ ಕೆಲವು ಬೃಹತ್ ಶಿಲಾಯುಗದ ನೆಲೆಗಳ ಶೋಧ,*** ಕೃಷ್ಣಮೂರ್ತಿ ಪಿ.ವಿ., ದೇವರಾಜಸ್ವಾಮಿ ಜಿ.ಕೆ. (ಸಂ)., ಇತಿಹಾಸ ದರ್ಶನ (ಸಂ-೨೭), ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ಪು-೫,೬,೭.

೫. ಗಿರಿಜ ಟಿ., ೧೯೯೧, ಪೂರ್ವೋಕ್ತ, ಪು-೧೯೩.

೬. ಎಫಿಗ್ರಾಫಿ ಕರ್ನಾಟಿಕ ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೮೭.

೭. ಅದೇ, ಸಂಖ್ಯೆ-೩೦.

೮. ಅದೇ, ಸಂಖ್ಯೆ-೩೩.

೯. ಅದೇ, ಸಂಖ್ಯೆ-೮೮.

೧೦. ಸೀತರಾಮ್ ಜಾಗೀರ್‌ದಾರ್, ೧೯೬೭, ಪೂರ್ವೋಕ್ತ, ಪು-೨೪-೨೫.

೧೧. ಅದೇ, ಸಂಖ್ಯೆ-೨೫, ಕ್ರಿ.ಶ. ೧೧೦೦.

೧೨. ಅದೇ, ಸಂಖ್ಯೆ-೧, ಕ್ರಿ.ಶ. ೧೧೫೪.

೧೩. ನಾಗರಾಜು ಡಿ.ಎಂ., ೨೦೦೫, ***ಚಿತ್ರದುರ್ಗ ಪ್ರದೇಶದ ಉಚ್ಚಂಗಿ ಪಾಂಡ್ಯರ ಒಂದು ರಾಜಕೀಯ ಅಧ್ಯಯನ,*** ಪು-೭೫

೧೪. ನಾಗರಾಜು ಎಚ್.ಎಂ., ೧೯೭೬, ***ಚಿತ್ರದುರ್ಗ ಜಿಲ್ಲೆಯಲ್ಲಿ ಸೇವುಣರ ಆಳ್ವಿಕೆ,*** ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ, ಚಂದ್ರವಳ್ಳಿ, ಪು-೩೬.

೧೫. ಎ.ಕ., ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೧೩,೧೪, ಕ್ರಿ.ಶ. ೧೨೧೦.

೧೬. ಅದೇ, ಸಂಖ್ಯೆ-೨.

೧೭. ಶ್ರೀಲತೆ, ೧೯೭೬, ***ಚಿತ್ರದುರ್ಗ ಜಿಲ್ಲೆಯಲ್ಲಿ ಹೊಯ್ಸಳರ ಆಳ್ವಿಕೆ,*** ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ (ಸಂ), ಪು-೪೩.

೧೮. ಅದೇ, ಪು-೪೪.

೧೯. ಅದೇ, ಹೊಳಲ್ಕೆರೆ, ಸಂಖ್ಯೆ-೧೩೦.

೨೦. ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ್ ಎಂ.ವಿ., ೧೯೯೫, (ಸಂ), ಹು.ಶ್ರೀ.ಜೋ.ಸಂ.ಲೇ., ***ಚಿತ್ರದುರ್ಗ ಮಾತಾನಾಡುವ ಕಲ್ಲು,*** ಪು-೩೭೪,೩೭೬.

೨೧. ಎ.ಕ., ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೩೭.

೨೨. ಮಂಜುನಾಥಯ್ಯ ಟಿ.ಎಂ., ೨೦೦೫, ***ಕಂಪಿಲರಾಯ ಮತ್ತು ಚಿತ್ರದುರ್ಗ,*** ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಗೋಪಾಲ್ ಆರ್. (ಸಂ)., ಪು-೧೭೧.

೨೩. ರಾಜಶೇಖರಪ್ಪ ಬಿ., ೨೦೦೧, ***ಚಿತ್ರದುರ್ಗ ನಾಯಕರು ರಾಜಕೀಯ ಇತಿಹಾಸ,*** ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ವಸು ಎಂ.ವಿ. (ಸಂ)., ಪು-೯೩.

೨೪. ಕರ್ನಾಟಕ ಚರಿತ್ರೆ, ಸಂಪುಟ-೩, ಪು-೬೪.

೨೫. ಕನ್ನಡ ವಿಶ್ವಕೋಶ, ೧೯೮೭, ಪುಟ-೯೦೭, ಕೃಷ್ಣರಾವ್ ಎಂ.ವಿ., ಕೇಶವಭಟ್ಟ ಎಂ., ೧೯೭೦, ಕನಾಟಕದ ಇತಿಹಾಸ ದರ್ಶನ, ಪು-೪೫೭.

೨೬. ಸಂತೇ ಬೆನ್ನೂರು ಸುಮತೀಂದ್ರ ನಾಡಿಗ್, ೨೦೦೧, ***ಸಂತೇಬೆನ್ನೂರು ನಾಯಕರು,*** ಪು-೨೬೭,೨೬೮.

೨೭. ಎ.ಕ., ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೧೧೫.

೨೮. ಲಕ್ಷ್ಮಣ್ ತೆಲಗಾವಿ. ೧೯೭೬, ***ಚಿತ್ರದುರ್ಗ ಜಿಲ್ಲೆಯಲ್ಲಿ ಮೈಸೂರು ಒಡೆಯರ ಆಳ್ವಿಕೆ,*** ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ (ಸಂ)., ಪು-೧೦೨.

೨೯. ಅದೇ, ಪು-೧೦೩,೧೦೪.

೩೦. ಶ್ರೀನಿವಾಸ ಎಂ.ವಿ., ೧೯೭೬, ***ಚಿತ್ರದುರ್ಗ ಜಿಲ್ಲೆಯಲ್ಲಿ ಬಿಜಾಪುರ ಹಾಗೂ ಮೊಗಲರ ಆಳ್ವಿಕೆ,*** ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ. ಲಕ್ಷ್ಮಣ್ ತೆಲಗಾವಿ (ಸಂ)., ಪು-೯೧,೯೨.

೩೧. ಎ.ಕ., ಸಂಪುಟ-೧೧, ಹೊಳಲ್ಕೆರೆ, ಸಂಖ್ಯೆ-೧೨೬, ಕ್ರಿ.ಶ. ೧೬೯೨.

೩೨. ಅದೇ, ಹೊಳಲ್ಕೆರೆ, ಸಂಖ್ಯೆ-೬೩, ಕ್ರಿ.ಶ. ೧೭೧೬.

೩೩. ಅದೇ,

೩೪. ಅದೇ, ಹೊಳಲ್ಕೆರೆ, ಸಂಖ್ಯೆ-೧೯.

ಅಧ್ಯಾಯ ಮೂರು

ಶಾಸನಗಳು

ಶಾಸನ ಎಂಬ ಪದವು ಮೂಲತಃ ಒಂದು ಸಂಸ್ಕೃತ ಶಬ್ಧ ಶಾಸ್ ಎಂಬ ಧಾತುವಿನಿಂದ ನಿಷ್ಪನ್ನವಾಗಿದ್ದು, ಇದರ ಅರ್ಥ ಆಜ್ಞೆ ಅಪ್ಪಣೆ ಎಂದಾಗುತ್ತದೆ. ಆಂಗ್ಲ ಭಾಷೆಯಲ್ಲಿ ಇದಕ್ಕೆ inscription ಎಂದು ಹೇಳುತ್ತಾರೆ. ಆಂಗ್ಲ ಭಾಷೆಯಲ್ಲಿ inscribe ಎಂದರೆ ಕೊರೆ, ಕೆತ್ತು ಎಂದರ್ಥ ಆದುದ್ದರಿಂದ ಕಲ್ಲುಗಳಲ್ಲಿಯೊ, ಲೋಹಗಳಲ್ಲಿಯೊ ಕೆತ್ತಿದ ಬರಹಗಳಿಗೆ inscription ಎಂದು ಹೆಸರಾಯಿತು. ಹಿಂದೆ ರಾಜರು ಹೊರಡಿಸಿದ ಆಜ್ಞೆಗಳನ್ನು ಶಾಸನ ಎಂಬುದಾಗಿ ಕರೆಯುತ್ತಿದ್ದರು. ಪ್ರಾಚೀನ ಕಾಲದಲ್ಲಿ ರಾಜರು ತಮ್ಮ ಆಜ್ಞೆಗಳನ್ನು ಸಾವರ್ಜನಿಕರಿಗೆ ತಿಳಿಸಲು ಕಲ್ಲು, ತಾಮ್ರಪಟ ಇತ್ಯಾದಿಗಳಲ್ಲಿ ಬರೆಯಿಸುತ್ತಿದ್ದರು.

ಬಿ.ಸಿ. ಛಬ್ರಾ ಅವರು ಶಾಸನಗಳು ಭಾರತೀಯ ಇತಿಹಾಸದ ಜೀವನಾಡಿ ಎಂದಿದ್ದಾರೆ. ಶಾಸನಗಳನ್ನು ಪ್ರಶಸ್ತಿಗಲ್ಲು, ವೀರಗಲ್ಲು, ಮಹಾಸತಿಕಲ್ಲು ಎನ್ನಬಹುದು. ಕಲ್ಲು, ತಾಮ್ರ, ಚಿನ್ನ, ಬೆಳ್ಳಿ, ಕಂಚು, ಹಿತ್ತಾಳೆ, ಕಬ್ಬಿಣದ ತಗಡುಗಳನ್ನು ಮೊದಲಾದವುಗಳ ಮೇಲೆ ಬರೆಯುತ್ತಿದ್ದರು. ಶಾಸನ ಎಂಬ ಪದ ಕೇವಲ ರಾಜಾಜ್ಞೆಗಳಿಗೆ ಸಿಮಿತವಾಗಿರದೆ ಸಾರ್ವಜನಿಕರು ಕೊಡಮಾಡಿದ ದಾನ-ದತ್ತಿಗಳು ಸಹ ಶಿಲಾತಾಮ್ರ ಶಾಸನಗಳಲಿ ಇರುವುದನ್ನು ನೋಡಬಹುದಾಗಿದೆ.

ಒಟ್ಟಾರೆ ಶಾಸನಗಳನ್ನು ಕೆತ್ತಿದವು ಎಂಬ ಅರ್ಥದಲ್ಲಿಯೆ ಬಳಸಲಾಗುತ್ತದೆ. ಶಾಸನಗಳನ್ನು ಗಟ್ಟಿ ಪದಾರ್ಥದ ಮೆಲೆ ಕೆತ್ತಿರುವ ಉದ್ದೇಶ ಶಾಶ್ವತವಾಗಿ ಉಳಿಯ ಬೇಕೆಂಬುದೆ ಆಗಿದೆ. ಕೆಲವೊಂದು ಶಾಸನಗಳು, ಅಪ್ರಿಯಾವಾಗಿದ್ದರೂ ನಿಷ್ಪಕ್ಷಪಾತವಾದ ಸಂಗತಿಗಳನ್ನು ನಿರೂಪಿಸುತ್ತವೆ. ಶಾಸನಗಳಿಂದ ಕಾಲಗಣನೆ ಅವು ಯಾವ, ಯಾರ ಕಾಲದಲ್ಲಿ ಹೇಗೆ ರೂಪಿಸಲ್ಪಟ್ಟಿದೆಯೆಂದು ಹಾಗೂ ಅಂದಿನ ಕಾಲಘಟ್ಟದ ಹಲವು ಕ್ಷೇತ್ರಗಳ ಮೇಲೆ ಬೆಳಕು ಚೆಲ್ಲಲು ನೆರವಾಗುತ್ತವೆ.

ಉದ್ದೇಶ

ಶಾಸನಗಳನ್ನು ಹಾಕಿಸುವ ಉದ್ದೇಶ ದಾನ-ದತ್ತಿಗಳನ್ನು ತಿಳಿಸುವುದು ರಾಜನ ಪ್ರಶಸ್ತಿಯನ್ನು ವರ್ಣಿಸುವುದು ಆಗಿದ್ದರೂ, ಅಂದಿನ ಸಂಸ್ಕೃತಿಯನ್ನು ತಿಳಿದುಕೊಳ್ಳುವುದು ಇದರ ಮುಖ್ಯ ಉದ್ದೇಶ. ಶಾಸನಗಳಲ್ಲಿ ಕಾಲನಿರ್ದೇಶಗಳಿಲ್ಲದಿದ್ದರೂ ಲಿಪಿ ದೃಷ್ಟಿಯಿಂದ ಕಾಲನಿರ್ದೇಶನ ಮಾಡುವುದು ಇದರ ಇನ್ನೊಂದು ವಿಶೇಷತೆ. ಈ ಶಾಸನಗಳು ಸಮಕಾಲೀನ ದಾಖಲೆಗಳಾಗಿದ್ದರಿಂದ ಕೆಲವೊಮ್ಮೆ ಸಾಹಿತ್ಯಿಕ

ಕೃತಿಗಳಲ್ಲೂ ಸಿಗದಂತಹ ಕೆಲವೊಂದು ಘಟನಾವಳಿಗಳು ಶಾಸನಗಳಿಂದ ದೊರೆಯುತ್ತವೆ. ಬೀದಿಗಳಲ್ಲಿ, ಉದ್ಯಾನವನಗಳಲ್ಲಿ ನಾಲ್ಕು ದಾರಿಗಳು ಕೂಡುವ ಸ್ಥಳದಲ್ಲಿ ಬಹುಕಾಲ ಉಳಿಯುವಂತೆ ಶಾಸನಗಳನ್ನು ಇಟ್ಟಿರುವುದನ್ನು ಕಾಣುತ್ತೇವೆ. ಶಾಸನ ಅಧ್ಯಯನದಲ್ಲಿ ಗದ್ಯವೆ ಪ್ರಧಾನವಾದರೂ ಭಾಷಾ ದೃಷ್ಟಿಯಿಂದ ಲಿಪಿ ದೃಷ್ಟಿಯಿಂದ ನೋಡಿದಲ್ಲಿ ಇದರ ಚಾರಿತ್ರಿಕ ಬದಲಾವಣೆಯನ್ನು ಗುರುತಿಸಲು ಸಾಧ್ಯವಾಗುತ್ತದೆ.

ಹೊಳಲ್ಕೆರೆ ತಾಲೂಕಿನಲ್ಲಿ ೧೩೨ ಶಾಸನಗಳು ವಿವಿಧ ಕಡೆಗಳಲ್ಲಿ ಪ್ರಕಟಗೊಂಡಿವೆ. ಹೊಳಲ್ಕೆರೆ ಪಟ್ಟಣಕ್ಕೆ ಸಂಬಂದಿಸಿದ ಹಾಗೆ ೧೪ ಶಾಸನಗಳನ್ನು ಮಾತ್ರ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದ್ದು, ಕ್ರಿ.ಶ. ೧೦೯೩ರ ನೊಳಂಬ ಪಲ್ಲವರ ಶಾಸನವೆ ಅತ್ಯಂತ ಪ್ರಾಚೀನ ಕಾಲದ್ದಾಗಿದೆ. ಹೊಳಲ್ಕೆರೆ ಪಟ್ಟಣದ ಪ್ರಾಚೀನ ಜೈನಬಸದಿಗೆ ೧೨೧೪ರಲ್ಲಿ ದಾನ ನೀಡಿರುವುದು ಶಾಸನದಿಂದ ತಿಳಿದುಬರುತ್ತದೆ. ಇವುಗಳ ಬಗ್ಗೆ ಮುಂದೆ ತಿಳಿಯಬಹುದು.

ದಾನ ಶಾಸನಗಳು

ನಮ್ಮ ನಾಡು ದಾನಗಳ ತವರೂರು. ಇಲ್ಲಿಯ ಜನರು ಹಸಿದವರಿಗೆ ಅನ್ನ ನೀಡುವುದು, ಬಾಯಾರಿದವರಿಗೆ ನೀರು ಕೊಡುವುದು, ಒಂದು ಪುಣ್ಯದ ಕೆಲಸವೆಂದು ತಿಳಿದಿದ್ದರು. ಅಂತಹ ಕೆಲಸಗಳಿಂದ ಪುಣ್ಯ ಲಭಿಸುತ್ತದೆ. ಸ್ವರ್ಗ ಪ್ರಾಪ್ತಿಯಾಗುತ್ತದೆ. ಎಂಬ ನಂಬಿಕೆ ನಮ್ಮ ಪೂರ್ವಜರಲ್ಲಿ ಇತ್ತು. ಕಾಲಾನಂತರ ಇಂತಹ ದಾನಗಳು ಅನ್ಯರಿಂದ ಅಪಹರಿಸಲ್ಪಡುತ್ತಿದ್ದುದರಿಂದ ಇದನ್ನು ಗಮನಿಸಿದ ರಾಜರು ಕೊಟ್ಟಂತಹ ದಾನಗಳನ್ನು ಶಾಸನಗಳಲ್ಲಿ ದಾಖಲಿಸಲಾಗುತ್ತಿತ್ತು. ನಂತರ ದಾನ ನೀಡಿದ ಜನರು ತಮ್ಮ ಹೆಸರು ಉಳಿಯಲಿ ಎಂಬ ಕಾರಣದಿಂದ ತಾವುಗಳು ದಾನಶಾಸನಗಳನ್ನು ಹಾಕಿಸಲು ಪ್ರಾರಂಭಿಸಿದರು. ಇದರ ಫಲವಾಗಿ ದಾನಶಾಸನಗಳು ಹೆಚ್ಚು ಹುಟ್ಟಿದವು. ಹೊಳಲ್ಕೆರೆ ಪಟ್ಟಣದಲ್ಲಿ ಹೆಚ್ಚಾಗಿ ದಾನಶಾಸನಗಳಿರುವುದನ್ನು ಕಾಣಬಹುದು.

ಹೊಳಲ್ಕೆರೆ ಪಟ್ಟಣದ ಶಾಸನಗಳ ವಿವರ

೧. ಹೊಳಲ್ಕೆರೆ ಪಟ್ಟಣ ಕಸಬಾ ಶೆಟ್ಟರ ನಾಗಪ್ಪನವರು ಕೊಟ್ಟ ತಾಮ್ರ ಶಾಸನ

ಹೊಳಲ್ಕೆರೆ ಕ್ರಿ.ಶ. ೧೧೫೪ರ ಶಾಸನವು[೧] ಯಾವುದೇ ರಾಜವಂಶದ ಉಲ್ಲೇಖ ನೀಡದಿದ್ದರೂ ಉಲ್ಲೇಖಿತ ಕಾಲದ ಪ್ರಕಾರ ಶಾಸನವನ್ನು ಕಲ್ಯಾಣ ಚಾಲುಕ್ಯ/ಹೊಯ್ಸಳ ಕಾಲಕ್ಕೆ ಸೇರಿಸಬೇಕಾಗುತ್ತದೆ. ಹೊಳಲ್ಕೆರೆ ಶಾಂತಿನಾಥ ದೇವರ ಬಸದಿಯ ಜೀರ್ಣೋದ್ಧಾರ ಮತ್ತು ಅಲ್ಲಿಯ ದೇವರ ಅಮೃತಪಡಿ, ಗುರುಗಳ ಆಹಾರ ದಾನಕ್ಕೆ ದೊರೆತ ದತ್ತಿಯನ್ನು ದಾಖಲಿಸಿರುವ ಶಾಸನವು ದೇವತಾ ಮಹೋತ್ಸವದ ವಿವರಗಳನ್ನು ನೀಡಿದೆ. ವಿಮಾನ ಶುದ್ಧಿ, ವಾಸ್ತುವಿಧಿ, ನಾಂದೀಮಂಗಲ, ಧ್ವಜಾರೋಹಣ, ಭೇರಿತಾಡವ, ಅಂಕುರಾರ್ಪಣ, ಬ್ರಹ್ಮ ಚಾಂತಿಕ, ಮಂತ್ರನ್ಯಾಸ, ಅಂಗನ್ಯಾಸ, ಕೇವಲ ಜ್ಞಾನದ ಮಹಾಹೋಮ ಮಹಸ್ನಪನಾಭಿಷೇಕ, ಅಗ್ರೋದಕ ಪ್ರಭಾವನೆ, ಕಲಶ ಪ್ರಭಾವನೆ, ಮಹೋತ್ಸವ ಪ್ರಭಾವನೆ, ಮೂರು ಅಷ್ಟಾಹ್ನಿಕ ಪರ್ವ, ಶ್ರಾವಣ ಪೌರ್ಣಮಿ ಉತ್ಸವ, ಭಾದ್ರಪದ ಶುದ್ಧ ಅನಂತ ನೋಹಿ ಕಲಶ ಪ್ರಭಾವನೆ, ಮಹಾರಾಧನೆ, ಕಾರ್ತೀಕ ಮಾಸದ ಕಾರ್ತೀಕೋತ್ಸವ ಮಾಘ ಚತುರ್ದಶಿಯ ಜಿನರಾತ್ರಿ ಮಹೋತ್ಸವಗಳನ್ನು ಉಲ್ಲೇಖಿಸಿದೆ.

ಹೀಗೆ ಜನಸಾಮಾನ್ಯರನ್ನು ತನ್ನ ಬಳಿಗೆ ಸೇರಿಸಿಕೊಂಡು ಹಿಂದೂ–ಜೈನ ಧಾರ್ಮಿಕ ಸಾಮರಸ್ಯವನ್ನು ಸಾಧಿಸಲು ಬಸದಿಗಳು ಮಾಡಿದ ಪ್ರಯತ್ನಗಳು ತೀರಾ ಅಪರೂಪ ಎಂದು ಬೇರೆಡೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[೨] ಅದೇ ಕಾಲದ ಇನ್ನೊಂದು ಶಾಸನ ಅಲ್ಲಿಯೆ ಇದ್ದು ಅದು ಹೊಯ್ಸಳ ವೀರಬಲ್ಲಾಳನನ್ನು ಹೆಸರಿಸಿದೆ.

೨. ಹೊಳಲ್ಕೆರೆ ಪಟ್ಟಣದ ಶಾಂತಿನಾಥ ಬಸದಿಗೆ ಪಡುವ ಕಡೆ ಗೋಡೆಗೆ ಸೇರಿಸಿ ಇರುವ ಕಲ್ಲು

ಶಾಸನದ ಪ್ರಕಾರ ಸುಮಾರು ೮೦೦ ವರ್ಷಗಳ ಹಿಂದೆ ಶ್ರೀಮೂಲ ಸಂಘದ ಶ್ರೀ ಪಾರ್ಶ್ವಭಟ್ಟಾರಕ ಮಹಾಸ್ವಾಮಿಗಳು ಈ ಜಿನಮಂದಿರವನ್ನು ಜೀರ್ಣೋದ್ಧಾರ ಮಾಡಿದರೆಂದು ತಿಳಿದುಬರುತ್ತದೆ.[೩]

ಶಾಸನದಲ್ಲಿರುವ ಕೆಲವು ವಿವರಗಳು ಈ ದೇವಸ್ಥಾನದ ಮಹಿಮೆಯನ್ನು ಅರಿತು ಅಂದಿನ ನೋದಣ್ಣಗೌಡ ಮೊದಲಾದವರು ನೀಡಿದ ದಾನದತ್ತಿಗಳು ನಿಂತು ಹೋಗಿದ್ದವು. ಪುನಃ ಅವರ ಸತ್ಪುತ್ರರಾದ ಸೋಮಣ್ಣಗೌಡ, ಶಾಂತಣ್ಣಗೌಡ ಮತ್ತು ಆದಣ್ಣಗೌಡ ಎಂಬುವರು ನೂರು ಗದ್ಯಾಣಗಳನ್ನು ಪ್ರತಾಪನಾಯಕರಿಗೆ ನೀಡಿ ಇಲ್ಲಿಯ ಹಿರೇಕೆರೆಯ ಹಿಂದಣ ತೋಟ, ಗದ್ದೆ, ಹೊಲವನ್ನು ಜಿನಮಂದಿರಕ್ಕೆ ಕೊಟ್ಟು ಅದರಿಂದ ಬರುವ ಉತ್ಪತ್ತಿಯಲ್ಲಿ ಪ್ರತಿನಿತ್ಯದ ಪೂಜೆ, ಮುನಿಗಳಿಗೆ ಆಹಾರ ದಾನ ಮೊದಲಾದ ಕಾರ್ಯಗಳಿಗೆ ವಿನಿಯೋಗ ಮಾಡಲು ತಿಳಿಸಲಾಗಿದೆ. ಈ ದತ್ತಿಯನ್ನು ಕ್ರಿ.ಶ. ೧೧೫೪ರಲ್ಲಿ ಶ್ರೀಮುಖ ಸಂವತ್ಸರದ ಮಾಘಶುದ್ಧ ೧೦ನೆಯ ಶುಕ್ರವಾರ ನೀಡಿದ್ದು. ಈ ದತ್ತಿಯ ಉತ್ಪನ್ನದಲ್ಲಿ ನಡೆಸಿಕೊಂಡು ಬರಬೇಕಾದ ಇತರ ಧಾರ್ಮಿಕ ಕಾರ್ಯಗಳ ವಿವರಗಳನ್ನು ಒಳಗೊಂಡಿದೆ.

೩. ಹೊಳಲ್ಕೆರೆ ಪಟ್ಟಣದ ಕೋಟೆ ಬಾಗಿಲ ಎಡಭಾಗದಲ್ಲಿರುವ ಕಲ್ಲು

ಕ್ರಿ.ಶ. ೧೧೭೧ರ ವೇಳೆಗೆ ಆ ಭಾಗದಲ್ಲಿ ನೊಳಂಬ ಪಲ್ಲವರ ಅಧಿಕಾರವು ದುರ್ಬಲವಾಗಿದ್ದಂತೆ ತೋರುತ್ತದೆ. ಶಾಸನಗಳಲ್ಲಿ 'ಪೊಳಲಕೆರೆ' ಎಂದು ಸಂಬೋಧಿತವಾಗಿರುವ ಹೊಳಲ್ಕೆರೆಯ ಶಾಸನವೊಂದರಲ್ಲಿ[೪] ತ್ರಿಭುವನಮಲ್ಲ ರಾಜ್ಯವನ್ನು ಹೆಸರಿಸಿ ಮಹಾಸಾಮಂತ ದಾಕರಸ ಎಂಬ ಹೆಂಜುಂಕದ ಅಧಿಕಾರಿಯು ನೀಡಿದ ದಾನವನ್ನು ದಾಖಲಿಸಲಾಗಿದೆ. ಅಲ್ಲಿಯ ಇನ್ನೊಂದು ಶಾಸನವು ಕ್ರಿ.ಶ. ೧೧೦೦ರಲ್ಲಿ ಮಾರನಾಯಕ ಎನ್ನುವ ಒಬ್ಬ ಅಧಿಕಾರಿಯನ್ನು ಹೆಸರಿಸಿದೆ.[೫]

೪. ಹೊಳಲ್ಕೆರೆ ಪಟ್ಟಣದ ಶಂಕರ ದೇವಸ್ಥಾನದ ಒಳಗೆ ಗೋಡೆಯಲ್ಲಿರುವ ೧ನೆಯ ಕಲ್ಲು

ಹೊಯ್ಸಳ ಕಾಲದ ಶಾಸನವಾಗಿದ್ದು, ವೀರಬಲ್ಲಾಳ ಮತ್ತು ನರಸಿಂಹನ ಬಗ್ಗೆ ಉಲ್ಲೇಖವಿದೆ. ಶಾಲಿವಾಹನ ಶಕೆ ೧೧೩೯(ಕ್ರಿ.ಶ.೧೨೧೭) ಈಶ್ವರ ಸಂವತ್ಸರದ ಪುಷ್ಯಶುದ್ಧ ಉತ್ತಾರಾಯಣ, ಸಂಕ್ರಮಣ, ಚಂದ್ರಗ್ರಹಣದ ಬಗ್ಗೆ ಉಲ್ಲೇಖಿಸಿದೆ. ಪುಷ್ಯಶುದ್ಧ ೧೨೧೭ ಜನವರಿಯ ೧೩ರಂದು ಶನಿವಾರ ಸೂರ್ಯಗ್ರಹಣ ಡಿಸೆಂಬರ್ ೧೭, ಭಾನುವಾರದಂದು ಚಂದ್ರಗ್ರಹಣ ಬಗ್ಗೆ ತಿಳಿಸುತ್ತದೆ.[೬] ಮತ್ತೆ ಹೊಳಲ್ಕೆರೆ ಸ್ವಯಂ ಭೂ ಕಲಿದೇವರಿಗೆ ದೇವಾಲಯಕ್ಕೆ ಕೋಡಿಹಳ್ಳಿಯನ್ನು ಮೂಕಜ್ಜಿಯ ಮಗ ಕಾಳಮುಖ ಮಠಕ್ಕೆ ದತ್ತಿ ಬಿಟ್ಟಿರುವುದು ತಿಳಿದುಬರುತ್ತದೆ.

೫. ಹೊಳಲ್ಕೆರೆ ಪಟ್ಟಣದ ಶಂಕರ ದೇವಸ್ಥಾನದ ೨ನೆಯ ಕಲ್ಲಿನಲ್ಲಿ

ಶಂಕರದೇವಸ್ಥಾನದ ೨ನೆಯ ಕಲ್ಲಿನಲ್ಲಿ ಈ ಶಾಸನವು ಕಂಡುಬರುತ್ತದೆ. ಇದು ಸಹ ಮರನಾಯಕ ದಂಡಯಾತ್ರೆಯಿಂದ ಹಿಂದಿರುಗಿ ಬರುವಾಗ ಹೊಳಲ್ಕೆರೆಯ ಶಂಕರದೇವರಿಗೆ ದಾನದತ್ತಿ ಬಿಟ್ಟಿರುವುದರ ಬಗ್ಗೆ ಮತ್ತೆ ಪೊಳಲಕೆರೆ ಎಂದು ಈ ಶಾಸನದಲ್ಲಿ ಉಲ್ಲೇಖಗೊಂಡಿದೆ.[೬] ಪೊಳಲ್ ಎಂದರೆ ಹಳ್ಳಿ, ಗ್ರಾಮ, ಪಟ್ಟಣ, ಊರು ಇದು ನಿರ್ದಿಷ್ಟ ವ್ಯಕ್ತಿಯ ಹೆಸರು. ವ್ಯಕ್ತಿಯನಾಮದ ಜೊತೆಗೆ ನಿರ್ದಿಷ್ಟವಾಗಿ ಪೊಳಲ್ ಎಂದು ಸೇರಿಕೊಂಡಿದೆ.

೬. ಹೊಳಲ್ಕೆರೆ ಪಟ್ಟಣದ ಗೋಪಾಲಕೃಷ್ಣ ದೇವಸ್ಥಾನದ ರಂಗಮಂಟಪದ ಕೈಸಾಲೆ ಕಂಬದಲ್ಲಿ

ಈ ಸೀಮೆಯನ್ನು ಶ್ರೀಮನ್ಮಹಾನಾಯಕಾಚಾರ್ಯ ಕಾಮಗೇತಿ ಮದಕರಿನಾಯಕನು ತನ್ನ ಮಯಿದುನ ಗುಲ್ಲಿಯ್ಯಪ್ಪನಾಯಕನಿಗೆ ಉಂಬಳಿಯಾಗಿ ಕೋಟ್ಟಿದ್ದ[೭] ಕ್ರಿ.ಶ. ೧೫೬೮ ಶಾಸನವೊಂದಲ್ಲಿ ಹೊಳಲ್ಕೆರೆಯ "ಶ್ರೀಮದ್ಭಕ್ತಪಾಲ ಶ್ರೀ ವೇಣುಗೋಪಾಲ ಕೃಷ್ಣಸ್ವಾಮಿ" ದೇವಾಲಯವನ್ನು ಮದಕರಿನಾಯಕರು ಜೀರ್ಣೋದ್ಧಾರ ಮಾಡಿಸಿ ದೇವಾಲಯದ ಮುಖಮಂಟಪವನ್ನು ನಿರ್ಮಿಸಿರುವುದು ಕಂಡುಬರುತ್ತದೆ.

೭. ಹೊಳಲ್ಕೆರೆ ಪಟ್ಟಣದ ಗೋಪಾಲಕೃಷ್ಣ ದೇವಾಸ್ಥಾನದ ತಾಮ್ರಶಾಸನದ ನಕಲು

ಹೊಳಲ್ಕೆರೆಯ ಮಾಗಣೆಗೆ ಸೇರಿದ ಹಲವಾರು ಗ್ರಾಮಗಳನ್ನು ಆ ದೇವಾಲಯಕ್ಕೆ ದಾನವಾಗಿ ಕೊಟ್ಟ ವಿವರವಿದೆ.[೮] ಕ್ರಿ.ಶ. ೧೫೬೮ರಲ್ಲಿ ಈ ಶಾಸನದಲ್ಲಿ ಉಕ್ತವಾಗಿರುವ ಗ್ರಾಮಗಳು:

೧. ಭೀಮಾ ಅಗ್ರಹಾರ>ಭೀಮಸಮುದ್ರ(?) ಹಿರೇಗುಂಟೂರು ಹೋಬಳಿ, ಚಿತ್ರದುರ್ಗ ತಾಲೂಕು ೨. ವಾಮಲ್ಲಾಪುರಿ–ವಾಮಲಪುರದ ಕಾವಲ್, ಭರಮನಾಯಕನ ದುರ್ಗ ಹೋಬಳಿ, ಹೊಳಲ್ಕೆರೆ ತಾಲೂಕು, ೩. ಕೊಮಾರಾಕೆರೆ–ಕೊಮಾರನ ಕಣಿವೆ, ಕಸಬ ಹೋಬಳಿ, ಹೊಸದುರ್ಗ ತಾಲೂಕು. ೪. ಚೆಂನಪುರ–ಚೆನ್ನಪುರ ಕಸಬ ಹೋಬಳಿ, ಹೊಸದುರ್ಗ ತಾಲೂಕು. ೫. ಮಲ್ಲಾಕ್ಕಾಪುರ–ಮಲ್ಕಾಪುರ, ಕಸಬ ಹೋಬಳಿ, ಹೊಳಲ್ಕೆರೆ ತಾಲೂಕು. ೬. ದೊಡಾಪುರ–ದೊಡ್ಡಾಪುರ ಕಸಬ ಹೋಬಳಿ, ಚಿತ್ರದುರ್ಗ ತಾಲೂಕು. ೭.ಗಿಲಕೇನಹಳ್ಳಿ–ಗಿಲಕೇನಹಳ್ಳಿ ಕಸಬ ಹೋಬಳಿ, ಹೊಳಲ್ಕೆರೆ ತಾಲೂಕು. ೮. ಹಳೆಹಳ್ಳಿ–ಹಳೆಹಳ್ಳಿ, ಕಸಬ ಹೋಬಳಿ, ಹೊಳಲ್ಕೆರೆ ತಾಲೂಕು. ೯. ಯಂಮಿಗನೂರು–ಯೆಮಿಗನೂರು, ತಾಳ್ಯ ಹೋಬಳಿ, ಹೊಳಲ್ಕೆರೆ ತಾಲೂಕು. ೧೦. ಆದಾಪುರ–ಆದಮೂರು(?) ಕಸಬ ಹೋಬಳಿ, ಹೊಳಲ್ಕೆರೆ ತಾಲೂಕು. ೧೧. ಬೊಂಮನಕಟ್ಟೆ–ಬೊಮ್ಮನಕಟ್ಟೆ ಕಸಬ ಹೋಬಳಿ, ಹೊಳಲ್ಕೆರೆ ತಾಲೂಕು. ೧೨. ಹನುಮಂತನಹಳ್ಳಿ–ಹನುಮಂತಹನಹಳ್ಳಿ ಕಾವಲ್ ಕಸಬ ಹೋಬಳಿ, ಹೊಳಲ್ಕೆರೆ ತಾಲೂಕು. ೧೩. ಹಿರೆಕರೆ, ೧೪. ಸರಕಟೆ, ೧೫. ಬೈರವನ ಹಳ್ಳಿ, ಗ್ರಾಮಗಳನ್ನು ಗುರುತಿಸುವುದು ಕಷ್ಟ..

ಒಟ್ಟಾರೆ ಹೊಳಲ್ಕೆರೆ ತಾಲೂಕಿನ ಕಸಬ ಹೊಬಳಿ ಭರಮಣನಾಯಕನ ದುರ್ಗ, ಹೊಸದುರ್ಗ ತಾಲೂಕಿನ ಕಸಬ ಮತ್ತು ಚಿತ್ರದುರ್ಗ ತಾಲೂಕಿನ ಕಸಬ, ಹಿರೇಗುಂಟನೂರು ಹೋಬಳಿಗೆ ಸೇರಿದ ಹಲವಾರು ಗ್ರಾಮಗಳು ಈ ಸೀಮೆ, ಮಾಗಣೆಯಲ್ಲಿ ಸಮಾವೇಶಗೊಂಡಿದ್ದವೆಂದು ಸ್ಥೂಲವಾಗಿ ಹೇಳಬಹುದಾಗಿದೆ.

೮. ಹೊಳಲ್ಕೆರೆ ಪಟ್ಟಣದ ಗೋಪಾಲಸ್ವಾಮಿ ದೇವಸ್ಥಾನದ ಪ್ರಕಾರದಲ್ಲಿ ಬಿದಿರುವ ಕಲ್ಲು

ಪ್ರಸ್ತುತ ಗೋಪಾಲಸ್ವಾಮಿ ದೇವಸ್ಥಾನದ ಹತ್ತಿರವಿದೆ. ಆದರೆ ಈ ಶಾಸನವು ಜೈನರ ಒಂದು ನಿಷಧಿಶಾಸನವಾಗಿದ್ದು, ಮರಣ ಹೊಂದಿರುವುದರ ಬಗ್ಗೆ ತಿಳಿದುಬರುತ್ತದೆ. ಇದು ಶಕವರ್ಷ ೧೨೫೦ (೧೨ನೆಯ ಶತಮಾನದ) ಕಾಲಮಾನವನ್ನು ತಿಳಿಸುತ್ತದೆ.[೧೦] ಅಕ್ಷರ ತೃಟಿತಗೊಂಡಿವೆ.

೯. ಹೊಳಲ್ಕೆರೆ ಪಟ್ಟಣದಲ್ಲಿ ತೂಗದಲೆ ಗಣಪತಿ ದೇವಸ್ಥಾನದ ದೇವರ ಬಲಗಡೆಕಲ್ಲು

ಈ ಶಾಸನದಲ್ಲಿ ಶಾಲಿವಾಹನ ಶಕವರ್ಷ ಸಂವತ್ಸರದ ಬಗ್ಗೆ ರಾಯರು ಎಂದು ಕಂಡುಬರುತ್ತದೆ.[೧೧] ಇದು ತೃಟಿತಗೊಂಡಿದೆ.

೧೦. ಗಣಪತಿ ದೇವರ ಎಡಗಡೆ ೧ನೆಯ ಕಲ್ಲಿನಲ್ಲಿ ಕಂಡುಬರುತ್ತದೆ.

ಇದರಲ್ಲಿ ಶಾಲಿವಾಹನ ಶಕ ೧೪೪೪ (೧೫೨೨) ಚೈತ್ರ ಭಾನು ಸಂವತ್ಸರದ ಬಗ್ಗೆ ತಿಳಿಸಿಕೊಡುತ್ತದೆ.[೧೨] ಆದರೆ ಅಕ್ಷರಗಳು ಮುಂದೆ ಕಾಣುವುದಿಲ್ಲ.

೧೧. ಗಣಪತಿ ದೇವಾಲಯದ ೨ನೆಯ ಕಲ್ಲಿನಲ್ಲಿ ಕಂಡು ಬರುತ್ತದೆ.

೧೪೬೮ನೆಯ (೧೫೪೬) ಪರಭವ ಸಂವತ್ಸರದ ಬಗ್ಗೆ ತಿಳಿಸಿಕೊಡುತ್ತದೆ.[೧೩] ಇದು ವಿಜಯನಗರದ ಅರಸ ರಾಮರಾಯನ ಕಾಲದಲ್ಲಿ ನಾಯಕರಿಗೆ ತೆರಿಗೆಯಲ್ಲಿ ವಿಶೇಷ ರಿಯಾಯಿತಿಯನ್ನು ಕಲ್ಪಿಸಿರುವುದರ ಬಗ್ಗೆ ತಿಳಿದುಬರುತ್ತದೆ.

೧೨. ಹೊಳಲ್ಕೆರೆ ಪಟ್ಟಣದ ಗಣಪತಿ ದೇವಸ್ಥಾನದ ೩ನೆಯ ಕಲ್ಲಿನಲ್ಲಿ

ಇದು ಗಣಪತಿ ದೇವಸ್ಥಾನದ ೩ನೆಯ ಕಲ್ಲಿನಲ್ಲಿ ಕಂಡುಬರುತ್ತದೆ.[೧೪] ಇದರಲ್ಲಿ ನರಸಪ್ಪನಾಯಕನು ಖಂಡೋಜ, ಭದ್ರೋಜ, ತಿಮ್ಮೋಜ, ನಾಯಕರುಗಳಿಗೆ ತೆರಿಗೆಯನ್ನು ಕೊಟ್ಟಿರುವುದು ತಿಳಿದುಬರುತ್ತದೆ.

ಒಟ್ಟಾರೆ ಮೂರು ಶಾಸನಗಳು ವಿಜಯನಗರದ ಅರಸರ ನಾಯಕರ ಬಗ್ಗೆ ಅವರು ತೆರಿಗೆಯನ್ನು ಸಲ್ಲಿಸುತ್ತಿದ್ದುದರ ಬಗ್ಗೆ ತಿಳಿಸಿಕೊಡುತ್ತವೆ. ಶಾಸನ ಪಾಠದ ಸಾಲುಗಳು ತೃಟಿತಗೊಂಡಿವೆ.

೧೩. ಹೊಳಲ್ಕೆರೆ ಪಟ್ಟಣದಲ್ಲಿ ಗ್ರಾಮಕ್ಕೆ ಉತ್ತರ ಶಾನುಭೋಗ ಕೃಷ್ಣಪ್ಪನವರು ತೋಟದ ಬೇಲಿಯಲ್ಲಿರುವ ೧ನೆಯ ಕಲ್ಲು[೧೫]

ಇದು ಹೊಯ್ಸಳ ವೀರಬಲ್ಲಾಳನ ಕಾಲದ್ದಾಗಿದ್ದು, ನಾರಾಯಣ ದೇವರ ಕಾರ್ಯದ ಬಗ್ಗೆ ಶಂಕರದೇವರು, ಪಟ್ಟಣಸ್ವಾಮಿ, ವಿದ್ಯಾಧಾರಸ್ವಾಮಿ ದೇವರಿಗೆ ದತ್ತಿ ಬಿಟ್ಟಿರುವುದರ ಬಗ್ಗೆ ತಿಳಿಸುತ್ತದೆ.

೧೪. ಹೊಳಲ್ಕೆರೆ ಪಟ್ಟಣದ ಅದೇ ಸ್ಥಳದ ೨ನೆಯ ಕಲ್ಲು

ವೀರಬಲ್ಲಾಳನ ಕಾಲದಾಗಿದ್ದು, ಇದರಲ್ಲಿ ಕರಸಂವತ್ಸರ, ಶುದ್ಧಶ್ರೇಯ ಶ್ರಾವಣಬಹುಳ (ಕೃಷ್ಣಪಕ್ಷ) ಹೊಬರಣೆ (ತುಂಬಿಕೊಂಡು ಬರುವ ಬಾವಿ) ವಿಷ್ಣು, ನಾರಾಯಣ ದೇವರಿಗೆ ವಿಷ್ಣು ಆರಾಧಕರಾದ ಮಾಧವ ದೇವರಿಗೆ ಆರಾಧನೆಗೆ ದಾರಪೂರ್ವಕವಾಗಿ ಭೂಮಿಯನ್ನು, ಓರೇಕೆರೆ, ಕಂಬವನ್ನು ದತ್ತಿಯನ್ನಾಗಿ ಕೊಟ್ಟಿರುವುದು ಕಂಡುಬರುತ್ತದೆ.[೧೬] ಈ ಶಾಸನದಲ್ಲಿ ಸ್ವಲ್ಪ ಕರಸಂವತ್ಸರ, ಶುದ್ಧಸಂವತ್ಸರದಲ್ಲಿ

ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಶುದ್ಧಸಂವತ್ಸರ ಅಂದರೆ ಮಂಗಳವಾರದ ಆಗಸ್ಟ್ ೧ನೆಯ ತಾರೀಖು ೧೦೩೩ (೧೧೧೧) ದನಿಷ್ಠ ನಕ್ಷತ್ರ ಬೆಳಿಗ್ಗೆ ಈ ಶಾಸನ ಹಾಕಿಸಿರುವುದು ಶುದ್ಧಸಂವತ್ಸರ ಬಹುಳ (ಕೃಷ್ಣಪಕ್ಷ) ೧೦ನೆಯ ಭಾನುವಾರ ಎಂದು ಉಲ್ಲೇಖವಿದೆ. ಆದರೆ ಅದು ಭಾನುವಾರ ಆಗುವುದಿಲ್ಲ ಮಂಗಳವಾರ ಶುದ್ಧಸಂವತ್ಸರ ಬರುತ್ತದೆ. ಇಲ್ಲಿ ಭಾನುವಾರದಂದು ಬರೆದು ಕೊಟ್ಟಿರಬೇಕು ಹಾಗೆಯೇ ಇಲ್ಲಿ ಹಾಕಿಸಿದ್ದಾರೆ ಎಂದು ೧೦ನೆಯ ಭಾನುವಾರ ಎಂದು ಉಲ್ಲೇಖಗೊಂಡಿದೆ.

ಹೊಳಲ್ಕೆರೆ ಪಟ್ಟಣದಲ್ಲಿ ಪ್ರಮುಖವಾಗಿ ೧೪ ಶಾಸನಗಳಿದ್ದು ಅದರಲ್ಲಿ ಪ್ರಮುಖವಾಗಿ ಅಂದರೆ ಹೊಯ್ಸಳರ, ವಿಜಯನಗರ ಶಾಸನಗಳು ಕಂಡುಬರುತ್ತವೆ. ಈ ಶಾಸನಗಳನ್ನು ಗಮನಿಸದರೆ ಹೊಯ್ಸಳರ ಅರಸ ವೀರಬಲ್ಲಾಳ, ನರಸಿಂಹ ಅರಸನು ದೇವಾರಿಗೆ ದಾನದತ್ತಿ ನೀಡಿರುವುದು ಕಂಡುಬರುತ್ತದೆ. ಅದೇ ರೀತಿ ವಿಜಯನಗರದ ಸದಾಶಿವರಾಯ, ರಾಮರಾಯರ ಬಗ್ಗೆ ನಾಯಕರಿಗೆ ತೆರಿಗೆಯ ವಿನಾಯಿತಿ ನೀಡಿರುವುದರ ಬಗ್ಗೆ ತಿಳಿದುಬರುತ್ತದೆ.

ಅಡಿ ಟಿಪ್ಪಣಿ

೧. **ಎಪಿಗ್ರಾಫಿ ಕರ್ನಾಟಿಕ, ಸಂಪುಟ–೧೧:** ಹೊಳಲ್ಕೆರೆ, ಸಂಖ್ಯೆ–೧, ಕ್ರಿ.ಶ. ೧೧೫೪.

೨. ಡಾ. ಗೋಪಾಲ್ ರಾವ್ ಎಚ್.ಎಸ್., ೧೯೯೩: **ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯ ದೇವಾಲಯಗಳ–ಒಂದು ಸಾಂಸ್ಕೃತಿಕ ಅಧ್ಯಯನ,** ಪು–೧೯೫.

೩. **ಎಪಿಗ್ರಾಫಿ ಕರ್ನಾಟಿಕ ಸಂಪುಟ–೧೧:** ಹೊಳಲ್ಕೆರೆ, ಸಂಖ್ಯೆ–೨, ಕ್ರಿ.ಶ. ೧೧೫೪.

೪. ಅದೇ, ಸಂಖ್ಯೆ–೩, ಕ್ರಿ.ಶ. ೧೧೯೩.

೫. ಅದೇ, ಸಂಖ್ಯೆ–೨೫, ಕ್ರಿ.ಶ. ೧೧೦೦.

೬. ಅದೇ, ಸಂಖ್ಯೆ–೪, ಕ್ರಿ.ಶ.೧೨೧೭.

೭. ಅದೇ. ಸಂಖ್ಯೆ–೫.

೮. ಅದೇ, ಸಂಖ್ಯೆ–೬, ಕ್ರಿ.ಶ. ೧೫೬೮.

೯. ಅದೇ, ಸಂಖ್ಯೆ–೭, ಕ್ರಿ.ಶ. ೧೫೬೮.

೧೦. ಅದೇ, ಸಂಖ್ಯೆ–೮, ಕ್ರಿ.ಶ. ೧೨೫೦.

೧೧. ಅದೇ, ಸಂಖ್ಯೆ–೯.

೧೨. ಅದೇ, ಸಂಖ್ಯೆ–೧೦, ಕ್ರಿ.ಶ. ೧೫೨೨.

೧೩. ಅದೇ, ಸಂಖ್ಯೆ–೧೧, ಕ್ರಿ.ಶ. ೧೪೬೮.

೧೪. ಅದೇ, ಸಂಖ್ಯೆ–೧೨.

೧೫. ಅದೇ, ಸಂಖ್ಯೆ–೧೩.

೧೬. ಅದೇ, ಸಂಖ್ಯೆ–೧೪, ಕ್ರಿ.ಶ. ೧೧೧೧.

ಅಧ್ಯಾಯ-೪

ಐತಿಹ್ಯ, ಸ್ಥಳನಾಮ ಮತ್ತು ಸ್ಥಳಪುರಾಣ

ಅಲೆಮಾರಿ ಜೀವನದಿಂದ ಆರಂಭವಾದ ಮಾನವನ ಬದುಕು ಕ್ರಮೇಣ ಒಂದೆಡೆ ನಿಲ್ಲುವಂತಾಯಿತು. ಅಲೆಮಾರಿ ಸಮುದಾಯಗಳು ಭೌಗೋಳಿಕ ಪರಿಸರದ ಕಲ್ಲಿನ ಆಸರೆ, ಬೆಟ್ಟದ ಅಂಚಿನಲ್ಲಿ ತಂಗುತ್ತಿದ್ದು, ಕಾಲ ಕ್ರಮೇಣ ನಾಗರಿಕರಾದರು. ಅಲೆಮಾರಿತನವನ್ನು ತೊರೆದು ಒಂದೆಡೆ ನೆಲೆಸಲು ಆರಂಭಿಸಿದರು. ಈ ನೆಲೆಸುವಿಕೆಯು ಪ್ರಾಥಮಿಕವಾಗಿ ಒಂದೊಂದು ಗುಂಪಿನ ಮಾದರಿಯಾಗಿತ್ತು. ತದ ನಂತರ ಹಲವು ಗುಂಪುಗಳಾಗಿ ಒಟ್ಟಿಗೆ ಬದುಕುವುದನ್ನು ಆರಂಭಿಸಿದರು. ಈ ಹಂತವನ್ನು ಸಮುದಾಯಗಳು ನೆಲೆಸುವಿಕೆಯ ಗ್ರಾಮ ಕಲ್ಪನೆಯ ಪೂರ್ವ ಸ್ಥಿತಿಯೆಂದು ತಿಳಿಯಲಾಗಿದೆ. ಅದರಂತೆ ಆಯಾ ಭೌಗೋಳಿಕ ಪರಿಸರದಲ್ಲಿ ವಾಸಿಸುವ ಗುಂಪುಗಳ ವಸತಿ ಆರಂಭವಾಯಿತು. ಈ ನೆಲೆಗಳಿಗೆ ಗುರುತು ಹೇಳುವ ಸಲುವಾಗಿ ಒಂದು ಹೆಸರಿನ ಅಗತ್ಯ ತೋರಿಬಂದಿತು. ಈ ಅಗತ್ಯವೆ ನೆಲೆಗಳಿಗೆ ಹೆಸರಿಸುವ, ಗ್ರಾಮ ಸ್ಥಳನಾಮಗಳ ಆರಂಭವಾದುದರ ಕುರುಹು ಎನ್ನಬಹುದು. ಆಯಾ ಪ್ರಾದೇಶಿಕ ಮಟ್ಟದಲ್ಲಿ ನೆಲೆಸುವ ಸಮುದಾಯಗಳು ಆರಂಭದಲ್ಲಿ ಪ್ರಾಕೃತಿಕ ಚಹರೆಯೊಂದಿಗೆ ತಮ್ಮ ನೆಲೆಗಳಿಗೆ ಹೆಸರನ್ನಿಟ್ಟುಕೊಂಡರು. ಬೆಟ್ಟ, ಗುಡ್ಡ, ಗಿಡ, ಮರ, ಕಲ್ಲು, ಮಣ್ಣು ಇವುಗಳ ಗಾಢ ಸಂಬಂಧವು ಹೆಸರುಗಳಿಗೆ ಪ್ರೇರೇಪಿಸಿರಬೇಕು.

ಹೆಚ್ಚಾಗಿ ಸಮುದಾಯಗಳು ವಾಸಿಸುತ್ತಿದ್ದುದು ಬೆಟ್ಟದ ಅಂಚಿನ ದಿನ್ನೆ ಪ್ರದೇಶ ಮತ್ತು ತಮಗೆ ಅಗತ್ಯವಾಗಿ ಬೇಕಾದಂತಹ ನೀರಿನ ಅನುಕೂಲತೆ ಇರುವಲ್ಲಿ. ಜಗತ್ತಿನ ಬಹುತೇಕ ಪ್ರಾಚೀನ ನಾಗರಿಕತೆಗಳು ಆರಂಭವಾದದ್ದು ನದಿದಂಡೆಯ ಮೇಲೆ ಎಂಬುದನ್ನು ಗಮನಿಸಿದರೆ ಸಮುದಾಯಗಳ ನೆಲೆಸುವಿಕೆಯ ಆಯ್ಕೆಯು ಸ್ಪಷ್ಟವಾಗಿ ಗೋಚರಿಸುತ್ತದೆ. ಅಂತೆಯೇ ಪಶುಪಾಲನೆ ಮತ್ತು ಕುರಿ ಸಾಕಾಣಿಕೆಯು ಬೆಟ್ಟದ ಬದಿಯಲ್ಲಿ ಅನುಕೂಲಕರವಾಗಿತ್ತು. ಆ ವೃತ್ತಿಯೊಂದಿಗೆ ತಮ್ಮ ವಾಸದ ನೆಲೆಗಳನ್ನು ಸಮುದಾಯಗಳು ಅಲ್ಲಿಯೇ ನಿರ್ಮಿಸಿಕೊಂಡರು. ಈ ಕಾರಣದಿಂದಾಗಿ ಪ್ರಕೃತಿಯ ಗಾಡವಾದ ಸಂಬಂಧದೊಂದಿಗೆ ತಳುಕುಹಾಕಿಕೊಂಡ ಮಾನವರು ಆರಂಭಿಕ ಹಂತದಲ್ಲಿ ಪ್ರಕೃತಿನಿಷ್ಠ ಗ್ರಾಮನಾಮಗಳ ಉದಯಕ್ಕೆ ನಾಂದಿಯಾಯಿತು. ಹೀಗೆ ಗ್ರಾಮ ಸಮಾಜಗಳು ಆರಂಭಗೊಂಡವು.

ಒಂದು ಮಹಾಸಾಮ್ರಾಜ್ಯದ ಏಳ್ಗೆಗೆ ಆಧಾರ ಸ್ತಂಭಗಳಂತಿರುವ ಸಣ್ಣಪುಟ್ಟ ಪ್ರಾಂತ್ಯಗಳು ಮತ್ತು ಪಾಳೆಯಪಟ್ಟುಗಳ ರಚನೆಗೆ ಹಲವು ಸಮಾಜಗಳ ಅವಶ್ಯಕತೆಯಿದೆ. ಇತಿಹಾಸ ಮತ್ತು ಸಂಸ್ಕೃತಿಯನ್ನು

ಕುರಿತ ಆಳವಾದ ಅಧ್ಯಯನವೆಂದರೆ ಅದು ಸ್ಥಳನಾಮ ಅಧ್ಯಯನ ಎಂದು ಹೇಳಿದರೆ ತಪ್ಪಾಗಲಾರದು. ಜನ ಸಾಮಾನ್ಯರ ನೋವು, ನಲಿವು, ಆಚಾರ-ವಿಚಾರ, ರೂಢಿ ಸಂಪ್ರಾದಾಯಗಳಂತಹ ಸಾಂಸ್ಕೃತಿಕ ಅಂಶಗಳ ಕುರಿತು ಸೂಕ್ಷ್ಮತರವಾದ ವಿಚಾರಗಳು ದಾಖಲಾಗಿರುವುದು ಆ ಪರಿಸರದ ಜನರಿಂದ ಹೆಸರಿಸಲ್ಪಟ್ಟ ಸ್ಥಳಗಳಿಂದ ಎಂಬುದು ವೇದ್ಯವಾಗುತ್ತದೆ. ಆಯಾಯ ಕಾಲಘಟ್ಟದಲ್ಲಿ ಹೆಸರಿಸಲ್ಪಟ್ಟ ಗ್ರಾಮನಾಮಗಳಿಂದ ಆ ಸ್ಥಳಗಳ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಅಧ್ಯಯನಕ್ಕೆ ಆಕರವಾಗುವುದರಲ್ಲಿ ಸಂಶಯವಿಲ್ಲ. ಈ ಹಿನ್ನೆಲೆಯಲ್ಲಿ ಸ್ಥಳನಾಮಗಳ ಚಾರಿತ್ರಿಕ ಅಧ್ಯಯನ ಅವಶ್ಯಕವಾಗಿದೆ. ಸ್ಥಳನಾಮಗಳ ಕುರಿತ ಅಧ್ಯಯನ ಮೇಲ್ನೋಟಕ್ಕೆ ಸಾಮಾನ್ಯ ವಿಷಯವಾಗಿದೆ. ಆದರೆ ಅದರಲ್ಲಿ ಎಷ್ಟೊಂದು ಮಹತ್ವಪೂರ್ಣವಾದ ಸಂಗತಿಗಳು ಹುದುಗಿಕೊಂಡಿರುವುದಲ್ಲದೆ ಅದೆಷ್ಟೋ ಅಜ್ಞಾತ ವಿಷಯಗಳು ಬೆಳಕಿಗೆ ಬಂದಿವೆ. ಸೂಕ್ಷ್ಮವಾಗಿ ವಿಮರ್ಶಿಸಿದಷ್ಟು ಹಿಂದೆ ಆಗಿಹೋದ ಅನೇಕ ಪ್ರಾಚೀನ ಐತಿಹಾಸಿಕ ಘಟನೆಗಳಿಗೆ ಶಾಸನಗಳಲ್ಲಿ ದೊರೆಯದ ಆಧಾರಗಳು ಸ್ಥಳನಾಮದಲ್ಲಿ ಸಿಕ್ಕುತ್ತಿವೆ. ಇತಿಹಾಸವು ಸಾಮಾನ್ಯ ಜನರ ಹೆಸರನ್ನು ಕಡೆಗಣಿಸಿ ತೀರ ಸಾಮಾನ್ಯರೆಂದು ಅವರನ್ನು ಉಲ್ಲೇಖಿಸುವುದಿಲ್ಲವೋ ಅಂತಹ ಅನೇಕಾನೇಕ ಅರಸರು, ನಾಯಕರು, ಗೌಡರು, ಕುರುಬರು, ಗೊಲ್ಲರು ಮೊದಲಾದವರು ತಮ್ಮ ಹೆಸರಿನಲ್ಲಿ ಹಟ್ಟಿ-ಊರುಗಳನ್ನು ಕಟ್ಟಿಕೊಂಡು ತಮ್ಮ ಮಟ್ಟಿಗೆ ಅಜರಾಮರಾಗಿದ್ದಾರೆ. ಚಾರಿತ್ರಿಕವಾಗಿ ಸ್ಥಳಪುರಾಣಗಳಲ್ಲಿ ಅವರ ಹೆಸರುಗಳು ಬೆರೆತು ಹೋಗಿರುವುದು ಹಾಗೂ ಹಲವಾರು ಗ್ರಾಮಗಳಿಗೆ ನೀಡಿದ ದಾನದತ್ತಿಪರವಾದ ವಿವರಗಳು ಪ್ರಕಟಗೊಳ್ಳಲು ಸಾಧ್ಯ. ಹೊಸ ಹೊಸ ಅಗ್ರಹಾರಗಳನ್ನು ನಿರ್ಮಾಣ ಮಾಡಿ ಅವುಗಳಿಗೆ ನೀಡಿದ ಪ್ರತಿನಾಮಕರಣ ಹೀಗೆ ಹಲವಾರು ಸಂದರ್ಭಗಳ ವಿಷಯಗಳು ಸ್ಥಳನಾಮಗಳಲ್ಲಿ ಹುದುಗಿರುವುದು ಸ್ಪಷ್ಟ.

೪.೧ ಐತಿಹ್ಯ

ನಂಬಿಕೆಗಳು, ಅತಿಮಾನುಷ ಶಕ್ತಿಗಳು, ವಾಸ್ತವದಲ್ಲಿ ನಡೆದ ಘಟನೆಗಳು, ಪುರಾಣ ವ್ಯಕ್ತಿಗಳು, ಐತಿಹಾಸಿಕ ವ್ಯಕ್ತಿಗಳು-ತ್ಯಾಗ-ಬಲಿದಾನಕ್ಕೆ ಸಂಬಂಧಿಸಿದವರು, ಅನನ್ಯ ಪ್ರೀತಿಗೆ ಹೆಗ್ಗುರುತಾದವರು ಸಾಂಸ್ಕೃತಿಕ ವೀರರು, ಸಂಸ್ಕೃತಿಯ ಮೂಲಪುರುಷರು. ರಾಜರ ಸಾಧನೆಗಳು, ಜನಸಾಮಾನ್ಯರ ನೋವು-ನಲಿವು ಸಾಧನೆ-ದುರಂತಗಳು ಇತ್ಯಾದಿ ಐತಿಹ್ಯಗಳ ವಸ್ತುಗಳಾಗುತ್ತವೆ. ಕೆಲವೊಂದು ಕಥೆಗಳು-ಹಾಡುಗಳು ಜನಪದರ ಮನಸ್ಸಿನಲ್ಲಿ ನೆಲೆಯೂರಿರುತ್ತವೆ. ಕಥಾನಾಕ ಪಾತ್ರಗಳಿಗೆ ಒದಗುವ ಸಂಕಷ್ಟಗಳು ಪಾತ್ರಗಳ ಸಾತ್ವಿಕತೆ ಇತ್ಯಾದಿ ಗುಣಗಳಿಗೆ ಸ್ಪಂದಿಸುವ ಜನರ ಮನಸ್ಸುಗಳು ಅಲ್ಲಿನ ಅನುಭವಗಳನ್ನು ಲೋಕಾನುಭವದಲ್ಲಿ ಕಂಡುಕೊಳ್ಳುವ ಪ್ರಯತ್ನವನ್ನು ಮಾಡುತ್ತವೆ. ಎಲ್ಲೋ ನಡೆದ ಘಟನೆಗಳನ್ನು ತಮ್ಮ ಸುತ್ತ-ಮುತ್ತ ನಡೆದಂತೆ ಆರೋಪಿಸುತ್ತಾರೆ. ಇಂಥ ಸಂದರ್ಭಗಳು ಐತಿಹ್ಯಗಳ ಆಶಯಗಳಾಗುತ್ತವೆ. ಯಾವುದೊ ವಿಷಯ ಈ ನೆಲದ ಮೇಲಿನ ಯಾವುದೋ ನೆಲೆಯನ್ನು ಒದಗಿಸುವುದರ ಮೂಲಕ ಸಾಬೀತು ಮಾಡುವ ಸಂಗತಿಯಾಗಿ ಐತಿಹ್ಯವು ಉಳಿದುಬಿಡುತ್ತದೆ. ಇದು ಐತಿಹ್ಯದ ಮುಖ್ಯ ಗುಣ. ವ್ಯಕ್ತಿ, ಸ್ಥಳ, ಬೆಟ್ಟ, ಗುಡ್ಡ, ಕೋಟೆ, ಕೆರೆ-ಕಟ್ಟೆ-ಬಾವಿ, ಪ್ರಾಕೃತಿಕ ವಿಸ್ಮಯಕಾರಿ ಅಥವಾ ಭಯಂಕರವಾದ ಘಟಕ ಇತ್ಯಾದಿಗಳೆಲ್ಲವೂ ಐತಿಹ್ಯಗಳ ವಸ್ತುಗಳಿಗೆ ನೆಲೆಗಳಾಗಿವೆ.

ಐತಿಪ್ಯ ಒಂದು ನಿರ್ದಿಷ್ಟ ಭೌಗೋಳಿಕ ಪರಿಸ್ಥಿತಿಗೆ ಸೀಮಿತಗೊಂಡು ಹುಟ್ಟಿದೆ ಅಥವಾ ರೂಪುಗೊಂಡಿರುವುದನ್ನು ಸ್ಥಳೀಯ ಐತಿಹ್ಯ ಎಂದು ಕರೆಯುತ್ತಾರೆ. ಇದು ಸ್ಥಳೀಯ ವಸ್ತು, ವ್ಯಕ್ತಿ ಅಥವಾ ಘಟನೆಯ ವಿಶಿಷ್ಟ ಗುಣ ಸ್ವಭಾವಗಳನ್ನು ವಿವರಿಸುವುದಾಗಿರುತ್ತದೆ. ಸ್ಥಳೀಯ ಸಂಪ್ರದಾಯ ಅಥವಾ ಪರಂಪರೆಯನ್ನು ಕುರಿತು ಈ ಬಗೆಯ ಐತಿಹ್ಯಗಳು ಹೇಳುತ್ತಾರೆ.

ವಸ್ತು, ಸ್ಥಳ, ವ್ಯಕ್ತಿ, ಪ್ರಾಣಿ-ಪಕ್ಷಿಗಳ ಹೆಸರನ್ನು ಸೂಚಿಸುವ ಪದಕ್ಕೆ ನಾಮಪದ ಎನ್ನುತ್ತೇವೆ. ಇದರಲ್ಲಿ ರೂಢನಾಮ, ಅಂಕಿತನಾಮ, ಅನ್ವರ್ಥನಾಮ ಎಂಬ ಅನೇಕ ಪ್ರಭೇದಗಳಿವೆ. ಅಂಕಿತನಾಮ ವ್ಯಕ್ತಿ, ಪ್ರಾಣಿ-ಪಕ್ಷಿ ಸ್ಥಳಗಳು ಬಹುಸಂಖ್ಯೆಯಲ್ಲಿದ್ದಾಗ ಅಥವಾ ಅತಿ ಬಳಕೆಯಲ್ಲಿದ್ದಾಗ ಅಂತಹ ಅಂಕಿತನಾಮಗಳು ಸಾಮಾನ್ಯವಾದ ಮಟ್ಟಕ್ಕಿಳಿಯುತ್ತವೆ. ಸ್ಥಳನಾಮಗಳು ಸಾಮಾನ್ಯವಾಗಿ ಅಂಕಿತನಾಮಗಳಾಗುತ್ತವೆ.[೧]

ಸ್ಥಳನಾಮಗಳ ವರ್ಗೀಕರಣ

೧. ಪ್ರಾಕೃತಿಕ ಸ್ಥಳನಾಮ

೨. ಸಾಂಸ್ಕೃತಿಕ ಸ್ಥಳನಾಮ

ಮಾನವ ಪ್ರಕೃತಿಯೊಂದಿಗೆ ಸಹಜವಾಗಿ ಬದುಕುತ್ತಿರುವ ಸಂದರ್ಭದಲ್ಲಿ ಕಲ್ಲು, ಬೆಟ್ಟ, ಗುಡ್ಡ, ಗಿರಿಗಳಲ್ಲಿ ನೆಲೆ ಮಾಡಿಕೊಂಡಿದ್ದ ಆಸರೆಗಳನ್ನು ಗುರುತಿಸುವ ಸಂದರ್ಭದಲ್ಲಿ ಆ ಕಲ್ಲು ಗುಡ್ಡಗಳಿಂದಲೇ ಹೆಸರಿಸಲು ಪ್ರಾರಂಭಿಸಿದನು.

೧ ಪ್ರಾಕೃತಿಕ ಸ್ಥಳನಾಮಗಳನ್ನು-ಜಲವಾಚಕ, ಶಿಲಾವಾಚಕ, ಭೂವಾಚಕ, ಪ್ರಾಣಿ ಪಕ್ಷಿವಾಚಕ ಸಸ್ಯವಾಚಕ, ಪ್ರಮಾಣವಾಚಕ, ದಿಕ್ಕುವಾಚಕ, ಖನಿಜವಾಚಕ ಎಂಬುದಾಗಿ ವಿಭಾಗಿಸಿ ಅಧ್ಯಯನ ಮಾಡಲಾಗಿದೆ.

ಜಲವಾಚಕ

ಆದಿಮಾನವ ತನ್ನ ಜೀವನವನ್ನು ಪ್ರಾರಂಭಿಸಿದುದು ನೀರಿನ ತಾಣಗಳಲ್ಲೆ ಅಲ್ಲಿಯೇ ಮಾನವನ ಸಂಸ್ಕೃತಿಗಳು ಪ್ರಸಿದ್ಧಿಗೆ ಬಂದಿರುವುದು. ನದಿ ಪರಿಸರ, ಕೆರೆ, ಹಳ್ಳ, ಕೊಳ್ಳ, ಕುಂಟೆಗಳಂತಹ ಕೃತಕ ಜಲಸಂಗ್ರಾಹಕಗಳನ್ನು ನಿರ್ಮಿಸಿಕೊಂಡು ಗ್ರಾಮಗಳನ್ನು ನಿರ್ಮಿಸಿಕೊಂಡರು.

ಎರಿ- ಜಲವಾಚಿ ಪದ

ಉದಾ: ಎರಿ+ಊರು=ಏರೂರು.

ಈ ಪರಿಸರದಲ್ಲಿ ಕಂಡುಬರುವ ಜಲವಾಚಿ ಸ್ಥಳನಾಮಗಳೆಂದರೆ, ಹೊಳಲ್ಕೆರೆ, ಹೊನ್ನೆಕೆರೆ, ಹಿರೇಕೆರೆ, ಗಂಜಿಗಟ್ಟೆ, ಗಂಜಿಕೆರೆ, ಕೆಸರುಕಟ್ಟೆ, ಇತ್ಯಾದಿ ಕಂಡುಬರುತ್ತವೆ.

ಭೂಸ್ಥಿತಿ ವಾಚಕ

ಮಾನವ ತಾನು ಜೀವಿಸಲು ನೆಲೆನಿಂತು ತನ್ನ ಸುತ್ತಲಿನ ಪ್ರದೇಶವನ್ನಲ್ಲದೆ. ಭೌಗೋಳಿಕ ವೈಶಿಷ್ಟ್ಯಗಳಾದ

ಗುತ್ತಿ, ಬೆಟ್ಟ, ಕಾಡು, ತಗ್ಗು, ದಿಬ್ಬ, ಕೋಟೆ, ದುರ್ಗ, ಇಳಿಜಾರು ಮುಂತಾದವುಗಳಿಂದ ಗುರುತಿಸಿದನು. ಈ ಭೂಸ್ಥಿತಿ ಹೊಂದಿದ ಕೆಲವು ಸ್ಥಳನಾಮಗಳು ಹೀಗೆ ಕಂಡುಬರುತ್ತವೆ.

ಗುತ್ತಿ: ಗುತ್ತಿಕಟ್ಟೆ, ಗುತ್ತಿ ಎಂದರೆ ಎತ್ತರ ಭೂಮಿ.[2]

ಗುಡ್ಡ: ಗುಡ್ಡದ ನೇರುಕೆರೆ.

ದುರ್ಗ: ದುರ್ಗಾವರವು ಭೌಗೋಳಿಕವಾಗಿ, ಬೆಟ್ಟ-ಗುಡ್ಡಗಳಿಂದ ಕೂಡಿರುವುದು.

ಪ್ರಾಣಿ-ಪಕ್ಷಿ ವಾಚಕ

ಪ್ರಾಣಿ-ಪಕ್ಷಿಗಳು ಪ್ರಕೃತಿಯಲ್ಲಿ ತಮ್ಮದೆ ಆದ ಸ್ಥಾನವನ್ನು ಪಡೆದುಕೊಂಡಿವೆ. ಮಾನವ ತನ್ನ ಜೀವನದೊಂದಿಗೆ ಬದುಕುವ ಅಥವಾ ತಮಗೆ ಅತಿಮಾನುಷವೆಂದು ತೋರುವ ಪ್ರಾಣಿ-ಪಕ್ಷಿಗಳ ಹೆಸರನ್ನು ತಮ್ಮ ವಾಸದ ನೆಲೆಗಳಿಗೆ ನಿರ್ದೇಶಿಸುತ್ತಾರೆ. ಈ ಪರಿಸರದಲ್ಲಿ ಕಂಡುಬರುವ ಸ್ಥಳನಾಮಗಳೆಂದರೆ

ಗೂಳಿಹಟ್ಟಿ, ಗೂಳಿಹಳ್ಳಿ, ಗಟ್ಟಿಹೊಸಹಳ್ಳಿ, ಇತ್ಯಾದಿ ಪಟ್ಟಣದ ಪರಿಸರದ ಸುತ್ತ ಮುತ್ತ ಈ ರೀತಿಯ ಹೆಸರುಗಳು ಕಂಡುಬರುತ್ತವೆ.

ಸಸ್ಯವಾಚಕ

ಪ್ರಾಚೀನ ಕಾಲದಿಂದಲೂ ಪ್ರಾಕೃತಿಕ ಸಂಪತ್ತುಗಳ ಮಧ್ಯೆ ಬದುಕುತ್ತಿರುವ ಮಾನವನು ಗಿಡ-ಮರಗಳ ಬಗ್ಗೆ ಒಂದು ರೀತಿಯ ಆರಾಧನಾ ಮನೋಭಾವನೆ ಬೆಳಸಿಕೊಂಡು ಬಂದಿದ್ದಾನೆ. ಈ ಪರಿಸರದಲ್ಲಿ ಸಾಮಾನ್ಯವಾಗಿ ಬೆಳೆಯುತ್ತಿದ್ದ ಮರ, ಗಿಡ, ದವಸ-ಧಾನ್ಯ ಮುಂತಾದವುಗಳ ಹೆಸರಿನಲ್ಲಿ ಸ್ಥಳನಾಮಗಳು ಕಂಡುಬರುತ್ತವೆ.

ಹೊಳಲ್ಕೆರೆ ಪಟ್ಟಣದಲ್ಲಿ ಹಿಂದೆ ಒಂದು ಬೀದಿಯಲ್ಲಿ ತರಕಾರಿ ಮಾರಾಟ ಮಾಡುವುದಕ್ಕೆ ಸೋಪ್ಪಿನ ಕೇರಿ ಎಂದು ಕರೆಯುತ್ತಿದ್ದರು ಈಗಲೂ ಸಹ ಆ ಕೇರಿಯನ್ನು ಸೋಪ್ಪಿನ ಕೇರಿ ಎನ್ನುವರು.

ಪ್ರಮಾಣ ವಾಚಕ

ಒಂದೇ ಹೆಸರಿನ ಹಲವಾರು ಸ್ಥಳಗಳು ಇರುವ ಕಡೆ ಆ ಪ್ರದೇಶವನ್ನು ಗುರುತಿಸಲು ಹಿರಿದು-ಕಿರಿದು, ಚಿಕ್ಕದು-ದೊಡ್ಡದು, ಮೇಲೆ-ಕೆಳಗೆ ಎಂಬ ಪ್ರಮಾಣಗಳನ್ನು ಬಳಸಿಕೊಂಡರು.

ಕೆಲವು ಸ್ಥಳನಾಮಗಳೆಂದರೆ, ಹೆಗ್ಗೆರೆ, ಹೆಬ್ಬಳಿ, ಚಿಕ್ಕಯಗಟ್ಟಿ ಹೇರೂರು, ಹಿರಿಯೂರು, ದೊಡಘಟ್ಟ, ಉಳ್ಳಾರ್ತಿ, ಚಿಕ್ಕಉಳ್ಳಾರ್ತಿ ಈ ರೀತಿಯ ಊರುಗಳು ಹೊಳಲ್ಕೆರೆ ಪರಿಸರದಾದ್ಯಂತ ಇವೆ.

ದಿಕ್ಕು ಸೂಚಕ

ಒಂದು ಪ್ರದೇಶದ ಸ್ಥಳಗಳನ್ನು ಗುರುತಿಸುವಲ್ಲಿ ದಿಕ್ಕು, ರಸ್ತೆ, ಗುಡಿ, ಮುಂತಾದ ವರ್ಗಗಳನ್ನು ಒಳಗೊಂಡ ಸ್ಥಳನಾಮಗಳು ಕಂಡು ಬರುತ್ತವೆ. ಗಡಿಯಪ್ಪನ ಹಟ್ಟಿ ಇದಕ್ಕೆ ಉತ್ತಮ ಉದಾಹರಣೆ

ಕೋಟೆ: ನಿರ್ಮಾಣವಾಚಿ, ಸೇನೆಯ ರಕ್ಷಣೆಗೆ ಕಟ್ಟಿದ ಪ್ರಕಾರ, ಬದಲಾಗಿ ಗೋಡೆಯ ಆವರಣ, ದುಗ್ಗ, ಗಡ, ಕಿಲ್ಲೆ. ತೆಲುಗಿನಲ್ಲಿ ಕೋಟೆ-ಗೋಟ ಎಂದು ಬಳಕೆಯಲ್ಲಿದೆ. ಹೋಳಲ್ಕೆರೆಯಲ್ಲಿ ಕೋಟೆ ಇದ್ದು ಅದರಿಂದ ಹೊಳಲ್ಕೆರೆ ಎಂದು ಬಂದಿರಬಹುದು.

ಸಾಂಸ್ಕೃತಿಕ ಸ್ಥಳನಾಮ

ಬಹಳಷ್ಟು ಸ್ಥಳಾನಾಮಗಳು ವ್ಯಕ್ತಿವಾಚಿಯಾಗಿ ಜಾತಿಯನ್ನು ಸೂಚಿಸುತ್ತಾ ದೇವರನ್ನು ಸೂಚಿಸುವ ಸ್ಥಳನಾಮಗಳು ಸೇರಿವೆ. ಪುರುಷ ಹೆಸರಿನ ಸ್ಥಳನಾಮಗಳು ಹಾಗೂ ಸ್ತ್ರೀ ಹೆಸರಿನ ಸ್ಥಳನಾಮಗಳು ಕಂಡುಬರುವುದು ವಿಶಿಷ್ಟ.[೪]

ಜಾತಿವಾಚಕ ಸ್ಥಳನಾಮ

ಸ್ಥಳನಾಮಗಳಲ್ಲಿ ಜಾತಿಗೆ ಸಂಬಂಧಿಸಿದ ಅಂಶಗಳು ಬಹುಮುಖ್ಯ ಪಾತ್ರವನ್ನುವಹಿಸುತ್ತವೆ. ಜನಾಂಗೀಯ ಅಧ್ಯಯನಕ್ಕೆ ಈ ಬಗೆಯ ಹೆಸರುಗಳು ಮಹತ್ವದ ಆಕರಗಳಾಗಿವೆ. ಹೋಳಲ್ಕೆರೆಯಲ್ಲಿ ಜಾತಿಗೋಂದು ಕೇರಿಗಳಿರುವವು. ಅವುಗಳನ್ನು ಈ ಕೆಳಗಿನಂತೆ ವಿಶ್ಲೇಶಿಸಲಾಗಿದೆ.

ಬ್ರಾಹ್ಮಣರ ಬೀದಿ

ಬ್ರಾಹ್ಮಣ ಎನ್ನುವುದು ಒಂದು ಪಂಗಡ[೪]. ಸ್ಥುತ್ತಿ, ಪಾಠಕ ವೃತ್ತಿಯವ, ಭಂಟ್ಟಂಗಿ ಸ್ವಾಮಿತ್ತ, ಒಡೆತನ, ಶಾಸ್ತ್ರಗಳನ್ನರಿತ ಭಟ್ಟಾಚಾರ್ಯ,[೫] ಮಾಧವ ಬ್ರಾಹ್ಮಣರ ಅಗ್ರಹಾರ, ಹೊಳಲ್ಕೆರೆಯ ಪಟ್ಟಣದಲ್ಲಿ ಬ್ರಾಹ್ಮಣರ ಕೇರಿ (ಬೀದಿ) ಇರುವುದು ಕಂಡು ಬರುತ್ತದೆ. ಅಂದರೆ ಹಿಂದೆ ಇಲ್ಲಿ ಬ್ರಾಹ್ಮಣರು ವಾಸವಾಗಿದ್ದು ಅವರು ಪೂಜೆಗಳಲ್ಲಿ ತೂಡಗಿಕೊಂಡಿದ್ದರು ಈಗಲೂ ಈ ಕೇರಿಯಲ್ಲಿ ಬ್ರಾಹ್ಮಣರ ಕುಟುಂಬಗಳು ವಾಸವಾಗಿವೆ.

ತಳವಾರಿಕೆ/ರಾಜಬೀದಿ

ಹೊಳಲ್ಕೆರೆ ಪಟ್ಟಣದಲ್ಲಿ ಪ್ರತಿನಿಧಿಸುತ್ತಿರುವ ಜಾತಿ ಎಂದರೆ ತಳವಾರಿಕೆ ನಡೆಸುವವರು. ಪ್ರಾಚೀನ ಕಾಲದ ರಾಜರ ಆಳ್ವಿಕೆಯಲ್ಲಿ ಗೌಡ, ಗಾವುಂಡ, ಶಾನುಭೋಗ, ಕುಲಕರ್ಣಿಗಳ ಹಾಗೆ ಊರಿನ ಪ್ರಮುಖ ಕಾರ್ಯಗಳಲ್ಲಿ ತಳವಾರನ ಪಾತ್ರವು ಮುಖ್ಯ. ಈ ತಳವಾರನು ಊರಿನ ಜಾತ್ರೆ-ಉತ್ಸವ ಹಾಗೂ ಹಬ್ಬ ಹರಿದಿನಗಳಲ್ಲಿ ಊರಿನ ಪ್ರಮುಖ ವಿಷಯಗಳನ್ನು ಮಾತನಾಡುವಲ್ಲಿ ಹಾಗೆಯೆ ಎಲ್ಲರನ್ನು ಸೇರಿಸುವ ಪ್ರಮುಖ ಕಾಯಕ ತಳವಾರನದಾಗಿತ್ತು. ಊರಿಗೆ ತಳವಾರನಾಗಿ ಹುಟ್ಟಬೇಡ ಎನ್ನುವ ಮಾತಿನ ಹಿಂದೆ ಅವನು ಮಾಡುವಂತಹ ಕಾರ್ಯವನ್ನು ಧ್ವನಿಸುತ್ತದೆ. ಹೊಳಲ್ಕೆರೆ ಪಟ್ಟಣದಲ್ಲಿ ವಿಜಯನಗರ ಅರಸರ ಕಾಲದಿಂದಲೂ ಈ ತಳವಾರರು ಇದ್ದು ಅವರೆ ಒಂದು ಪ್ರತ್ಯೇಕ ಬೀದಿಯಲ್ಲಿ ವಾಸಿಸುತ್ತಿದ್ದರು. ಈಗಲೂ ನಾಯಕರ ಕೇರಿ ಎಂಬುದು ಇದೆ.

ಸೋಪ್ಪಿನ ಬೀದಿ

ಸೊಪ್ಪು ಮಾರುವ ಬೀದಿಗೆ ಹೊಳಲ್ಕೆರೆಯಲ್ಲಿ ಸೊಪ್ಪಿನ ಬೀದಿ ಎನ್ನುವರು.

ಹೆಸರುಗಳನ್ನು ಕುರಿತಾದ ಅಧ್ಯಯನ ತುಂಬಾ ಕುತೂಹಲಕಾರಿ ಮಾತ್ರವಲ್ಲದೆ ಅತ್ಯಂತ ಪ್ರಯೋಜನಕಾರಿ ಕ್ಷೇತ್ರವಾಗಿದೆ. ಈ ಪಟ್ಟಣದಲ್ಲಿ ಹಿಂದಿನಿಂದ ತರಕಾರಿ, ಸೋಪ್ಪು ಮಾರಾಟ ಮಾಡುವ ಒಂದು ಜಾಗಕ್ಕೆ ಸೋಪ್ಪಿನ ಬೀದಿ ಎನ್ನುವರು. ಈಗ ಅದು ಬದಲಾಗಿದೆ.

ದೈವವಾಚಿ

ಸಂಸ್ಕೃತಿಯಲ್ಲಿ ದೇವರ ಪಾತ್ರ ಅನನ್ಯವಾದುದು. ಜೀವನದ ಹಲವಾರು ಸಂಗತಿಗಳಲ್ಲಿ ದೈವ ಅಸ್ತಿತ್ವವನ್ನು ಕಂಡುಕೊಳ್ಳುವುದು ನಮ್ಮ ಸಂಸ್ಕೃತಿಯ ಪರಂಪರೆಯಾಗಿ ಮುಂದುವರೆಯುತ್ತಿದೆ. ಹಾಗೆಯೇ ಗ್ರಾಮ, ಊರುಗಳ ಹೆಸರುಗಳಿಗೂ ದೇವರ ನಾಮವನ್ನು ಹೆಸರಿಸುವುದು ವಾಡಿಕೆಯಾಗಿದೆ. ಸಮುದಾಯಗಳು ತಾವು ನಂಬಿದ ಕುಲದೈವ, ಮನೆದೈವ, ಗ್ರಾಮ ದೇವತೆ. ಪ್ರಾದೇಶಿಕ ದೇವತೆ, ಹೀಗೆ ಹಲವಾರು ದೇವರುಗಳ ಹೆಸರನ್ನು ತಮ್ಮ ನೆಲೆಗಳಿಗೆ ಇಟ್ಟುಕೊಂಡರೆ ಶುಭವೆಂದು ನಂಬುತ್ತಾರೆ. ಈ ಮೂಲಕ ತಮ್ಮ ಸಂಸ್ಕೃತಿಯ ಒಂದು ಭಾಗವೆಂದು ದೇವರನ್ನು ಸ್ವೀಕರಿಸಿದ್ದೇವೆ ಹೊಳಲ್ಕೆರೆ ಪಟ್ಟಣದ ದೈವವಾಚಿ ಸ್ಥಳನಾಮಗಳ ಕುರಿತು ಹೀಗೆ ವಿಶ್ಲೇಷಿಸಲಾಗಿದೆ.

ಕುರುಬರ ಬೀದಿ

ಪಟ್ಟಣದಲ್ಲಿ ಕುರುಬರು ನೇಲೆಸಿರುವರು. ಇವರ ಆರಾಧ್ಯ ದೈವ ಬೀರಪ್ಪ ಕುರುಬರಿಗಾಗಿ ಪ್ರತ್ಯೇಕ ಕೇರಿಯೇ ಇದೆ. ಇಲ್ಲಿ ಕುರುಬ ಜನಾಂಗದವರು ಮಾತ್ರ ವಾಸವಾಗಿದ್ದಾರೆ. ಹಿಂದಿನಿಂದಲೂ ಈ ಜಾಗಕ್ಕೆ ಕುರುಬರ ಓಣಿ. ಕುರುಬರ ಬೀದಿ ಎನ್ನುವರು.

ಮುಸ್ಲಿಂ ಕೇರಿ

ಪಟ್ಟಣದಲ್ಲಿ ಆರು ಮಸಿದಿಗಳಿದ್ದು ಮುಸ್ಲಿಂರು ಪ್ರತ್ಯೇಕ ಓಣಿಗಳಲ್ಲಿ ವಾಸವಾಗಿದ್ದಾರೆ. ಹೀರೆಕೆರೆಯ ಹತ್ತಿರವಿರುವ ಮಸಿದಿಯು ಪಟ್ಟಣದ ಪ್ರಾಚೀನ ಮಸೀದಿಯಾಗಿದೆ.

ಹೊಳಲ್ಕೆರೆಯಲ್ಲಿ ಐತಿಹ್ಯ, ಸ್ಥಳನಾಮ, ಸ್ಥಳಪುರಾಣದ ಬಗ್ಗೆ ನಂಬಿಕೆಯನ್ನು ಇಟ್ಟುಕೊಂಡು ಈಗಲೂ ಅಲ್ಲಿನ ಜನಗಳು ಪ್ರತ್ಯೇಕ ಸ್ಥಳಗಳಲ್ಲಿ ವಾಸವಾಗಿದ್ದಾರೆ. ಪಟ್ಟಣ ವಿಸ್ತಾರವಾದಂತೆಲ್ಲಾ ಅಲ್ಲಿನ ಹಿರಿಯ ವ್ಯಕ್ತಿಗಳ ಹೆಸರುಗಳನ್ನು ಇತ್ತೀಚೆಗೆ ನಿರ್ಮಿಸುತ್ತಿರುವ ಬಡಾವಣೆಗಳಿಗೆ ಇಡುತ್ತಿದ್ದಾರೆ.

ಅಡಿ ಟಿಪ್ಪಣೆ

೧. ಅಜೇಯಕುಮಾರ್.ವಿಎಚ್., ೨೦೦೮, **ಜಗಲೂರು ತಾಲೂಕಿನ ಸ್ಥಳನಾಮ** (ಅಪ್ರಕಟಿತ ಎಂ.ಫಿಲ್. ನಿಬಂಧ), ಪು–೨೮.

೨. **ಸಂಕ್ಷಿಪ್ತ ಕನ್ನಡ ನಿಘಂಟು,** ೨೦೦೧, ಪು–೩೮೬.

೩. ಶಿವರಾಮ ಕಾರಂತ್. **ಸಿರಿಗನ್ನಡ ಅರ್ಥಕೋಶ,** ಪು–೧೪೧.

೪. ಗೋಪಾಲಕೃಷ್ಣ. ವಿ., **ಸ್ಥಳನಾಮ ಅಧ್ಯಯನಗಳು,** ಪು–೬೦೬೧.

೫. ಶಿವರಾಮ ಕಾರಂತ್. ಪೂರ್ವೋಕ್ತ, ಪು–೫೯೬.

ಅಧ್ಯಾಯ ಐದು

ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ

ಕಟ್ಟಡ ನಿರ್ಮಾಣ ಶಾಸ್ತ್ರವನ್ನು ಸಂಸ್ಕೃತದಲ್ಲಿ ವಾಸ್ತುಶಾಸ್ತ್ರ ಎಂದು ಕರೆಯುತ್ತಾರೆ. ಕಟ್ಟಡಗಳ ನಿರ್ಮಾಣ ಕಲೆಯನ್ನು ವಾಸ್ತುಶಿಲ್ಪ ಎಂದು ಹೇಳಬಹುದು. ವಾಸ್ತುಶಿಲ್ಪವು ಮಾನವನ ನಾಗರಿಕತೆಯ ಉಗಮದಷ್ಟೇ ಪ್ರಾಚೀನವಾದುದು. ಹಾಗಾಗಿ ವಾಸ್ತುಶಿಲ್ಪವನ್ನು ಮಾನವನ ನಾಗರೀಕತೆಯ ಪ್ರತೀಕ, ಮಾನದಂಡ ಎಂದು ಕರೆಯಬಹುದಾಗಿದೆ. ಕರ್ನಾಟಕವು ವಾಸ್ತುಶಿಲ್ಪಕಲೆಯಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಕರ್ನಾಟಕ ಇತಿಹಾಸದಲ್ಲಿ ವಾಸ್ತುಶಿಲ್ಪದ ಉಗಮವನ್ನು ಮೌರ್ಯರ ಕಾಲಕ್ಕೆ ಕೊಂಡೊಯ್ಯಬಹುದು. ಅವರ ಕಾಲಾವಧಿಯಲ್ಲಿ ನಿರ್ಮಾಣಗೊಂಡ ವಾಸ್ತುಶಿಲ್ಪವು ಸೀಮಿತವಾಗಿದೆ. ಬಾದಾಮಿ ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ದೇವಾಲಯಗಳ ನಿರ್ಮಾಣ ಪ್ರಯೋಗ ನಡೆದು ವ್ಯವಸ್ಥಿತವಾದ ವಾಸ್ತುಶಿಲ್ಪಕ್ಕೆ ಭದ್ರವಾದ ಬುನಾದಿ ನಿರ್ಮಾಣವಾಯಿತು. ನಂತರದ ರಾಜಮನೆತನಗಳ ಆಳ್ವಿಕೆಯ ಕಾಲಾವಧಿಯಲ್ಲಿ ವಾಸ್ತುಶಿಲ್ಪವು ಹಲವಾರು ಅಂಶಗಳ ಸೇರ್ಪಡೆಯೊಂದಿಗೆ ಬೃಹದಾಕಾರವಾಗಿ ಬೆಳೆದು ದ್ರಾವಿಡ ಶೈಲಿ ಎಂದು ಪ್ರಸಿದ್ಧಿಯಾಯಿತು.

ವಾಸ್ತುಶಿಲ್ಪ

ಭಾರತದಲ್ಲಿ ರಚಿತವಾಗಿರುವ ವಾಸ್ತು ರಚನೆಗಳನ್ನು ಅವುಗಳ ರಚನಾ ವಿನ್ಯಾಸದಿಂದ ವಿದ್ವಾಂಸರು ಸ್ಥೂಲವಾಗಿ ನಾಗರ, ವೇಸರ ಮತ್ತು ದ್ರಾವಿಡ ಶೈಲಿ ಎಂದು ವಿಂಗಡಿಸಿರುತ್ತಾರೆ. ಇವುಗಳಲ್ಲಿ ನಾಗರ ಶೈಲಿಯು ಉತ್ತರ ಭಾರತದಲ್ಲಿ ಹೆಚ್ಚು ಪ್ರಚಾರದಲಿದೆ. ವೇಸರ ಶೈಲಿಯು ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಲ್ಲಿ, ನಾಗರ ಮತ್ತು ದ್ರಾವಿಡ ಶೈಲಿಗಳ ಮಿಶ್ರಣದಂತಿದೆ. ಈ ವಿಭಾಗಗಳನ್ನು ರಾಜ ವಂಶಗಳ ಹೆಸರಿನಲ್ಲಿ ಗುರುತಿಸಲಾಗುತ್ತಿದೆ. ಬಾದಾಮಿ ಚಾಲುಕ್ಯ, ಕಲ್ಯಾಣ ಚಾಲುಕ್ಯ, ಪಲ್ಲವ, ಚೋಳ, ರಾಷ್ಟ್ರಕೂಟ, ವಿಜಯನಗರ ಶೈಲಿ ಎಂದು ವಿಂಗಡಿಸಲಾಗಿದೆ. ಈ ಬಗೆಯ ವಿಂಗಡನೆಯನ್ನು ಆಯಾ ರಾಜವಂಶಗಳು ಬಳಸಿರುವ ಶಿಲೆ, ಕಲೆಯ ಲಕ್ಷಣಗಳ ಆಧಾರದ ಮೇಲೆ ಮಾಡಲಾಗಿದೆ. ಈ ಲಕ್ಷಣಗಳನ್ನು ಹೇಳುವಾಗ ವ್ಯತ್ಯಾಸದ ಅಂತರ ತೀರಾ ಕಡಿಮೆಯಿರುತ್ತದೆ. ಇಂತಹ ಕಡೆ ಸೂಕ್ಷ್ಮವಾದ ಅವಲೋಕನದಿಂದ ವಿಂಗಡಣೆಯನ್ನು ಗಮನಿಸಬೇಕಾಗುತ್ತದೆ.

ಮೂರ್ತಿಶಿಲ್ಪಗಳು

ಭಾರತ ದೇಶದಲ್ಲಿರುವಷ್ಟು ದೇವಾಲಯ, ಮೂರ್ತಿಶಿಲ್ಪಗಳು ಬೇರಾವ ದೇಶಗಳಲ್ಲೂ ಕಂಡುಬರುವುದಿಲ್ಲ. ಪ್ರತಿಯೊಂದು ಗ್ರಾಮ, ಪಟ್ಟಣ, ನಗರಗಳಲ್ಲಿ ದೇವಾಲಯ ಗುಡಿಗಳು ಇದ್ದೇ ಇರುತ್ತವೆ. ಹಾಗಾಗಿ ಭಾರತದಲ್ಲಿ ಗುಡಿಗಳಿಲ್ಲದ ಗ್ರಾಮಗಳಿಲ್ಲ. ದೇವಾಲಯಗಳಿಲ್ಲದ ನಗರ-ಪಟ್ಟಣಗಳಿಲ್ಲ ಎನ್ನಬಹುದು. ಕನಿಷ್ಟಪಕ್ಷ ಪೂಜೆಯಿಲ್ಲದೆ ಪಾಳು ಬಿದ್ದ ಚಿಕ್ಕ ಗುಡಿಯಾದರೂ ಅಲ್ಲಿ ಸುಂದರವಾದ ಮೂರ್ತಿಶಿಲ್ಪಗಳಿವೆ. ಭಾರತೀಯರ ಜೀವನದಲ್ಲಿ ದೇವಾಲಯ ಮೂರ್ತಿಶಿಲ್ಪಗಳು ಅಷ್ಟರ ಮಟ್ಟಿಗೆ ಬೆರೆತು ಹೋಗಿವೆ ಎನ್ನಬಹುದು.

ಪ್ರತಿಯೊಂದು ಪಂಥದ ದೇವಾಲಯದಲ್ಲಿ ಆಯಾ ಪಂಥದ ದೇವತಾಮೂರ್ತಿ ಇದ್ದೇ ಇರುತ್ತವೆ. ಇಂತಹ ಮೂರ್ತಿಗಳನ್ನು ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು ಸ್ಥೂಲವಾಗಿ ಮೂರ್ತಿಶಿಲ್ಪಶಾಸ್ತ್ರ ಎಂದು ಕರೆಯಲಾಗಿದೆ. ಸಾಮಾನ್ಯವಾಗಿ ಮೂರ್ತಿ ಎಂಬ ಶಬ್ಧಗಳನ್ನೊಳಗೊಂಡು ಅದಕ್ಕೆ ಪರ್ಯಾಯವಾಗಿ ಬಳಸಿದ ಶಬ್ಧಗಳಲ್ಲಿ ಮೂರ್ತಿ ಎಂಬುದನ್ನು ಭೌತಿಕ ವಸ್ತು ಎಂದು ಪರಿಗಣಿಸಲಾಗುತ್ತದೆ. ಏಕೆಂದರೆ ದೇವತಾ ಮೂರ್ತಿ ಎಂಬ ಶಬ್ಧದಲ್ಲಿ ಮೂರ್ತಿಯೇ ಪ್ರಧಾನವಾಗಿರುತ್ತದೆ. ಈ ಕುರಿತು ಇರುವ ಪ್ರತಿಮಾ, ಬಿಂಬ, ಪ್ರತಿಕೃತಿ, ವಿಗ್ರಹ, ಮುಂತಾದ ಶಬ್ಧಗಳು ಅದನ್ನು ಇನ್ನೂ ಸ್ಪಷ್ಟವಾಗಿ ಸೂಚಿಸುತ್ತದೆ. ಇಲ್ಲಿ ಒಂದು ನಿರಾಕಾರ ಕಲ್ಪನೆಯನ್ನು ಯಥಾವತ್ತಾಗಿ ಅನುಕರಿಸಿ ಸಾಕಾರವಸ್ತು ಎಂಬ ಪರಿಕಲ್ಪನೆಯಿದೆ.[1] ಅರ್ಚ್ಯ ಎಂಬ ಶಬ್ಧ ಪೂಜಿಸಲ್ಪಡುವಂತದ್ದು ಎಂಬ ಅರ್ಥ ನೀಡಿದರೆ, ತನು-ಮನ ಮುಂತಾದ ಶಬ್ಧಗಳು ಮೂರ್ತಿಯನ್ನು ದೇಹವನ್ನಾಗಿ ಗ್ರಹಿಸಲು ಹಾಗೂ ದೇವರನ್ನು ಅದರ ಆತ್ಮವನ್ನಾಗಿ ಪ್ರತ್ಯೇಕಿಸುತ್ತದೆ[2].

ಮೂರ್ತಿ ಎಂಬ ಪದಕ್ಕೆ ಸಮನಾರ್ಥಕವಾಗಿ ಪ್ರತಿಮೆ ಎಂಬ ಪದ ಬಳಕೆಯಲ್ಲಿದ್ದು, ಮೂರ್ತಿಶಾಸ್ತ್ರವನ್ನು ಪ್ರತಿಮಾಶಾಸ್ತ್ರ ಎಂದು ಕರೆಯಲಾಗಿದೆ. ಪ್ರತಿಮಾಶಾಸ್ತ್ರ ಅಥವಾ ಪ್ರತಿಮಾಲಕ್ಷಣ ಎಂದರೆ ದೇವತೆಯ ಲಕ್ಷಣವನ್ನು ಮೂರ್ತಿ ರೂಪದಲ್ಲಿ ಪ್ರಮಾಣಬದ್ಧವಾಗಿ ಹೀಗೆ ಹಿಡಿಯಬೇಕೆಂಬುದನ್ನು ವಿಧಿಸುವ ಶಾಸ್ತ್ರವೆಂದರೆ ಮೂರ್ತಿಯು ಯಾವ ಯಾವ ಅಂಶಗಳನ್ನು ಹೊಂದಿರಬೇಕೆಂದು ತಿಳಿಸುತ್ತದೆ.

ಮೂರ್ತಿಯು ಒಂದು ರೂಪ, ಒಂಬತ್ತು ಅಂಗಗಳನ್ನು ಒಳಗೊಂಡಿರಬೇಕು. ಅವುಗಳೆಂದರೆ ನ್ಯಾಸ (ರೂಪ ಸಂಯೋಜನೆ), ಅಲಂಕಾರ (ಆಭರಣ, ವಸ್ತ್ರ, ಕೇಶ, ಮುಂತಾದ) ಮುದ್ರಾ (ಹಸ್ತಮುದ್ರೆಗಳು), ಆಯುಧ (ದೇವತೆಯ ಕೈಯಲ್ಲಿರುವ ಆಯುಧಗಳು), ಭಾಗ್ರಕಕ್ಷೆ (ಆಸನ), ವಾಹನ (ದೇವತೆಯು ಸವಾರಿಗಾಗಿ ಬಳಸುವ ಪ್ರಾಣಿಗಳು), ಉಪದೇವ (ಮುಖ್ಯ ದೇವತೆಯ ಜೊತೆ ತೋರಿಸುವ ಇತರೆ ಕಡಿಮೆ ಮಹತ್ವದ ದೇವತೆಗಳು ಅಂದರೆ ಪುರುಷ ದೇವರ ಸಂದರ್ಭದಲ್ಲಿ ಅವರ ಸ್ತ್ರೀ ದೇವತೆಗಳು), ಅರೊ (ದೇವತೆ ವೈರಿ) ಹಾಗೂ ಸ್ತುವಕ(

ಭಕ್ತರು ಹಾಗೂ ಇತರ ಸೇವಕರು),[೩] ಈ ರೀತಿಯ ಸಂಪ್ರದಾಯಕ್ಕೆ ಅನುಸಾರವಾಗಿ ದೇವತಾ ಮೂರ್ತಿಗಳು ಎಂದು ಹೆಸರಿಸುವುದುಂಟು.

೫.೧ ದೇವಾಲಯ

ದೇವಾಲಯ ಎಂದರೆ ದೇವರಿಗಾಗಿ ನಿರ್ಮಿಸಿದ ಆಲಯವೇ ಆಗಿದೆ. ಮಾನವನು ಮನೆಗಳನ್ನು ನಿರ್ಮಿಸಿಕೊಂಡು ಹೇಗೆ ಜೀವನ ನಿರ್ವಹಿಸುವನೋ ಹಾಗೆಯೇ ದೇವರಿಗೂ ಆಲಯವನ್ನು ನಿರ್ಮಿಸಬೇಕು ಎನ್ನುವ ಉದ್ಧೇಶದಿಂದ ದೇವಾಲಯವನ್ನು ನಿರ್ಮಿಸಲು ಪ್ರಾರಂಭಿಸಿರಬೇಕು. ದೇವಾಲಯದಲ್ಲಿ ಪರಮಾತ್ಮನನ್ನು ಪೂಜಿಸುವ ಭಕ್ತನ ವಿಶ್ವಾಸ ಶಕ್ತಿಯು ಪರಮಾತ್ಮನ ವಾತ್ಸಲ್ಯವೆಂಬ ಸಮಶಕ್ತಿಯೊಡನೆ ಸೇರಿದಾಗ ಭಕ್ತನಲ್ಲಿ ಒಂದು ಪ್ರಬಲ ಶಕ್ತಿಯು ಉತ್ಪನ್ನವಾಗಿ ಅವನನ್ನೇ ಉನ್ನತಿಗೇರಿಸುತ್ತದೆ. ಮಾನವನ ದೈವ–ಇಹ, ಪರ, ವಾಸ್ತವಿಕ ಆದರ್ಶ ಇವುಗಳ ಮಿಲನದ ಸಂಕೇತವೇ ದೇವಾಲಯ.[೪] ಲೋಕ ಸಂರಕ್ಷಣೆಗಾಗಿ ಭಗವಂತನು ಭೂಮಿಯಲ್ಲಿ ವಾಸಮಾಡುವ ಸ್ಥಳವಾದ ದೇವಾಲಯವು ಜೀವಾತ್ಮ ಪರಮಾತ್ಮದಲ್ಲಿ ಇರುವ ಅಂತರವನ್ನು ಬಹುಮಟ್ಟಿಗೆ ಕಡಿಮೆ ಮಾಡುತ್ತದೆ. ಜಗತ್ತಿನ ಸೃಷ್ಟಿಕರ್ತ ಹಾಗೂ ನಿಯಂತ್ರಕನಾದ ದೇವನ ಬಳಿಗೆ ಹೋಗಲು ಸರಿಯಾದ ಮಾರ್ಗವನ್ನು ತೋರಿಸುವಂತೆ ಅವನನ್ನು ಪ್ರಾರ್ಥಿಸುವ ಸ್ಥಳವೂ ದೇವಾಲಯವೇ ಆಗಿದೆ ಎಂದು ಹೇಳಬಹುದು.[೫]

ತಲವಿನ್ಯಾಸ

ಭೂಮಿಯ ಮೇಲ್ಭಾಗದಲ್ಲಿ ಭೂಮಿಗೆ ಸಮನಾಂತರವಾಗಿ ನಿರ್ಮಿಸಿರುವ ದೇವಾಲಯದ ಭಾಗಗಳನ್ನು ತಲವಿನ್ಯಾಸದ ಅಡಿಯಲ್ಲಿ ಅಧ್ಯಯನ ಮಾಡಲಾಗುತ್ತದೆ. ತಲವಿನ್ಯಾಸದ ಅತ್ಯಂತ ಪ್ರಮುಖ ಭಾಗವೆಂದರೆ ಗರ್ಭಗೃಹ. ಇದು ದೇವಾಲಯದ ಕೇಂದ್ರ ಎಂದರೂ ತಪ್ಪಲ್ಲ. ಉಳಿದ ಭಾಗಗಳು ಇದಕ್ಕೆ ಹೊಂದಿಕೊಂಡಂತೆ ನಿರ್ಮಾಣಗೊಂಡಿರುತ್ತವೆ. ಸಾಮಾನ್ಯವಾಗಿ ಗರ್ಭಗೃಹವು ಚೌಕಾಕಾರವಾಗಿರುತ್ತದೆ. ಹೊಳಲ್ಕೆರೆ ಪಟ್ಟಣದ ದೇವಾಲಯಗಳು ಸಾಮ್ಯಾನವಾಗಿ ಎಲ್ಲವೂ ಚೌಕಾಕಾರದ ತಲವಿನ್ಯಾಸ ಹೊಂದಿರುವುದು ಕಂಡುಬರುತ್ತದೆ. ಗರ್ಭಗೃಹ ಒಂದು ಬಾಗಿಲನ್ನು ಹೊಂದಿರುತ್ತದೆ. ಗರ್ಭಗೃಹದ ಮುಂಭಾಗದಲ್ಲಿ ಅಷ್ಟೇ ವಿಸ್ತೀರ್ಣ ಅಥವಾ ಆಯತಾಕಾರದ ಸ್ಥಳಾವಕಾಶವಿರುತ್ತದೆ ಅಥವಾ ಇಲ್ಲದೆಯೂ ಇರಬಹುದು. ಇದನ್ನು ಅಂತರಾಳ ಅಥವಾ ಸುಕನಾಸವೆಂದು ಕರೆಯುವರು. ಹೊಳಲ್ಕೆರೆ ಪಟ್ಟಣದಲ್ಲಿ ಈ ರೀತಿಯ ದೇವಾಲಯಗಳು ಇವೆ. ಗರ್ಭಗೃಹಕ್ಕೂ ಮಧ್ಯ ಅಂತರಾಳವನ್ನು ಕಲ್ಪಿಸಲು ಮಾಡಿರುವ ಚಿಕ್ಕ ಕೊಠಡಿಯು ಇದೆ. ಇದರ ಮುಂಭಾಗವು ಯಾವುದೇ ರೀತಿಯ ಪ್ರವೇಶ ದ್ವಾರವನ್ನು ಹೊಂದಿರದಿದ್ದರೆ ಅದನ್ನು ತೆರೆದ ಅಂತರಾಳ ಎಂದು ಕರೆಯುವರು. ಮಧ್ಯದಲ್ಲಿ ನಾಲ್ಕು ಕಂಬಗಳನ್ನು, ಸುತ್ತಲೂ ಹನ್ನೆರಡು ಅರೆ ಕಂಬಗಳನ್ನು ಹೊಂದಿದ್ದು ಒಂಭತ್ತು ಅಂಕಣಗಳಿಂದ ಕೂಡಿರುತ್ತದೆ. ಇದನ್ನೆ ನವರಂಗ ಎನ್ನುವರು. ಇದಕ್ಕೆ ಒಂದು, ಎರಡು ಅಥವಾ ಮೂರು ಪ್ರವೇಶ

ದ್ವಾರಗಳಿವೆ. ಇದರ ಮೇಲ್ಭಾವಣೆ ಗುಮ್ಮಟ ಅಥವಾ ಚಪ್ಪಟೆಯಾಕಾರದಲ್ಲಿ ಕೆಲವೊಮ್ಮೆ ಗಾಳಿ-ಬೆಳಕಿಗೆ ಜಾಲಾಂಧ್ರಗಳನ್ನು ನಿರ್ಮಿಸಿರುವರು.

ದೇವಾಲಯದ ಉಗಮ ಮತ್ತು ವಿಕಾಸ

ದೇವಾಲಯಗಳು ಗತಕಾಲದ ಸಾಂಸ್ಕೃತಿಕ ಚರಿತ್ರೆಯ ಹೆಗ್ಗುರುತುಗಳಾಗಿವೆ. ಇವು ಮಧ್ಯಕಾಲದ ವೇಳೆಗೆ ದೇವಾಲಯಗಳಿಲ್ಲದೆ ಬದುಕೇ ಇಲ್ಲ ಎಂಬಷ್ಟರ ಮಟ್ಟಿಗೆ ಬೆಳೆದವು. ದೇವಾಲಯಗಳ ಅಧ್ಯಯನವು ಚರಿತ್ರೆಯ ರಚನೆಯಲ್ಲಿ ಬಹುಮುಖ್ಯ ಪುರಾತತ್ವೀಯ ಆಕಾರಗಳಾಗಿ ಕಂಡು ಬರುತ್ತವೆ. ಹಾಗೂ ಕಳೆದು ಹೋದ ಗತವನ್ನು ಪುನಃ ಕಟ್ಟುವ ಬಹುಮುಖ್ಯ ಸಂಪತ್ತು. ಒಂದು ದೇಶದ ಸಾಂಸ್ಕೃತಿಕ ಸಂಪತ್ತು ಎನಿಸಿಕೊಂಡಿರುವ ದೇವಾಲಯಗಳು ಆ ದೇಶದ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಆ ನಿಟ್ಟಿನಲ್ಲಿ ಭಾರತ ಪ್ರಾಚೀನ ಕಾಲದಿಂದಲೂ ಭವ್ಯ ಪರಂಪರೆಯನ್ನು ಹೊಂದಿದ ದೇಶವಾಗಿದೆ. ಭಾರತದ ತುಂಬಾ ಓಡಾಡಿದ ಯಾವುದೇ ವ್ಯಕ್ತಿಗೆ ಪ್ರತಿ ಹಳ್ಳಿ ಹಳ್ಳಿಯಲ್ಲೂ ನದಿದಡ, ಬೆಟ್ಟದ ಮೇಲೆ, ಊರ ಮಧ್ಯೆದಲ್ಲಿ, ಊರಿನ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಹೀಗೆ ಒಂದಲ್ಲಾ ಒಂದು ಕಡೆ ದೇವಾಲಯಗಳು ಕಾಣಬರುತ್ತವೆ.[೬]

ದೇವಾಲಯಗಳ ಉಗಮದ ಬಗ್ಗೆ ನಿಖರವಾಗಿ ವಿವರಿಸಲು ಸಾಧ್ಯವಿಲ್ಲ, ಈ ವಿಷಯದಲ್ಲಿ ಎ. ಎಸ್. ಅಲ್ಟೇಕರ್ ರವರು ಮೂರ್ತಿ ಪೂಜೆಯ ಆರಂಭ ಮತ್ತು ಬೆಳವಣಿಗೆಯ ವಿಷಯವಾಗಿ ಕೆಲಸ ನಡೆಯಬೇಕಾಗಿದೆ. ಮನೆಯಲ್ಲಾಗಲಿ ದೇವಾಲಯದಲ್ಲಾಗಲಿ ದೇವಾತ ದೇವಸ್ಥಾನಗಳನ್ನು ಸ್ಥಾಪಿಸುವ ಸಂಪ್ರದಾಯ ಅಶೋಕನಿಗಿಂತ ಈಚೀನದೆಂದು ಕಾಣುತ್ತದೆ. ಬಹುಜನ ನೆರೆಯುತ್ತಿದ್ದ ಶೌತ್ರಯಜ್ಞಗಳ ಸ್ಥಾನದಲ್ಲಿ ಇವು ಕಾಣಿಸಿಕೊಂಡವು. ಬೌದ್ಧರ ಭವ್ಯ ದೇವಾಲಯ, ವಿಹಾರಗಳನ್ನೂ ನೋಡಿದ ಹಿಂದೂಗಳ ಮನಸ್ಸಿನಲ್ಲಿ ಅಂತಹ ಸಾರ್ವಜನಿಕ ಆರಾಧನಾ ಕೇಂದ್ರಗಳನ್ನು ಸ್ಥಾಪಿಸಬೇಕೆಂಬ ಇಚ್ಚೆ ಉದಯಿಸಿದ್ದರೂ ಇರಬಹುದು. ಅಂತೂ ನಿಜವಾದ ಕಾರಣಗಳೇನೇ ಇರಲಿ ದೇವಾಲಯಗಳು ಸಾರ್ವಜನಿಕ ಪೂಜಾ ಕೇಂದ್ರಗಳೆಂದು ತರುವಾಯ ಪರಿಗಣಿತವಾದುವು ಎಂದು ಅಭಿಪ್ರಾಯಪಟ್ಟಿದ್ದಾರೆ.[೭]

ಮಾನವನ ಮೊದಲ ವಸತಿ ತಾಣಗಳಾಗಿದ್ದ ಗುಹೆಗಳಲ್ಲಿ ಭಾರತದ ಮೊದಲ ದೇವಾಲಯಗಳ ರಚನೆಯನ್ನು ಕಾಣಬಹುದು. ಮಾನವ ತನಗಾಗಿ ನಿರ್ಮಿಸಿಕೊಂಡ ಮನೆ ಗೃಹ ವಾಸ್ತುಶಿಲ್ಪ, ಎನಿಸಿದರೆ ತನ್ನ ದೇವರಿಗಾಗಿ ನಿರ್ಮಿಸಿದ್ದು ಧಾರ್ಮಿಕ ವಾಸ್ತು ಶಿಲ್ಪವೆಂದಾಯಿತು. ಮಯಮತ ಗ್ರಂಥವು ವಾಸ್ತು ಎಂಬುದನ್ನು ಹೀಗೆ ಹೇಳಿದೆ. ಮರ್ತ್ಯರು ಮತ್ತು ಅಮರ್ತ್ಯರು ವಾಸಿಸುವ ಸ್ಥಳಕ್ಕೆ ವಾಸ್ತು ಎಂದು ಹೆಸರು. ಈ ವಾಸ್ತುವನ್ನು ಆಧಾರಿಸಿದ್ದು ವಾಸ್ತುಶಿಲ್ಪ ಎಂದು ಗುರುತಿಸಲ್ಪಡುತ್ತದೆ.[೮]

ಕಾಲ ಕಳೆದಂತೆಲ್ಲಾ ಮಾನವನ ಚಿಂತನೆಗಳು ಬದಲಾದಂತೆ ದೇವಾಲಯವನ್ನು ಮನುಷ್ಯನ ದೇಹದೊಡನೆ ಸಮೀಕರಿಸುವ ಭಾವನೆ ಬೆಳೆಯಿತು. ಕಟ್ಟಡದ ಹಲವಾರು ಭಾಗಗಳಿಗೆ ದೇಹದ ವಿವಿಧ ಅಂಗಗಳಾದ ಪಾದ, ಚರಣ, ಅಂಘ್ರಿ, ಜಂಘ, ಕಟಿ, ಕುಕ್ಷಿ, ಗ್ರೀವ, ಕಂಠ, ಶಿಖರ, ಶಿರ, ಮಸ್ತಕ, ಮುಖ, ವಕ್ತ್ರ, ನಾಸಿಕ ಇತ್ಯಾದಿ ಹೆಸರುಗಳನ್ನು ಕೊಡಲಾಗಿದೆ.[೯] ಹೊಳಲ್ಕೆರೆ ಪಟ್ಟಣದಲ್ಲಿನ ದೇವಾಲಯಗಳನ್ನು ಮುಂದಿನಂತೆ ಅಧ್ಯಯನ ಮಾಡಲಾಗಿದೆ.

ಸಂಖ್ಯೆ: ೧

ಹೆಸರು : ವೇಣುಗೋಪಾಲ ಸ್ವಾಮಿ ದೇವಾಲಯ.

ಪಟ್ಟಣ : ಹೊಳಲ್ಕೆರೆ.

ದಿಕ್ಕು : ಪೂರ್ವಾಭಿಮುಖ

ಕಾಲ : ಚಿತ್ರದುರ್ಗದ ಪಾಳೆಯಗಾರರು[೧೦]

ಶಾಸನ : ಹೊಳಲ್ಕೆರೆ ೬೭ ರಂಗಮಂಟಪದ ಕಂಬಶಾಸನ.

ವಾಸ್ತುಭಾಗ: ಗರ್ಭಗೃಹ, ಅಂತರಾಳ, ಮಹಾ ರಂಗಮಂಟಪ, ಗರುಡಮಂಟಪ.

ಪಟ್ಟಣದ ಮಧ್ಯಭಾಗದಲ್ಲಿರುವ ಈ ದೇವಾಲಯವು ನಗರದಲ್ಲೇ ಪ್ರಸಿದ್ಧ ದೇವಾಲಯವಾಗಿದೆ. ಚಿತ್ರದುರ್ಗ ಪಾಳೆಯಗಾರರ ಕಾಲದ ದೊಡ್ಡ ದೇವಾಲಯಗಳಲ್ಲಿ ಒಂದಾಗಿದೆ. ಚಿತ್ರದುರ್ಗ ಪಾಳೆಯಗಾರರು ಹೇಗೆ ವಿಜಯನಗರ ಕಲಾ ಶೈಲಿಯನ್ನು ಅನುಸರಿಸಿಕೊಂಡು ದೇವಾಲಯಗಳನ್ನು ನಿರ್ಮಿಸಿದ್ದಾರೆಂದು ಇದರಿಂದ ತಿಳಿಯಬಹುದಾಗಿದೆ.

ದೇವಾಲಯದ ಪ್ರಧಾನ ವಾಸ್ತು ಭಾಗವೆಂದರೆ ಮಹಾ ರಂಗಮಂಟಪ. ಇದು ಪ್ರತಿ ಸಾಲಿನಲ್ಲಿ ಐದರಂತೆ ಐದು ಸಾಲಿನಲ್ಲಿ ಒಟ್ಟು ಇಪ್ಪತ್ತೊಂದು ಅಂಕಣಗಳನ್ನು ಹೊಂದಿದೆ. ಮಧ್ಯದ ಹನ್ನೆರಡು ಅಂಕಣಗಳನ್ನು ಹೊರತುಪಡಿಸಿ, ಸುತ್ತಲೂ ಕಟ್ಟೆಯಿದೆ. ಇದಕ್ಕೆ ಮುಖ್ಯ ಪ್ರವೇಶದ್ವಾರಗಳಿವೆ (ಈಗ ಬದಿಯ ಎರಡು ಪ್ರವೇಶ ದ್ವಾರಗಳಿಗೆ ಗೋಡೆಯನ್ನು ನಿರ್ಮಿಸಲಾಗಿದೆ). ಈ ಮಹಾ ರಂಗಮಂಟಪದ ಮಧ್ಯದಲ್ಲಿ ನಾಲ್ಕು ಬೃಹತ್ ಪೂರ್ಣ ಕಂಬಗಳು ಕಟ್ಟೆಯ ಮೇಲಿನ ಹನ್ನೆರಡು ಕಂಬಗಳು, ಹದಿನಾಲ್ಕು ಗೋಡೆಗಂಬಗಳಿದ್ದು, ಸಭಾಂಗಣ, ಮಧ್ಯದ ಕಂಬಗಳು ಎತ್ತರದಿಂದ ಗಮನಸೆಳೆಯುತ್ತವೆ. ಇವು ಕೆಳಗೆ, ಮಧ್ಯ ಮತ್ತು ಮೇಲೆ ಮೂರು ಅಸಮ ಚೌಕ ಭಾಗಗಳನ್ನು ಹೊಂದಿದ್ದು, ಈ ಚೌಕ ಭಾಗಗಳ ನಾಲ್ಕು ಮುಖಗಳ ಮೇಲೆ ಗಜ, ಸಿಂಹ, ವೀರಾಂಜನೇಯ, ವಿಷ್ಣು, ಬಾಲಕೃಷ್ಣ, ಭಕ್ತಾಂಜನೇಯ, ಕಾಳಿಂಗಮರ್ಧನ ಕೃಷ್ಣಾ, ಗಜಾನನ, ಹಂಸ, ನರಸಿಂಹ, ಗರುಡ, ವೈಷ್ಣವಿ, ಬೇಡ, ಧನುರ್ಧಾರಿ, ಮತ್ಸ್ಯಯಂತ್ರ ಭೇದಿಸುತ್ತಿರುವ ಅರ್ಜುನ, ರಾಮ, ಬಲರಾಮ, ಪರಶುರಾಮ, ಯಕ್ಷ

ತೀರ್ಥಂಕರ, ಸೂರ್ಯ, ರಾಮಾನುಜ, ಕಾರ್ತಿಕೇಯ, ಲಿಂಗಕ್ಕೆ ಕ್ಷೀರಾಭಿಷೇಕ ಮಾಡುತ್ತಿರುವ ಹಸು, ಬೆಣ್ಣೆಕೃಷ್ಣ, ವರಹಾವತಾರಿ, ವಿಷ್ಣು, ವಾಮನ ಅವತಾರ ಮುಂತಾದ ಉಬ್ಬುಶಿಲ್ಪಗಳಿವೆ. ಈ ಕಂಬಗಳ ಮೇಲ್ಭಾಗದಲ್ಲಿ ಎರಡು ಕಡೆಗೆ ಮಾತ್ರ ಪುಷ್ಪ ಬೋದುಗೆಗಳಿವೆ. ಮಂಟಪದ ಛತ್ತು ಸಮತಟ್ಟಾಗಿದೆ.

ಮಹಾ ರಂಗಮಂಟಪ ಮತ್ತು ಸಭಾಮಂಟಪದ ಮಧ್ಯ ಮೂರು ಅಂಕಣದ ಪ್ರವೇಶ ಮಂಟಪ ಅಥವಾ ಅರ್ದಮಂಟಪವಿದೆ. ಮಧ್ಯದ ಪ್ರವೇಶದ ಹಾದಿಯನ್ನು ಹೊರತುಪಡಿಸಿ ಇಕ್ಕೆಲಗಳ ಅಂಕಣಗಳಲ್ಲಿ ಕಟ್ಟೆಗಳಿವೆ. ಇವುಗಳ ಮೇಲಿನ ಎರಡು ಕಂಬಗಳು ಶೈಲಿ ಮತ್ತು ಕೆತ್ತನೆಯಿಂದ ಆಕರ್ಷಕವಾಗಿದ್ದು, ವಿಜಯ ನಗರದ ಮೂಲ ಶೈಲಿಯನ್ನು ಪ್ರತಿನಿಧಿಸುತ್ತದೆ. ಈ ಕಂಬಗಳ ಮೇಲೆ ಬಾಲಕೃಷ್ಣ, ಗಜಾನನ, ಪೂತನಿಸಂಹಾರ, ಬೇಡರಕಣ್ಣಪ್ಪ, ಗೋಪಾಲಕೃಷ್ಣ ಮುಂತಾದ ಶಿಲ್ಪಗಳಿವೆ. ಉಳಿದಂತೆ ಭಿತ್ತಿ ಮತ್ತು ಛತ್ತು ಸರಳವಾಗಿವೆ.

ಸಭಾಮಂಟಪದ ದ್ವಾರಬಂಧ ಎರಡು ಪ್ರಧಾನ ಪಟ್ಟಿಕೆಗಳಲ್ಲಿದೆ. ಮೊದಲ ಪಟ್ಟಿಕೆಯ ಮೇಲೆ ಮುಖಭಾಗದಲ್ಲಿ ವೀರರ ಶಿಲ್ಪಗಳಿದ್ದರೆ, ಮೇಲೆ ಕುಂಬಗಳು ಮತ್ತು ಸ್ತಂಭಗಳ ಅಲಂಕರಣೆಯಿದೆ. ಇದರ ಲಲಾಟ ಬಿಂಬದಲ್ಲಿ ಜೋಡಿ ಕಂಬಗಳಿದ್ದು, ಅವುಗಳ ಬದಿಯಲ್ಲಿ ಕೀರ್ತಿಮುಖಗಳಿವೆ. ಈ ಕೀರ್ತಿಮುಖಗಳಲ್ಲಿ ರುಂಡಗಳು ಗೋಚರಿಸುತ್ತವೆ. ಪ್ರಧಾನ ಪಟ್ಟಿಕೆಯ ಒಳ ಅಥವಾ ಬದಿಯ ಭಾಗದಲ್ಲಿ ಲತೆಯನ್ನು ಆಶ್ರಯಿಸಿ ನಿಂತ ಶಿಲಾಬಾಲಿಕೆಯರ ಪ್ರತಿಮೆಗಳಿವೆ. ದ್ವಾರಬಂಧದ ಪ್ರಧಾನ ಪಟ್ಟಿಕೆಯಲ್ಲಿ ನಾಲ್ಕು ಶಾಖೆಗಳಿದ್ದು, ಅಲ್ಲಿ ಬಳ್ಳಿಗಳ ಅಲಂಕರಣೆಗಳಿವೆ. ಬಾಗಿಲ ಬದಿಯಲ್ಲಿ ಶಂಖ, ಚಕ್ರ ಹಾಗೂ ಗದಾದಾರಿಗಳಾದ ವೈಷ್ಣವ ದ್ವಾರಪಾಲಕರುಗಳ ಉಬ್ಬುಶಿಲ್ಪಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿಯ ಬಿಂಬವಿದೆ.

ಇಲ್ಲಿಯ ಸಭಾಮಂಟಪವು ಒಂಬತ್ತು ಅಂಕಣಗಳಲ್ಲಿದೆ. ಮಧ್ಯದ ಕಂಬಗಳು ಆಕರ್ಷಕವಾಗಿದ್ದು ವಿಜಯನಗರ ಶೈಲಿಯಲ್ಲಿವೆ. ಈ ಕಂಬಗಳ ಕುಂಭ ಹಾಗೂ ಕಳಸ ಭಾಗಗಳಲ್ಲಿರುವ ಕಮಲ ದಳಗಳು ಹಾಗೂ ಸರಪಳಿಯಾಕೃತಿಗಳು ವಿಶೇಷವೆನಿಸುತ್ತವೆ. ಈ ಕಂಬಗಳ ಮೇಲೆ ವೀರಾಂಜನೇಯ, ಹಂಸ, ಶಿವಲಿಂಗ, ಪೂಜಿಸುತ್ತಿರುವ ರಾಮ, ಕಾಳಿಂಗಮರ್ಧನ, ಕೃಷ್ಣ, ಭಕ್ತಾಂಜನೇಯ, ಕುಳಿತ ಸಿಂಹ, ನಗ್ನಸ್ತ್ರೀ, ಶಿವಲಿಂಗಕ್ಕೆ ಕ್ಷೀರಧಾರೆಯೆರೆಯುತ್ತಿರುವ ಹಸು, ಶಂಕ, ಚಕ್ರ, ಬಾಲಕೃಷ್ಣ, ದೊರೆ, ಮೊಸರು ಕಡೆಯುತ್ತಿರುವ ಗೋಪಿಕಾಸ್ತ್ರೀ ಮತ್ತು ಬಾಲಕೃಷ್ಣ, ವಾದ್ಯಗಾರರು, ನೃತ್ಯಗಾತಿ ಮುಂತಾದ ಉಬ್ಬುಶಿಲ್ಪಗಳಿವೆ. ಈ ಮಂಟಪದ ಮಧ್ಯದ ಅಂಕಣದ ಛತ್ತಿನಲ್ಲಿ ಅರಳು ಕಮಲ ಭುವನೇಶ್ವರಿಯಿದ್ದು ಅದರ ಮಧ್ಯದಲ್ಲಿ ಮುಗುಚಿದ ಮೊಗ್ಗು ಇದೆ. ಇಲ್ಲಿ ವೈಷ್ಣವ ಶಿಲ್ಪವಿದೆ. ಈ ಮಂಟಪದ ಬಲಭಾಗದಲ್ಲಿ ಉಪ ಪ್ರವೇಶದ್ವಾರವಿದೆ.

ಅಂತರಾಳವು ಸರಳವಾಗಿದ್ದು, ಅದರ ದ್ವಾರದ ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರ, ಲಲಾಟದಲ್ಲಿ ಕಾಳಿಂಗಮರ್ಧನ ಕೃಷ್ಣನ ಉಬ್ಬುಶಿಲ್ಪಗಳಿವೆ. ಗರ್ಭಗೃಹದ ದ್ವಾರಬಾಗಿಲ ಇಕ್ಕೆಲಗಳಲ್ಲಿ ಕೂಡ ಚಿಕ್ಕ ದ್ವಾರಪಾಲಕರುಗಳ ಶಿಲ್ಪಗಳು ಮತ್ತು ಉತ್ತರಾಂಗ ಭಾಗವಿದೆ. ಗರ್ಭಗೃಹ ಚಿಕ್ಕದಾಗಿದ್ದು, ಇದರ ಭಿತ್ತಿ ಮತ್ತು ಛತ್ತು ಸರಳವಾಗಿದೆ.

ದೇವಾಲಯದ ಹೊರಭಾಗದ ಅದಿಷ್ಠಾನವು ಮಂಚಬಂಧ ಶೈಲಿಯಲ್ಲಿದ್ದು ಉಪಾನ, ತ್ರಿಪಟ್ಟಕುಮುದ, ಕಪೋತಭಾಗಗಳನ್ನು ಹೊಂದಿದೆ. ಭಿತ್ತಿಯು ಅಳತೆ ಕಲ್ಲುಗಳಿಂದ ಕಟ್ಟಲ್ಪಟ್ಟಿದ್ದು ಸರಳವಾಗಿದೆ. ಕಪೋತದ ಮೇಲಿನ ಭಾಗದಲ್ಲಿ ಅಲ್ಲಲ್ಲಿ ಕೀರ್ತಿಮುಖಗಳ ಅಲಂಕರಣೆಗಳಿವೆ. ಸಭಾಮಂಟಪ ಮತ್ತು ಮಹಾಮಂಟಪದ ಅಂಚಿನಲ್ಲಿ ಗಾರೆಯ ಕಂಗೂರಾಕೃತಿಗಳ ರಚನೆಯಿದೆ. ಗರ್ಭಗೃಹದ ಮೇಲೆ ದ್ರಾವಿಡ ವಿಮಾನ ಮಾದರಿಯ ನಾಲ್ಕು ತಲದ ಗಾರೆಯ ಶಿಖರವಿದೆ. ಇದರ ಮುಂದೆ ಅಂತರಾಳದ ಮೇಲೆ ಸುಖನಾಸಿಯಿದೆ. ಶಿಖರ ಮತ್ತು ಸುಖನಾಸಿಗಳು ಯಾವುದೇ ವಿಶೇಷ ಅಲಂಕರಣೆಯನ್ನು ಹೊಂದಿಲ್ಲ. ದೇವಾಲಯದ ಆವರಣದಲ್ಲಿ ಗರ್ಭಗೃಹಕ್ಕೆ ಅಭಿಮುಖವಾಗಿ ಚಿಕ್ಕ ಗರುಡ ಮಂಟಪವಿದೆ. ವೇಣುಗೋಪಾಲಸ್ವಾಮಿ ದೇವಾಲಯದ ಆವರಣದಲ್ಲಿ ಪಾಳೆಯಗಾರರ ಕಾಲದ ರಾಮದೇವರ ಮತ್ತೊಂದು ದೇವಾಲಯವಿದೆ. ಇದು ಸಭಾಮಂಟಪ ಮತ್ತು ಗರ್ಭಗೃಹಗಳನ್ನು ಹೊಂದಿದ್ದು ಸರಳವಾಗಿದೆ. ಗರ್ಭಗೃಹದಲ್ಲಿ ಆಕರ್ಷಕವಾದ ವೇಣುಗೋಪಾಲಸ್ವಾಮಿಯ ವಿಗ್ರಹವಿದೆ. ರಂಗಮಂಟಪದ ಕಂಬ ಶಾಸನದಿಂದ ಕಾಮಗೇತಿ ವಂಶದ ಮತ್ತಿತಿಮ್ಮಣ ನಾಯಕನಿಗೆ ವಿಜಯ ನಗರದ ಅಳಿಯ ರಾಮರಾಯನ ತಮ್ಮ ತಿರುಮಲ ರಾಯನು ಹೊಳಲ್ಕೆರೆ ಸೀಮೆಯನ್ನು ಅಮರ ಮಾಗಣೆಯನ್ನಾಗಿ ಕೊಟ್ಟ ವಿಚಾರ, ಈ ನಾಯಕನು ಮುಂದೆ ಈ ಸೀಮೆಯನ್ನು ಗುಲ್ಲೆಪ್ಪನಾಯಕನಿಗೆ ವಹಿಸಿಕೊಟ್ಟ ವಿಚಾರ ಹಾಗೂ ಹೊಳಲ್ಕೆರೆ ಮಾಗಣೆಗೆ ಸೇರಿದ ಭೀಮಸಮುದ್ರ ದೊಡ್ಡಾಪುರ, ಗಿಲ್ಕೆನಹಳ್ಳಿ, ಹಳೆಹಳ್ಳಿ, ಎಮ್ಮಿಗನೂರು, ಬೊಮ್ಮನಕಟ್ಟೆ, ಹನುಮಂತನ ಹಳ್ಳಿ, ಹಿರೆಹಳ್ಳಿ, ಭೈರಪನಹಳ್ಳಿ, ಮುಂತಾದವುಗಳನ್ನು ಶ್ರೀ ಗೋಪಾಲಸ್ವಾಮಿಗೆ ದತ್ತಿ ಬಿಟ್ಟ ವಿಚಾರ ತಿಳಿದುಬರುತ್ತದೆ. ಈ ವಿಚಾರವನ್ನು ಶಾಸನ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಒಟ್ಟಾರೆ ಇತ್ತೀಚಿಗೆ ದೇವಸ್ಥಾನದ ಮುಂದೆ ಸುಮಾರು ೪೦ ಅಡಿಯ ಗೋಪುರವನ್ನು ನಿರ್ಮಿಸಲಾಗುತ್ತಿದೆ.

ಸಂಖ್ಯೆ: ೨

ಹೆಸರು : ವೀರಭದ್ರಸ್ವಾಮಿ ದೇವಾಲಯ.

ಗ್ರಾಮ : ಹೊಳಲ್ಕೆರೆ.

ಕಾಲಮಾನ: ಕ್ರಿ.ಶ.ಸುಮಾರು ೧೩-೧೪ನೆಯ ಶತಮಾನ

ದಿಕ್ಕು : ಉತ್ತರಾಭಿಮುಖ.

ಕಾಲ : ಹೊಯ್ಸಳರು.[೧೧]

ಬಯಲು ಗಣಪತಿ ದೇವಾಸ್ಥಾನಕ್ಕೆ ಹೋಗುವ ನಗರದ ಮಧ್ಯಭಾಗದಲ್ಲಿರುವ ವೀರಭದ್ರ ಸ್ವಾಮಿ ದೇವಾಲಯವು ಚಿತ್ರದುರ್ಗ ಪಾಳೆಯಗಾರರ ಕಾಲದ ಶೈವ ದೇವಾಲಯಗಳಲ್ಲಿ ಪ್ರಮುಖವಾಗಿದೆ. ಇದು ತನ್ನ ವಿವಿಧ ವಾಸ್ತು ಲಕ್ಷಣಗಳಿಂದ ವಿಶಿಷ್ಟವೆನಿಸುತ್ತದೆ.

ದೇವಾಲಯವು ಮೂರು ಗರ್ಭಗೃಹಗಳನ್ನು ಹೊಂದಿದ್ದು, ತ್ರಿಕೂಟ ಮಾದರಿಯಲ್ಲಿದೆ. ಮೂರು ಗರ್ಭಗೃಹಗಳ ಭಿತ್ತಿ ಮತ್ತು ಛತ್ತುಗಳು ಸರಳವಾಗಿವೆ. ಎಡಬಲ ಬದಿಯ ಗರ್ಭಗೃಹಗಳ ದ್ವಾರದ ಇಕ್ಕೆಲಗಳಲ್ಲಿ ಪೂರ್ಣ ಕುಂಭಗಳ ಉಬ್ಬುಶಿಲ್ಪಗಳಿವೆ. ಪ್ರಧಾನ ಗರ್ಭಗೃಹದ ದ್ವಾರಬಂಧವು ಸ್ತಂಭ ಶಾಖೆಗಳಲ್ಲಿದ್ದು ಇಕ್ಕೆಲ್ಲಗಳಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಬಲಬದಿಯ ದ್ವಾರಪಾಲಕ ತ್ರಿಶೂಲ, ಸರ್ಪ, ಗದಾಧಾರಿಯಾಗಿದ್ದರೆ, ಎಡಬದಿಯ ದ್ವಾರಪಾಲಕ ತ್ರಿಶೂಲ, ಡಮರು, ಗದಾಧಾರಿಯಾಗಿದ್ದಾನೆ, ಲಲಾಟದಲ್ಲಿ ಶಿವಪಾರ್ವತಿಯರ ಉಬ್ಬುಶಿಲ್ಪಗಳಿವೆ. ಬದಿಯಲ್ಲಿ ಕುಡ್ಯಸ್ಥಾಲಗಳಿವೆ. ಪ್ರಧಾನ ಗರ್ಭಗೃಹದ ಮುಂಭಾಗದಲ್ಲಿ ಯಾವುದೇ ಕಂಬಗಳಿರದೆ ಒಂದೇ ಅಂಕಣದ ಅಂತರಾಳವಿದೆ.

ಸಭಾಮಂಟಪವು ಮೂರು ಗರ್ಭಗೃಹಗಳಿಗೆ ಹೊಂದಿಕೊಂಡಿದ್ದು ಮಧ್ಯದಲ್ಲಿ ಎತ್ತರವಾದ ವೇದಿಕೆಯನ್ನು ಹೊಂದಿದೆ. ಈ ವೇದಿಕೆಯ ನಾಲ್ಕು ಮೂಲೆಗಳಿಗೆ ನಾಲ್ಕು ಸ್ವತಂತ್ರ ಕಂಬಗಳು, ಸುತ್ತಲೂ ಹತ್ತು ಗೋಡೆಗಂಬಗಳಿವೆ. ಸಭಾಮಂಟಪದ ಪ್ರವೇಶದಲ್ಲಿ ಮಧ್ಯದ ನಾಲ್ಕು ಕಂಬಗಳಿಗೆ ಸಾಮಾನ್ಯವಾಗಿ ಎರಡು ಕಂಬಗಳಿವೆ. ಈ ಕಂಬಗಳು ಪೀಠ ಸಹಿತ ಖಂಡದವರೆಗೆ ಏಕಶಿಲೆಯ ಸ್ತಂಭಗಳಾಗಿದ್ದು ಕೆಳಗೆ, ಮಧ್ಯ ಮತ್ತು ಮೇಲೆ ಮೂರು ಅಸಮವಾದ ಚೌಕ ಭಾಗಗಳನ್ನು ಹೊಂದಿವೆ, ಕೆಳಗಿನ ಚೌಕಭಾಗಕ್ಕಿಂತ ಮಧ್ಯದ್ದು, ಅದರ ಅರ್ಧಭಾಗದಲ್ಲಿದ್ದರೆ ಮೇಲಿನದು ಮಧ್ಯದ ಚೌಕ ಭಾಗದ ಅರ್ಧದಷ್ಟಿದೆ. ಈ ಕಂಬಗಳ ನಾಲ್ಕು ಚೌಕಪಟ್ಟಿಗಳ ಮುಖ ಭಾಗಗಳಲ್ಲಿ ಮೃದಂಗವಾದಕ, ನಂದಿ, ಕುಬ್ಜ, ಖಡ್ಗಧಾರಿ, ವೀರ, ತಂಬೂರಿವಾದಕ, ಹಠಯೋಗಿ, ಭಕ್ತ, ಶಿವಲಿಂಗಕ್ಕೆ ಕ್ಷೀರಧಾರೆಯೆರೆಯುತ್ತಿರುವ ಹಸು, ಗಣೇಶ, ಭೈರವ, ನೃತ್ಯಗಾತಿ, ಆನೆ, ಹಂಸ, ಗಂಡಭೇರುಂಡ, ಚತುರ್ಮುಖ ಬ್ರಹ್ಮ, ಷಣ್ಮುಖ, ಮುಂತಾದ ಉಬ್ಬುಶಿಲ್ಪಗಳಿವೆ. ಕಂಬಗಳ ಮೇಲ್ಭಾಗದಲ್ಲಿ ಕಳಸ ಹಾಗೂ ತಾಡಿಗಳಿದ್ದು ಅವುಗಳ ಮೇಲೆ ಪುಷ್ಪ ಬೋದುಗೆಗಳಿವೆ. ಸಭಾಂಗಣದ ಮಧ್ಯದ ಛತ್ತಿನಲ್ಲಿ ಅರಳು ಕಮಲದ ಭುವನೇಶ್ವರಿಯಿದ್ದು, ಅದರ ಮಧ್ಯದಲ್ಲಿ ಮುಗುಚಿದ ಕಮಲವಿದೆ. ಉಳಿದಂತೆ ಭಿತ್ತಿ ಮತ್ತು ಛತ್ತು ಸರಳವಾಗಿದೆ.

ದೇವಾಲಯದ ಹೊರಭಾಗದಲ್ಲಿ ಸಭಾಮಂಟಪಕ್ಕೆ ಎರಡು ಮೆಟ್ಟಿಲುಗಳಿದ್ದು, ಇಕ್ಕೆಲಗಳಲ್ಲಿ ಆನೆಗಳ ಕೈಪಿಡಿಗಳಿವೆ. ಅಧಿಷ್ಠಾನವು ಮಂಚಬಂಧ ಶೈಲಿಯಲ್ಲಿದ್ದು, ಉಪಾನಗಳ ಮತ್ತು ಕುಮುದ ಭಾಗಗಳನ್ನು ಹೊಂದಿದೆ. ಉಪಾನ ಮತ್ತು ಕುಮುದ ಭಾಗದಲ್ಲಿ ಅಲ್ಲಲ್ಲಿ ಪರಸ್ಪರ ಅಭಿಮುಖವಾಗಿ ಚೈತ್ಯಾಕೃತಿಗಳ ಅಲಂಕರಣೆಯಿದೆ. ದೇವಾಲಯದ ಭಿತ್ತಿಯನ್ನು ಮಟ್ಟಸಗೊಳಿಸಿದ ಬೃಹತ್ ಅಳತೆ ಕಲ್ಲುಗಳಿಂದ ಕಟ್ಟಲಾಗಿದೆ. ಭಿತ್ತಿಯಲ್ಲಿ ಕಂಬಗಳು ಮತ್ತು ಬೋದುಗೆಗಳು ಗೋಚರಿಸುತ್ತವೆ. ಗರ್ಭಗೃಹದ ಗೋಡೆಯ ಮೇಲೆ ನಾಗಸರ್ಪದ ಬೃಹತ್ ಉಬ್ಬುಶಿಲ್ಪವಿದೆ. ಭಿತ್ತಿಯ ಮೇಲೆ ಮಾಡಿದ ದೇವಾಲಯದುದ್ದಕ್ಕೂ ಇಳಿಜಾರಾದ ಮುಂಚಾರು ಇದೆ. ಮೂರು ಗರ್ಭಗೃಹಗಳ ಮೇಲೆ ಶಿಖರ, ಕಂಗೂರಾಕೃತಿ, ನಂದಿಶಿಲ್ಪಗಳು ಹಾಗೂ ದೇವಕೋಷ್ಠಕಗಳಿದ್ದು ಅವುಗಳು ನಂತರದ ರಚನೆಗಳಾಗಿ ತೋರುತ್ತವೆ.

ದೇವಾಲಯದ ಎದುರಿಗೆ ದ್ವಾರಮಂಟಪವಿದೆ. ಮಧ್ಯದ ಪ್ರವೇಶ ಹಾದಿಯನ್ನು ಹೊರತುಪಡಿಸಿ ಅಕ್ಕಪಕ್ಕದಲ್ಲಿ ಹೊರ-ಒಳಬದಿಗೂ ಕಟ್ಟೆಗಳಿದ್ದು ಅವುಗಳ ತುದಿಗೆ ಕಂಬಗಳಿವೆ. ಈ ಮಂಟಪದ ಮೇಲೆ ನಂತರದ ಕಾಲದಲ್ಲಿ ನಿರ್ಮಿಸಿದ ಕಂಗೂರಾಕೃತಿಗಳಿವೆ.

ಇಡೀ ದೇವಾಲಯವನ್ನು ಪರಿಶೀಲಿಸಿದಾಗ ಇಲ್ಲಿ ಬೇರೆ ಬೇರೆ ಕಾಲದ ವಾಸ್ತುಭಾಗಗಳು ಕಂಡುಬರುತ್ತವೆ. ಇದರ ಪ್ರವೇಶ ಮಂಟಪದ ಮೂರು ಕಂಬಗಳು ಪ್ರಾಯಶಃ ಚಾಲುಕ್ಯ ಶೈಲಿಯನ್ನು ಹೋಲಿದರೆ, ಮಧ್ಯದ ಸಭಾಮಂಟಪದ ನಾಲ್ಕು ಕಂಬಗಳು, ಅವುಗಳ ಮೇಲಿನ ಬೋದುಗೆಗಳು ಹಾಗೂ ಅಂತರಾಳದ ದ್ವಾರಬಂಧ ವಿಜಯನಗರ ಶೈಲಿಯಲ್ಲಿದ್ದು, ಉಳಿದ ಎಲ್ಲಾ ವಾಸ್ತುಭಾಗಗಳು ಪಾಳೆಯಗಾರರ ಕಾಲದ್ದಾಗಿವೆ. ಹೀಗಾಗಿ ಈ ದೇವಾಲಯದ ನಿರ್ಮಾಣ ಸಂದರ್ಭದಲ್ಲಿ ಚಾಲುಕ್ಯ ಮತ್ತು ವಿಜಯನಗರ ಕಾಲದ ಸ್ತಂಭಗಳನ್ನು ಹಾಗೂ ದ್ವಾರಬಂಧವನ್ನು ಬಳಸಿಕೊಂಡಿರುವುದು ಇಲ್ಲಿ ವಿದಿತವಾಗಿರುತ್ತದೆ.

ದೇವಾಲಯದ ಪ್ರಧಾನ ಗರ್ಭಗೃಹದಲ್ಲಿ ವೀರಭದ್ರಸ್ವಾಮಿಯ ವಿಗ್ರಹವಿದ್ದರೆ, ಅದರ ಎಡಬದಿಯ ಗರ್ಭಗೃಹದಲ್ಲಿ ಶಿವಲಿಂಗ, ಬಲಬದಿಯ ಗರ್ಭಗೃಹದಲ್ಲಿ ನಂದಿ ವಿಗ್ರಹಗಳಿವೆ.

ಸಂಖ್ಯೆ: ೩

ಹೆಸರು　　ಕೋದಂಡರಾಮ ದೇವಸ್ಥಾನ

ಗ್ರಾಮ　　ಹೊಳಲ್ಕೆರೆ.

ಕಾಲಮಾನ　　ಕ್ರಿ.ಶ.ಸುಮಾರು ೧೪-೧೫ನೆಯ ಶತಮಾನ

ದಿಕ್ಕು　　ಉತ್ತರಾಭಿಮುಖ.

ಪೂರ್ವಾಭಿಮುಖವಾಗಿರುವ ದೇವಾಲಯವು ತಳವಿನ್ಯಾಸದಲ್ಲಿ ಚೌಕಾಕಾರ ಗರ್ಭಗೃಹ, ಅಂತರಾಳ, ನವರಂಗಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಕಪ್ಪು ಶಿಲೆಯ, ರಾಮ, ಲಕ್ಷ್ಮಣ, ಸೀತೆಯ ಮೂರ್ತಿಗಳಿದ್ದು ಹಿಂದೆ ಅಲಂಕಾರಯುತ ಪ್ರಭಾವಳಿಯಿದೆ. ನವರಂಗದಲ್ಲಿ ಸರಳ ಅಲಂಕರಣೆಯ ನಾಲ್ಕು ಕಂಬಗಳಿದ್ದು, ಪೀಠ, ಅಷ್ಟಮುಖದಿಂಡು, ಚೌಕ, ಬೊದಿಗೆಗಳನ್ನು ಒಳಗೊಂಡಿದೆ. ದ್ರಾವಿಡ ಮಾದರಿಯ ಶಿಖರವಿದ್ದು, ನಾಲ್ಕು ಕಡೆ ಸಿಂಹಗಳಿವೆ. ಶಿಖರದ ಮಧ್ಯೆಭಾಗ ಕಂಬ ಮಾದರಿಯ ಕಳಶವಿದೆ.

ಸಂಖ್ಯೆ: ೪

ಹೆಸರು　:　ಮಾತಾ ಗಾಯಿತ್ರಿ ದೇವಸ್ಥಾನ

ಗ್ರಾಮ　:　ಹೊಳಲ್ಕೆರೆ.

ಕಾಲಮಾನ:　ಕ್ರಿ.ಶ.ಸುಮಾರು ೧೫-೧೬ನೆಯ ಶತಮಾನ

ದಿಕ್ಕು　:　ಈಶಾನ್ಯ

ಈಶಾನ್ಯಾಭಿಮುಖವಾಗಿರುವ ದೇವಸ್ಥಾನ ಕೋದಂಡರಾಮ ದೇವಸ್ಥಾನಕ್ಕೆ ಹೊಂದಿಕೊಂಡಂತಿದೆ. ತಳವಿನ್ಯಾಸದಲ್ಲಿ ಚೌಕಾಕಾರ ಗರ್ಭಗೃಹವನ್ನು ಮಾತ್ರ ಹೊಂದಿದ್ದು ಮಧ್ಯದ ಅಲಂಕರಣೆಯಲ್ಲಿ ಪೀಠದ ಮೇಲೆ ಮಾತಾ ಗಾಯಿತ್ರಿ ಮೂರ್ತಿಯ ಶಿಲ್ಪವಿದೆ. ಶಿಲ್ಪದ ಕೆತ್ತನೆಯು ಕಪ್ಪು ಶಿಲೆಯಲ್ಲಿದ್ದು ಶಿಲ್ಪದ ಸುತ್ತಲೂ ಅಲಂಕಾರಯುತ ಪ್ರಭಾವಳಿಯಿದೆ. ಪ್ರಭಾವಳಿಯ ಮಧ್ಯೆ ಕೀರ್ತಿಮುಖ ಸಿಂಹವಿದೆ. ಶಿಲ್ಪದ ಸುತ್ತಲೂ ಇತ್ತೀಚಿಗೆ ಕಂಚಿನ ಪ್ರಭಾವಳಿಯನ್ನು ಮಾಡಿಸಲಾಗಿದೆ.

ಸಂಖ್ಯೆ: ೫

ಹೆಸರು : ಈಶಾನ್ಯಮುಖ ಆಂಜನೇಯ ದೇವಸ್ಥಾನ

ಗ್ರಾಮ : ಹೊಳಲ್ಕೆರೆ.

ಕಾಲಮಾನ: ಕ್ರಿ.ಶ.ಸುಮಾರು ೧೫–೧೬ನೆಯ ಶತಮಾನ

ದಿಕ್ಕು : ಈಶಾನ್ಯ

ಕೋದಂಡರಾಮ ದೇವಸ್ಥಾನಕ್ಕೆ ಹೊಂದಿಕೊಂಡು ಈಶಾನ್ಯಾಭಿಮುಖವಾಗಿರುವ ಆಂಜನೇಯ ದೇವಸ್ಥಾನವು ಚೌಕಾಕಾರದ ಗರ್ಭಗೃಹವನ್ನು ಮಾತ್ರ ಹೊಂದಿದ್ದು, ಮಧ್ಯೆ ಆಂಜನೇಯನ ಶಿಲ್ಪವಿದೆ. ಸಾಮಾನ್ಯವಾಗಿ ಆಂಜನೇಯನ ದೇವಸ್ಥಾನಗಳು ದಕ್ಷಿಣಾಭಿಮುಖವಾಗಿರುತ್ತವೆ. ಅದಕ್ಕೆ ಅಪವಾದವೆಂಬಂತೆ ಇದು ಈಶಾನ್ಯಾಭಿಮುಖವಾಗಿರುವುದು ವಿಶೇಷ. ದ್ವಾರದ ಪೇದ್ಯ ಭಾಗದಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳನ್ನು ಕಂಡರಿಸಲಾಗಿದೆ.

ಸಂಖ್ಯೆ: ೬

ಹೆಸರು : ಶ್ರೀ ಗುರುಕೊಟ್ಟೂರು ಬಸವೇಶ್ವರಸ್ವಾಮಿ ದೇವಸ್ಥಾನ

ಗ್ರಾಮ : ಹೊಳಲ್ಕೆರೆ.

ಕಾಲಮಾನ: ಕ್ರಿ.ಶ.ಸುಮಾರು ೧೬–೧೭ನೆಯ ಶತಮಾನ

ದಿಕ್ಕು : ಪಶ್ಚಿಮ

ಪಶ್ಚಿಮಾಭಿಮುಖವಾಗಿರುವ ದೇವಸ್ಥಾನವು, ಗಣಪತಿ ದೇವಸ್ಥಾನಕ್ಕೆ ಹೋಗುವ ದಾರಿಯ ಎಡಭಾಗದಲ್ಲಿದೆ. ತಲವಿನ್ಯಾಸದಲ್ಲಿ ಚೌಕಾಕಾರದ ಗರ್ಭಗೃಹ, ಅಂತರಾಳವನ್ನು ಹೊಂದಿದೆ. ಗರ್ಭಗೃಹದಲ್ಲಿ ಎರಡು ಅಡಿ ಎತ್ತರದ ಕಪ್ಪುಶಿಲೆಯ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಲಿಂಗದ ಎದುರಿಗೆ ಅಂತರಾಳದಲ್ಲಿ ನಂದಿಯಿದೆ. ಲಿಂಗ ಮತ್ತು ನಂದಿಯನ್ನು ಕಾಲಮಾನದ ದೃಷ್ಟಿಯಿಂದ ಹೊಯ್ಸಳ ಕಾಲದವುಗಳೆಂದು ಗುರುತಿಸಿದರೂ ದೇವಸ್ಥಾನವನ್ನು ಇತ್ತೀಚಿಗೆ ೨೦೦೯ರಲ್ಲಿ ನಿರ್ಮಿಸಲಾಗಿದೆ. ದೇವಸ್ಥಾನದ ಮೇಲಿನ ಎರಡೂ ಬದಿಗಳಲ್ಲಿ ನಂದಿ ಶಿಲ್ಪಗಳಿದ್ದು ಮಧ್ಯದಲ್ಲಿ ಬೇಡರ ಕಣ್ಣಪ್ಪ ಶಿವಲಿಂಗಕ್ಕೆ ತನ್ನ ಕಣ್ಣನ್ನು ಕಿತ್ತು ಹಾಕುತ್ತಿರುವ ದೃಶ್ಯವಿದೆ.

ಸಂಖ್ಯೆ: ೭

ಹೆಸರು : ಸೋಮೇಶ್ವರ ದೇವಾಲಯ

ಗ್ರಾಮ : ಹೊಳಲ್ಕೆರೆ.

ಕಾಲಮಾನ: ಕ್ರಿ.ಶ.ಸುಮಾರು ೧೧-೧೨ನೆಯ ಶತಮಾನ

ದಿಕ್ಕು : ಪೂರ್ವಾಭಿಮುಖ

ಪೂರ್ವಾಭಿಮುಖವಾಗಿರುವ ದೇವಾಲಯವು ತಲವಿನ್ಯಾಸದಲ್ಲಿ ಚೌಕಾಕಾರದ ಗರ್ಭಗೃಹವನ್ನು ಮಾತ್ರ ಹೊಂದಿದೆ. ಗರ್ಭಗೃಹದ ತಳದಲ್ಲಿ ಲಿಂಗವಿದೆ, ಎದುರಿಗೆ ನಂದಿ ಶಿಲ್ಪವಿದೆ. ಇವೆರಡು ಸುಮಾರು ತಳಮಟ್ಟದಿಂದ ೨-೩ ಅಡಿ ಆಳದಲ್ಲಿರುವುದು ವಿಶೇಷ. ಇತ್ತೀಚ್ಚಿಗೆ ಭಕ್ತರು ಹೊಸ ಗುಡಿಯೊಂದನ್ನು ಕಟ್ಟಿಸುತ್ತಿದ್ದಾರೆ. ಗರ್ಭಗೃದ ಸುತ್ತಲೂ ನಂದಿಶಿಲ್ಪಗಳಿಗೆ ಪ್ರವೇಶ ದ್ವಾರದಲ್ಲಿ ಸುಮಾರು ೩೦ ಅಡಿ ಎತ್ತರದ ಬೃಹದಾಕಾರದ ಧ್ಯಾನಾಸಕ್ತ ಶಿವನ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಲಿಂಗ ಮತ್ತು ನಂದಿಗಳು ಕಪ್ಪುಶಿಲೆಯಲ್ಲಿದ್ದು ಕ್ರಿ.ಶ.೧೧-೧೨ನೆಯ ಶತಮಾನದವುಗಳೆಂದು ಹೇಳಬಹುದು. ಇದೇ ರೀತಿಯ ಲಿಂಗ ಮತ್ತು ನಂದಿಗಳು ಪಕ್ಕದ ಬಸವೇಶ್ವರ ದೇವಾಲಯದಲ್ಲಿವೆ.

ಸಂಖ್ಯೆ: ೮

ಹೆಸರು : ಹಳ್ಳದ ವೀರಭದ್ರದೇವಾಲಯ

ಗ್ರಾಮ : ಹೊಳಲ್ಕೆರೆ.

ಕಾಲಮಾನ: ಕ್ರಿ.ಶ.ಸುಮಾರು ೧೩-೧೪ನೆಯ ಶತಮಾನ

ದಿಕ್ಕು : ಪೂರ್ವಾಭಿಮುಖ

ಪಟ್ಟಣದ ಹೊರವಲಯದ ಹಳ್ಳದಲ್ಲಿರುವ ಪೂರ್ವಾಭಿಮುಖವಾಗಿರುವ ಈ ದೇವಾಲಯವು ತಲವಿನ್ಯಾಸದಲ್ಲಿ ಚೌಕಾಕಾರದ ಗರ್ಭಗೃಹ, ಮುಖಮಂಟಪವನ್ನು ಒಳಗೊಂಡಿದೆ. ಚೌಕಾಕಾರದ ಗರ್ಭಗೃಹದಲ್ಲಿ ಸ್ಥಾನಿಕ ಭಂಗಿಯಲ್ಲಿರುವ ವೀರಭದ್ರನ ಶಿಲ್ಪವಿದೆ. ಲಲಾಟವು ಸರಳವಾಗಿದ್ದು ಗಜಲಕ್ಷ್ಮಿ ಶಿಲ್ಪವನ್ನು ಹೊಂದಿದೆ. ದ್ವಾರಬಂಧದಲ್ಲಿ ನಾಲ್ಕು ಶಾಖೆಗಳಿಂದ ವಜ್ರ, ಲತಾ, ಅರೆಗಂಬಗಳಿಂದ ಅಲಂಕೃತಗೊಂಡಿದೆ. ದೇವಾಲಯದ ಎದುರಿಗೆ ೨೦ ಅಡಿ ಎತ್ತರದ ಗರುಡಸ್ತಂಭವಿದ್ದು ಅದರ ಮೇಲೆ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ.

ಸಂಖ್ಯೆ: ೯

ಹೆಸರು ತೋಟದಲ್ಲಿ ಲಿಂಗದ ಗುಡಿ

ಗ್ರಾಮ ಹೊಳಲ್ಕೆರೆ.

ಕಾಲಮಾನ ಕ್ರಿ.ಶ.ಸುಮಾರು ೧೧-೧೨ನೆಯ ಶತಮಾನ

ದಿಕ್ಕು ಪೂರ್ವಾಭಿಮುಖ

ಪೂರ್ವಾಭಿಮುಖವಾಗಿರುವ ಈ ಗುಡಿಯು ಕಲ್ಲು ಮಣ್ಣಿನಿಂದ ಮಾಡಿದ ದೇವಾಲಯವಾಗಿದೆ. ಗರ್ಭಗುಡಿಯು ಮಾತ್ರ ಇದ್ದು, ಅದರಲ್ಲಿ ಕ್ರಿ. ಶ. ಸುಮಾರು ೧೧-೧೨ನೆಯ ಶತಮಾನದ ಪೀಠದ ಮೇಲೆ ಲಿಂಗವಿದೆ. ಲಿಂಗದ ಎದುರಿಗೆ ಭುಜಧಾರಿಯಾದ ನಂದಿಯಿದೆ. ನಂದಿಯ ಶಿಲ್ಪದ ವಿಶೇಷವೆಂದರೆ ಪ್ರಾಚೀನ ಕಾಲದ ಶಿಲ್ಪಗಳಿಗೆ ಗುಡಿಯನ್ನು ಕಟ್ಟಿಸಲಾಗಿದೆ.

ಸಂಖ್ಯೆ: ೧೦

ಹೆಸರು : ಕೋಡಿ ಬಸವೇಶ್ವರ ದೇವಾಲಯ

ಗ್ರಾಮ : ಹೊಳಲ್ಕೆರೆ.

ಕಾಲಮಾನ: ಕ್ರಿ.ಶ.ಸುಮಾರು ೧೫-೧೬ನೆಯ ಶತಮಾನ

ದಿಕ್ಕು : ಪೂರ್ವಾಭಿಮುಖ

ಪೂರ್ವಾಭಿಮುಖವಾಗಿರುವ ಕೋಡಿ ಬಸವೇಶ್ವರ ದೇವಾಲಯವು ಪಟ್ಟಣದ ಮಧ್ಯೆದಲ್ಲಿದೆ. ತಲವಿನ್ಯಾಸದಲ್ಲಿ ಗರ್ಭಗೃಹ, ಹಜಾರವನ್ನು ಹೊಂದಿದೆ. ಗರ್ಭಗೃಹದಲ್ಲಿ ಪೀಠದ ಮೇಲೆ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಸ್ಥಳೀಯವಾಗಿ ಇದನ್ನು ಕೋಡಿ ಬಸವೇಶ್ವರ ದೇವಾಲಯ ಎನ್ನುವರು. ದೇವಾಲಯದ ಮೇಲೆ ಸುತ್ತಲೂ ನಂದಿ ಶಿಲ್ಪಗಳನ್ನು, ಪ್ರವೇಶದ ಮೇಲು ಭಾಗದಲ್ಲಿ ಈಶ್ವರ ಮತ್ತು ಪಾರ್ವತಿ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ಪ್ರಾಚೀನ ಕಾಲದ ನಂದಿಗೆ ಆಧುನಿಕ ಶೈಲಿಯ ದೇವಾಲಯವನ್ನು ಕಟ್ಟಲಾಗಿದೆ.

ಸಂಖ್ಯೆ: ೧೧

ಹೆಸರು ಆಂಜನೇಯಸ್ವಾಮಿ ದೇವಾಲಯ

ಗ್ರಾಮ ಹೊಳಲ್ಕೆರೆ.

ಕಾಲಮಾನ ಕ್ರಿ.ಶ.ಸುಮಾರು ೧೫-೧೬ನೆಯ ಶತಮಾನ

ದಿಕ್ಕು ದಕ್ಷಿಣಾಭಿಮುಖ

ದಕ್ಷಿಣಾಭಿಮುಖವಾಗಿರುವ ಆಂಜನೇಯ ದೇವಾಲಯವು ಪಟ್ಟಣದ ಪೂರ್ವಕ್ಕಿದೆ. ಹೊನ್ನಮ್ಮ, ಹೊಳಲಮ್ಮ, ದೇವಾಲಯದ ಪಕ್ಕದಲ್ಲಿದೆ. ತಲವಿನ್ಯಾಸಲ್ಲಿ ಗರ್ಭಗೃಹ, ಅಂತರಾಳ, ಗರ್ಭಗೃಹದಲ್ಲಿ ಸ್ಥಾನಿಕ ಭಂಗಿಯಲ್ಲಿರುವ ಆಂಜನೇಯನ ಶಿಲ್ಪವಿದೆ. ಸುತ್ತಲೂ ಕಂಚಿನ ಅಲಂಕಾರಯುತ ಪ್ರಭಾವಳಿಯಿದೆ. ಸರಳವಾದ ಬಾಗಿಲುವಾಡವನ್ನು ಹೊಂದಿದ್ದು ಎರಡು ದ್ವಾರದಲ್ಲಿ ಕಮಲವನ್ನು ಕಂಡರಿಸಲಾಗಿದೆ. ಈ ದೇವಾಲಯವು ಧಾರ್ಮಿಕ ದತ್ತಿ ಇಲಾಖೆಗೆ ಒಳಪಟ್ಟಿದೆ. ಇದೇ

ಪಟ್ಟಣದಲ್ಲಿ ಈಶಾನ್ಯಾಮುಖ ಆಂಜನೇಯ ಹಾಗೂ ದಕ್ಷಿಣಾಭಿಮುಖ ಆಂಜನೇಯ ಇರುವುದು ವಿಶೇಷವಾಗಿದೆ.

ಸಂಖ್ಯೆ: ೧೨

ಹೆಸರು : ಮೈಲಾರಮ್ಮನ ದೇವಾಲಯ

ಗ್ರಾಮ : ಹೊಳಲ್ಕೆರೆ.

ಕಾಲಮಾನ: ಕ್ರಿ.ಶ.ಸುಮಾರು ೧೫-೧೬ನೆಯ ಶತಮಾನ

ದಿಕ್ಕು : ಪೂರ್ವಾಭಿಮುಖ

ಪೂರ್ವಾಭಿಮುಖವಾಗಿರುವ ದೇವಾಲಯವು ತಲವಿನ್ಯಾಸದಲ್ಲಿ ಚೌಕಾಕಾರದ ಗರ್ಭಗೃಹ, ಅಂತರಾಳವನ್ನು ಹೊಂದಿದೆ. ಗರ್ಭಗೃಹದ ಮಧ್ಯೆದಲ್ಲಿ ಪೀಠದ ಮೇಲೆ ಕಪ್ಪುಶಿಲೆಯಲ್ಲಿರುವ ಅಲಂಕಾರಯುತ ಪ್ರಭಾವಳಿಯುಳ್ಳ ದೇವಿ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯವನ್ನು ಇತ್ತೀಚಿಗೆ ಟೈಲ್ಸ್ ಅಳವಡಿಸಿ ನವೀಕರಣಗೋಳಿಸಲಾಗಿದೆ. ಈ ದೇವಾಲಯಕ್ಕೆ ಗ್ರಾಮದ ಎಲ್ಲಾ ಸಮುದಾಯದವರು ನಡೆದುಕೊಳ್ಳುತ್ತಾರೆ.

೫.೨. ಮೂರ್ತಿಶಿಲ್ಪ

ಶಿಲ್ಪ ಎನ್ನುವ ಪದವು ಮೂರ್ತಿಶಿಲ್ಪ ಎಂಬ ಅರ್ಥದಲ್ಲಿ ರೂಢಿಗತವಾಗಿದ್ದರೂ ಅದಕ್ಕೆ ತನ್ನದೇ ಆದ ಖಚಿತಾರ್ಥವಿದೆ. ಶಿಲ್ಪಕರ್ಮ ಕಲಾಧಿಕಂ[೨]. ಇದು ಅಮರಸಿಂಹನ ಅಮರಕೋಶದ ವಿವರಣೆ, ಕರ್ತೃವಿನ ಅಧಿಕ ಕೌಶಲ್ಯಗಳನ್ನೊಳಗೊಂಡ ಕರ್ಮ ಅಥವಾ ಕ್ರಿಯೆಗೆ ಶಿಲ್ಪವೆಂದು ಹೆಸರು. ಇದು ತಾಂತ್ರಿಕ ಪರಿಣಿತಿಯನ್ನು ಅಪೇಕ್ಷಿಸುತ್ತದೆ. ಶಿಲ್ಪ ಶಬ್ಧಸ್ತಯ ಪುನಃ ಶೀಲ ಸಮಾಧೌ ಇತಿಧಾತೋರ್ಮನಸಃ ಸಮಾಧಾನ ಕಾರಕಂ ವಾಸ್ತು ಜಾತಿಮಿತಿ ಉತ್ಪದ್ಯತೀ, ಶಿಲ್ಪ ಎಂಬ ಶಬ್ಧವು ಮನಸ್ಸಿಗೆ ಸಮಾಧಾನವನ್ನುಂಟು ಮಾಡುವ ಕ್ರಿಯೆಯಾಗಿದ್ದು, ಕಲೆಯ ದೃಷ್ಟಿಯನ್ನು ಪ್ರತಿಬಿಂಬಿಸುತ್ತದೆ.

ಸಾಮಾನ್ಯವಾಗಿ ಕೆಲವೊಮ್ಮೆ ಶಿಲ್ಪಶಾಸ್ತ್ರವೆಂದರೆ ಮೂರ್ತಿ ಅಥವಾ ಪ್ರತಿಮಾ ರಚನೆ ಲಕ್ಷಣಗಳು, ಚಿತ್ರರಚನೆ, ಕಾಲಮಾನ ಇತ್ಯಾದಿಗಳನ್ನು ಹೆಸರಿಸಿರುವುದುಂಟು, ಆದರೆ ಪ್ರೊ. ಫಣೇಂದ್ರನಾಥ ಭೋಸ್ ಅವರು ಭಾರತೀಯ ಶಿಲ್ಪಶಾಸ್ತ್ರದ ಮೂಲತತ್ವಗಳನ್ನು ಗುರುತಿಸುವಾಗ ಶಿಲ್ಪಶಾಸ್ತ್ರವೆಂಬ ಪದವನ್ನು ವಾಸ್ತು ಹಾಗೂ ಪ್ರತಿಮಾಶಾಸ್ತ್ರ ಎರಡನ್ನೂ ಒಳಗೊಂಡಂತೆ ವಿವರಿಸಿದ್ದಾರೆ.[೩]

ಅದೇ ರೀತಿ ಶುಕ್ರನೀತಿ ಗ್ರಂಥವು ದೇವಾಲಯ, ಅರಮನೆ, ದೇವತಾ ಮೂರ್ತಿ ಸರ್ವಜನೋಪಯೋಗಿ ಗೃಹಗಳು, ಬಾವಿ, ಪುಷ್ಕರಣಿ ಮುಂತಾದವುಗಳ ರಚನೆಯನ್ನು

ಶಿಲ್ಪಶಾಸ್ತ್ರವಡಿಯಲ್ಲಿ ಗುರುತಿಸುತ್ತಿದೆ.[೧೯] ಹಾಗಾಗಿ ಶಿಲ್ಪ ಎಂಬ ಪದವನ್ನು ವಾಸ್ತುಶಿಲ್ಪ ಹಾಗೂ ಮೂರ್ತಿಶಿಲ್ಪಕ್ಕೂ ಬಳಸಲಾಗುತ್ತದೆ.

ಪ್ರಸುತ್ತ ಅಧ್ಯಯನ ಹೊಳಲ್ಕೆರೆ ಪಟ್ಟಣದಲ್ಲಿನ ಶೈವ, ವೈಷ್ಣವ, ಶಾಕ್ತ ಮತ್ತು ಇತರೆ ಶಿಲ್ಪಗಳನ್ನೊಳಗೊಂಡಿದೆ. ಪ್ರಮುಖವಾಗಿ ಅವುಗಳನ್ನು ಈ ಕೆಳಗೆ ಒಂದೊಂದಾಗಿ ವಿಶ್ಲೇಷಿಸಲಾಗಿದೆ.

i. **ಶೈವ ಶಿಲ್ಪಗಳು**

ಭಾರತೀಯ ಇತಿಹಾಸದಲ್ಲಿ ಶೈವ ಧರ್ಮಕ್ಕೆ ಅತ್ಯಂತ ಪ್ರಾಚೀನ ಇತಿಹಾಸವಿದೆ. ಹರಪ್ಪ ಸಂಸ್ಕೃತಿಯ ನೆಲೆಗಳಾದ ಹರಪ್ಪ, ಮಹೆಂಜೋದಾರೋ ಮತ್ತು ಕಾಲಿಬಂಗನ್ ಇತ್ಯಾದಿ ನೆಲೆಗಳಲ್ಲಿ ಅನೇಕ ಮುದ್ರೆಗಳು ದೊರೆತಿದ್ದು, ಅವುಗಳ ಮೇಲೆ ಪುರುಷ ದೇವತೆಗಳ ಚಿತ್ರಗಳಿವೆ. ಇವುಗಳಲ್ಲಿ ಯೋಗಮುದ್ರೆಯಲ್ಲಿ ಆಸೀನವಾಗಿರುವ ಮೂರು ಮುಖದ ಪಶುಪತಿ ಶಿವನಚಿತ್ರ ಪ್ರಮುಖವಾದುದು. ಬಹುಶಃ ಈ ಚಿತ್ರದ ಆಧಾರದಿಂದ ಅಂದರೆ ಕ್ರಿ.ಪೂ. ೨೫೦೦ಕ್ಕೂ ಪೂರ್ವದಲ್ಲೇ ಶಿವಾರಾಧನೆ ಪ್ರಚಲಿತದಲ್ಲಿತ್ತೆಂದು ಹೇಳಬಹುದು. ನಂತರದ ವೈದಿಕ ಸಾಹಿತ್ಯದಲ್ಲಿ ಶಿವನ ಹಿನ್ನೆಲೆಯಲ್ಲಿ ರುದ್ರನನ್ನು ಕಾಣಬಹುದು. ಋಗ್ವೇದದ ಆರಂಭದ ಮಂಡಲಗಳಲ್ಲಿಯೇ ರುದ್ರನನ್ನು ಕುರಿತ ಉಲ್ಲೇಖಗಳಿವೆ. ಪ್ರಕೃತಿಯ ವಿನಾಶಕ, ಭಯಾನಕ ಮೂರ್ತಿರೂಪ, ರುದ್ರ ಎನ್ನುವ ಕಲ್ಪನೆ ಇಲ್ಲಿದ್ದಂತೆ ತೋರುತ್ತದೆ. ಹೀಗೆ ವೈದಿಕ ಕಾಲದಿಂದಲೂ ಬೆಳೆದುಬಂದ ರುದ್ರ-ಶಿವನ ಪರಿಕಲ್ಪನೆ ಕ್ರಮೇಣ ಜನಸಾಮಾನ್ಯರ ಧಾರ್ಮಿಕ ಭಾವನೆಗಳು ಮತ್ತು ಆರಾಧನೆಗಳೊಡನೆ ಸೇರಿ ಶೈವ ಧರ್ಮ ಬೆಳವಣಿಗೆಗೆ ಕಾರಣವಾಯಿತು. ಶಿವನ ಇಪ್ಪತ್ನಾಲ್ಕನೇ ಅವತಾರವೆಂದು ಹೇಳಲಾದ ಲಕುಲೀಶನಿಂದ ಪಾಶುಪತ ಮತ ಪ್ರಾರಂಭವಾಯಿತು. ಆತನ ನಾಲ್ಕು ಜನ ಶಿಷ್ಯರಾದ ಕುಶಿಕ, ಗಾರ್ಗ, ಮೈತ್ರೇಯ ಮತ್ತು ಕೌರುಶ ಇವರಿಂದ ನಾಲ್ಕು ಪ್ರತ್ಯೇಕ ಪಾಶುಪತಗಳುಂಟಾದವು.[೧೫] ಪಾಶುಪತದಿಂದ ಲಕುಲೀಶ, ಪಾಶುಪತ, ಕಾಳಾಮುಖ ಮತ್ತು ಕಾಪಾಲಿಕ ಶೈವ ಪಂಥಗಳು ಬೆಳೆದವು.

ಗಣಪತಿ

ಅಗ್ರ ಪೂಜಾ ಭಾಜನನಾದ ವಿನಾಯಕನ ಇತಿಹಾಸ ಅಪೂರ್ವವಾದದು. ಪುರಾಣ, ಆಗಮ, ಬ್ರಾಹ್ಮಣಕಗಳು, ಸೂತ್ರ, ಧರ್ಮಶಾಸ್ತ್ರಗಳು ಈ ಮಹಾಪುರುಷನ ಮಹಿಮೆ ಹಾಡುತ್ತವೆ. ಗಣಪತಿಯ ಶಿಲ್ಪಗಳು ಕುಳಿತ ಅಥವಾ ನಿಂತ ಭಂಗಿಯಲ್ಲಿರುತ್ತವೆ. ಕುಳಿತ ಭಂಗಿಯಲ್ಲಿ ಪದ್ಮಾಸನದಲ್ಲಿರುತ್ತವೆ, ಕೆಲವೊಮ್ಮೆ ಇಲಿಯ ಮೇಲೆ ಕುಳಿತಂತೆಯೂ, ಅಪರೂಪವಾಗಿ ಸಿಂಹಾರೂಢವಾಗಿರುವಂತೆಯೂ ಚಿತ್ರಿಸಲಾಗಿರುತ್ತದೆ. ನಿಂತ ಭಂಗಿಯಲ್ಲಿದ್ದರೆ ದ್ವಿಭಂಗಿ ಅಥವಾ ತ್ರಿಭಂಗಿಯಲ್ಲಿರುತ್ತದೆ. ಹೆಚ್ಚಾಗಿ ದ್ವಿಭಂಗಿಯಲ್ಲಿಯೇ ಇರುತ್ತವೆ. ಆಸೀನಭಂಗಿಯಲ್ಲಿ ಆತ ಎಡಗಾಲನ್ನು ವೀರರ ಮೇಲೆ ಮಲಗಿಸಿ, ಬಲಗಾಲನ್ನು ಮಡಚಿ ಮುಂದೆ ಮಾಡಿ

ಸುಖಾಸನದಲ್ಲಿರುತ್ತಾನೆ. ಒಟ್ಟಾರೆ, ಕಾಲುಗಳೆರಡು ಒಂದೇ ರೀತಿಯಲ್ಲಿರುತ್ತವೆ. ಗಣಪತಿಯು ಗಜಮುಖ ಹೊಂದಿರುತ್ತಾನೆ. ಸೊಂಡಿಲು ಎಡಗಡೆ ಅಥವಾ ಬಲಗಡೆ ತಿರುಗಿರುತ್ತದೆ. ಸಾಮಾನ್ಯವಾಗಿ ಎಡಗಡೆ ಇರುತ್ತದೆ. ಒಂದು ವೇಳೆ ಬಲಗಡೆ ತಿರುಗಿದ್ದರೆ ಅದನ್ನು ಬಲಮುರಿ ಗಣೇಶ ಎಂದು ಕರೆಯಲಾಗುತ್ತದೆ. ಆತನು ನಾಲ್ಕು, ಆರು, ಎಂಟು ಹತ್ತು, ಕೆಲವೊಮ್ಮೆ ಹದಿನಾರು ಕೈಗಳನ್ನು ಹೊಂದಿರುತ್ತಾನೆ. ಕೈಗಳಲ್ಲಿ ದಂತ, ಪರಶು, ಪಾಶ, ಮೋದಕಗಳನ್ನು ಹಿಡಿದಿರುತ್ತಾನೆ.

ಪ್ರಾಚೀನ ಗಣಪತಿ ನಿರಾಭರಣನಾಗಿರುತ್ತಿದ್ದ. ಬರಬರುತ್ತಾ ಆಭರಣಗಳಿಂದ ಅಲಂಕರಿಸಲಾಯಿತು. ಗಣಪತಿಯ ಶಿಲ್ಪಗಳು ಈ ಪ್ರದೇಶದಲ್ಲಿ ಸುಮಾರು ೭-೮, ೧೨ನೆಯ ಶತಮಾನದ ಕಾಲಾವಧಿಯಲ್ಲಿ ನಿರ್ಮಾಣಗೊಂಡವುಗಳಾಗಿವೆ.

ವೇಣುಗೋಪಾಲ ದೇವಸ್ಥಾನದ ಎಡಗಡೆ ಈ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಸುಮಾರು ಮೂರು ಅಡಿ ಎತ್ತರವಿದ್ದು, ಬಳಪದ ಶಿಲೆಯಲ್ಲಿದೆ. ಕೈಗಳಲ್ಲಿ ಕ್ರಮವಾಗಿ ಅಭಯ, ಭಗ್ನ, ತ್ರಿಶೂಲ, ಫಲಗಳನ್ನು ಹಿಡಿದಿರುವ ಸೊಂಟದಲ್ಲಿ ನಾಗಬಂಧವಿದೆ. ಈ ಮೂರ್ತಿಗೆ ನಿತ್ಯ ಪೂಜೆ ನಡೆಯುತ್ತದೆ. ಈ ರೀತಿಯ ಶಿಲ್ಪವು ನಮಗೆ ದೇವಸ್ಥಾನದ ಹೊರಗೆ ದೊರೆಯುತ್ತದೆ. ಈ ಶಿಲ್ಪದ ಕಾಲಮಾನ ೧೪-೧೫ನೆಯ ಶತಮಾನ.

ವೇಣುಗೋಪಾಲಸ್ವಾಮಿ ದೇವಾಲಯದ ಒಳಗಿರುವ ಶಿಲ್ಪವು ಒಂದುವರೆ ಅಡಿ ಎತ್ತರವಾಗಿದೆ. ತಲೆಯಲ್ಲಿ ಕೀರಿಟವಿದ್ದು, ಹೊಟ್ಟೆಗೆ ನಾಗಬಂಧವನ್ನು ಹೊಂದಿದೆ. ನಾಲ್ಕು ಕೈಗಳನ್ನು ಹೊಂದಿದ್ದು ಕ್ರಮವಾಗಿ ವರದ, ಚಕ್ರ, ಶಂಖ, ಫಲಗಳನ್ನು ಹಿಡಿದಿರುವನು. ಇದು ಕಪ್ಪು ಶಿಲೆಯಲ್ಲಿದ್ದು ೯-೧೦ನೇಯ ಶತಮಾನಕ್ಕೆ ಸೇರಿದ್ದಾಗಿದೆ.

ವೀರಭದ್ರ ದೇವಸ್ಥಾನದ ಕಂಬದಲ್ಲಿರುವ ಗಣಪತಿ ಶಿಲ್ಪವು ಆಸೀನಭಂಗಿಯಲ್ಲಿದ್ದು, ಕೈಗಳಲ್ಲಿ ಕ್ರಮವಾಗಿ ದಂತ, ಪರುಶು, ಪದ್ಮ, ಮೋದಕಗಳಿನ್ನಿಡಿದಿದ್ದಾನೆ. ಕಿರೀಟಧಾರಿಯಾಗಿರುವ ಈತ ಕಟೀವಸ್ತ್ರ, ಕೇಯೂರ, ಯಜ್ಞೋಪವಿತ, ಕರ್ಣಕುಂಡಲಗಳಿಂದ ಅಲಂಕೃತಗೊಂಡಿದ್ದಾನೆ. ಗಣಪತಿಯ ಕಾಲಿನ ಹತ್ತಿರ ಇಲಿಯನ್ನು ಕಂಡರಿಸಲಾಗಿದೆ.

ಕೊತ್ತಲ ಆಂಜನೇಯಸ್ವಾಮಿ ದೇವಸ್ಥಾನದ ಮುಂದಿರುವ ಕಪ್ಪು ಶಿಲೆಯ ಗಣಪತಿ ಶಿಲ್ಪವು ಸುಮಾರು ಐದು ಅಡಿ ಎತ್ತರವಾಗಿ ಪಶ್ಚಿಮಾಭಿಮುಖವಾಗಿದೆ. ಕೈಗಳಲ್ಲಿ ಕ್ರಮವಾಗಿ ದಂತ, ಪರುಶು, ಪದ್ಮ ಮೋದಕಗಳನ್ನಿಡಿದಿದ್ದಾನೆ. ಕಿರೀಟ ಮುಕುಟಧಾರಿಯಾಗಿರುವ ಇದು ಎಡಮುರಿ ಗಣಪತಿಯಾಗಿದ್ದು, ಶಿಲ್ಪದ ಸುತ್ತಲೂ ಅಲಂಕಾರಯುತ ಪ್ರಭಾವಳಿಯನ್ನು ಹೊಂದಿದೆ. ಪೀಠದ ಮೇಲೆ ಆಸೀನವಾಗಿರುವಂತೆ ಕಂಡರಿಸಲಾಗಿದ್ದು, ಪೀಠದ ಮಧ್ಯ ಭಾಗದಲ್ಲಿ ಅವನ ವಾಹನವಾದ ಇಲಿಯನ್ನು ಚಿತ್ರಸಲಾಗಿದೆ. ಶಿಲ್ಪದ ಕಾಲಮಾನ ಸುಮಾರು ೧೮-೧೯ನೆಯ ಶತಮಾನ.

ಶಂಕರಲಿಂಗ ದೇವಸ್ಥಾನದ ಮುಖಮಂಟಪದಲ್ಲಿರುವ ಗಣಪತಿ ಶಿಲ್ಪವು ಕಪ್ಪು ಶಿಲೆಯಲ್ಲಿದ್ದು, ಒಂದುವರೆ ಅಡಿ ಎತ್ತರವಾಗಿದೆ. ಈ ಶಿಲ್ಪ ಸ್ಪಷ್ಟವಾಗಿ ಕೆತ್ತಿರುವುದಿಲ್ಲ. ಸೊಂಡಿಲು ಮಾತ್ರ ಇದೆ. ಈ ಶಿಲ್ಪವನ್ನು ಸೂಕ್ಷ್ಮವಾಗಿ ಗಮನಿಸಿದರೆ. ಈ ಪ್ರದೇಶದಲ್ಲಿ ಇದೇ ಪ್ರಾಚೀನ ಗಣಪತಿ ಶಿಲ್ಪ ಇರಬಹುದೇನೋ ಎನಿಸುತ್ತದೆ.

ಕೋಡಿ ಬಸವೇಶ್ವರ ದೇವಾಲಯದ ಮುಂದಿರುವ ಗಣಪತಿ ಶಿಲ್ಪವು ಒಂದು ಅಡಿ ಎತ್ತರವಾಗಿದ್ದು ಬಳಪದ ಶಿಲೆಯಲ್ಲಿದೆ. ಈ ಶಿಲ್ಪವನ್ನು ಇತ್ತೀಚಿಗೆ ತಂದು ದೇವಸ್ಥಾನದ ಮುಂದಿರಿಸಿದ್ದಾರೆ. ಶಿಲ್ಪವನ್ನು ಸ್ಪಷ್ಟವಾಗಿ ಕಂಡರಿಸಿರುವುದಿಲ್ಲ. ಶಿಲ್ಪದ ಕಾಲಮಾನ ೧೯-೨೦ನೆಯ ಶತಮಾನ.

ಬಯಲು ಗಣಪತಿ ಶಿಲ್ಪವನ್ನು ಮರಳು ಶಿಲೆಯಲ್ಲಿ ಕೆತ್ತಲಾಗಿದ್ದು, ಸುಮಾರು ಒಂಬತ್ತು ಅಡಿ ಎತ್ತರವಾಗಿದೆ. ಕೈಗಳಲ್ಲಿ ಕ್ರಮವಾಗಿ ದಂತ, ಪರಶು, ಪದ್ಮ, ಮೋದಕಗಳನ್ನಿಡಿದಿದ್ದಾನೆ. ಕಿರೀಟಧಾರಿಯಾಗಿರುವ ಈತ, ಕೊರಳಹಾರ, ತೋಳಬಂಧಿ, ಕಾಲುಕಡಗಗಳನ್ನು ಧರಿಸಿದ್ದಾನೆ. ಹೊಟ್ಟೆಗೆ ನಾಗಾವು ಸುತ್ತಿಕೊಂಡಿದೆ. ಪೀಠದಲ್ಲಿ ಈ ಗಣಪತಿಯನ್ನು ಪ್ರತಿಷ್ಠಾಪಿಸಿದವನು ಗುಲ್ಲೆಪ್ಪನಾಯಕ ಎಂದು ಶಾಸನದಲ್ಲಿ ಬರೆಯಲಾಗಿದೆ. ಪೀಠದ ಕೆಳಗೆ ವಾಹನವಾದ ಇಲಿಯನ್ನು ಕಂಡರಿಸಲಾಗಿದೆ. ಶಿಲ್ಪದ ಎಡ ಭಾಗದಲ್ಲಿ ಶಿವಲಿಂಗ ರೀತಿಯ ಚಿತ್ರಾವಳಿಯಿದೆ. ಗಣಪತಿಯ ಹಿಂದೆ ಜಡೆಯ ರೀತಿಯಲ್ಲಿ ಕೆತ್ತಲಾಗಿದೆ. ಹಾಗಾಗಿ ಇದಕ್ಕೆ ಜಡೆ ಗಣಪತಿ ಎನ್ನುವರು. ಬಯಲಲ್ಲಿ ಇರುವುದರಿಂದ ಬಯಲು ಗಣಪ ಎಂದು ಕರೆಯುತ್ತಾರೆ. ಇದು ಚಿತ್ರದುರ್ಗ ಜಿಲ್ಲೆಯಲ್ಲಿ ಅತೀ ದೊಡ್ಡ ಗಣಪತಿ ಎಂದು ಹೇಳಬಹುದು. ಇದನ್ನು ನೋಡಿದರೆ ಹಂಪಿಯಲ್ಲಿರುವ ಕಡಲೆಕಾಳು ಗಣಪತಿಯು ನೆನಪಿಗೆ ಬರುತ್ತದೆ. ಶಿಲ್ಪದ ಕಾಲಮಾನ ಕ್ರಿ.ಶ.ಸುಮಾರು ೧೫-೧೬ನೆಯ ಶತಮಾನ.

ಲಿಂಗಮುದ್ರೆ ಕಲ್ಲು

ಬಸವೇಶ್ವರ ಗುಡಿಯ ಮುಂಭಾಗದಲ್ಲಿ ಸುಮಾರು ಎರಡು ಅಡಿ ಎತ್ತರದ ಮರಳು ಶಿಲೆಯ ಲಿಂಗಮುದ್ರೆಯ ಕಲ್ಲು ಇದೆ. ಇದು ಪಾಳೆಯಗಾರರ ಕಾಲದ ಲಿಂಗವಿದ್ದು ಮೇಲೆ ಸೂರ್ಯ ಚಂದ್ರರರನ್ನು ಕಂಡರಿಸಲಾಗಿದೆ. ಕಪ್ಪುಶಿಲೆಯ ಶಿವಲಿಂಗವಿದೆ. ಪೀಠದ ಮೇಲೆ ಇರುವ ಲಿಂಗವು ಪಾಣಿವಟ್ಟಲು, ಬ್ರಹ್ಮ ಭಾಗಗಳನ್ನು ಹೊಂದಿದೆ. ಇದು ೧೦-೧೧ನೆಯ ಶತಮಾನಕ್ಕೆ ಸೇರಿರಬಹುದು. ಅದರ ಎದುರಿಗೆ ನಂದಿಯಿದೆ. ನಂದಿಗೆ ಘಂಟಾಸರ ಹಾಕಿ ಭುಜಕ್ಕೆ ವಸ್ತ್ರ ಹಾಕಲಾಗಿದೆ.

ವೀರಭದ್ರ

ವೀರಭದ್ರ ಇದು ಶಿವನ ಒಂದು ರೂಪವಾಗಿದೆ. ದಕ್ಷನು ಯಜ್ಞವನ್ನು ಮಾಡಲು ನಿರ್ಧರಿಸಿ, ತನ್ನ ಮಗಳು ದಾಕ್ಷಾಯಿಣಿ ಮತ್ತು ಅಳಿಯ ಶಿವನನ್ನು ಮಾತ್ರ ಕರೆಯದೆ ಉಳಿದ ಎಲ್ಲರನ್ನು ಕರೆದನು. ಆದರೂ ದಾಕ್ಷಾಯಿಣಿ ಯಜ್ಞಮಂಟಪಕ್ಕೆ ಹೋದಳು. ಅಲ್ಲಿ

ಅವಳ ತಂದೆ ಅವಳನ್ನು ಅಪಮಾನಗೊಳಿಸಿದ್ದಕ್ಕಾಗಿ ಆಕೆ ಯಜ್ಞ ಕುಂಡದಲ್ಲಿ ಬಿದ್ದು ಪ್ರಾಣ ಬಿಟ್ಟಳು. ಇದರಿಂದ ಸಿಟ್ಟಿಗೆದ್ದ ಶಿವನು ತನ್ನ ಜಟೆಯನ್ನು ನೆಲಕ್ಕಪ್ಪಳಿಸಲು ವೀರಭದ್ರ ಹುಟ್ಟಿಕೊಂಡನು. ದಕ್ಷನ ತಲೆಯನ್ನು ಕಡಿದು ಅವನ ಮಾನವನ್ನು ಧ್ವಂಸ ಮಾಡಿದನೆಂದು ಕೂರ್ಮಪುರಾಣ[೧೬] ತಿಳಿಸುತ್ತದೆ. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ವೀರಭದ್ರನ ಶಿಲ್ಪಗಳು ಸ್ಥಾನಿಕ ಭಂಗಿಯಲ್ಲಿದ್ದು ಸುಮಾರು ಕ್ರಿ ಶ ೧೫–೧೬ನೆಯ ಶತಮಾನಕ್ಕೆ ಸೇರಿದ ಶಿಲ್ಪಗಳಾಗಿವೆ.

ವೀರಭದ್ರ ದೇವಸ್ಥಾನದ ಗರ್ಭಗೃಹದಲ್ಲಿರುವ ಶಿಲ್ಪವು ಕಪ್ಪುಶಿಲೆಯಲ್ಲಿದ್ದು ತ್ರಿಭಂಗಿಯಲ್ಲಿ ನಿಂತಿದ್ದಾನೆ. ಸುಮಾರು ನಾಲ್ಕು ಅಡಿ ಎತ್ತರದ ಶಿಲ್ಪವು ಚತುರ್ಭುಜಗಳನ್ನು ಹೊಂದಿದ್ದು ತನ್ನ ಕೈಗಳಲ್ಲಿ ಕ್ರಮವಾಗಿ ಕತ್ತಿ, ಬಿಲ್ಲು ಬಾಣ, ಗುರಾಣಿಗಳನ್ನು ಹಿಡಿದಿದ್ದಾನೆ. ಕೀರಿಟ, ಕಂಠಹಾರ, ಪತ್ರಕುಂಡಲ, ಉದರಬಂಧ, ಕೇಯೂರ, ಕಾಲುಕಡಗ ಹೊಂದಿದ್ದಾನೆ. ಸೊಂಟದಲ್ಲಿ ಕಠಾರಿ ಇದೆ. ಶಿಲ್ಪದ ಇಕ್ಕೆಲದಲ್ಲಿ ಕುಳಿತ ಶಿಲ್ಪವಿದ್ದು ಹಾಗೂ ಕೈಮುಗಿದು ನಿಂತಿರುವ ದಕ್ಷ, ಸ್ತ್ರೀ, ಶಿವಲಿಂಗ, ನಂದಿಯ ಶಿಲ್ಪಗಳಿವೆ. ಅಲಂಕಾರಯುತ ಮಕರ ತೋರಣವಿದೆ. ಕೀರ್ತಿಮುಖ ಸಿಂಹವಿದೆ. ಕಂಚಿನಿಂದ ಮಾಡಿದ ಪ್ರಭಾವಳಿಯನ್ನು ಹಾಕಲಾಗಿದೆ. ಶಿಲ್ಪದ ಕಾಲಮಾನ ಸುಮಾರು ಕ್ರಿ.ಶ.೧೨–೧೩ನೆಯ ಶತಮಾನದ್ದು.

ವೀರಭದ್ರ ದೇವಾಲಯದ ಗರ್ಭಗೃಹದಲ್ಲಿರುವ ಶಿಲ್ಪವು ಕಪ್ಪು ಶಿಲೆಯಲ್ಲಿದ್ದು, ತ್ರಿಭಂಗಿಯಲ್ಲಿ ನಿಂತಿದ್ದಾನೆ. ಕೈಗಳಲ್ಲಿ ಕ್ರಮವಾಗಿ ಕತ್ತಿ, ಬಿಲ್ಲು, ಬಾಣ ಮತ್ತು ಗುರಾಣಿಗಳನ್ನು ಹಿಡಿದಿರುವನು. ತಲೆಗೆ ಕೀರಿಟ, ಕೊರಳಹಾರ, ಪತ್ರಕುಂಡಲ, ಉದರಬಂಧ, ಕೇಯೂರ, ಕೈಬಳೆಗಳನ್ನು ಧರಿಸಿರುವನು. ಕಾಲುಗಳಲ್ಲಿ ಕಾಲುಕಡಗ ಧರಿಸಿದ್ದಾನೆ. ಕೈಗಳಿಗೆ ನಾಗಬಂಧವಿದ್ದು ಸೊಂಟದಲ್ಲಿ ಕಿರುಗತ್ತಿ ಇದೆ. ಈತನ ಬಲ ಬದಿಯಲ್ಲಿ ಕೈಮುಗಿದು ನಿಂತ ದಕ್ಷನ ಕಿರುಶಿಲ್ಪವಿದೆ. ಶಿಲ್ಪದ ಸುತ್ತಲೂ ಸದಾ ಪ್ರಭಾವಳಿಯಿದ್ದು ಇದರ ಕಾಲಮಾನ ಕ್ರಿ.ಶ. ಸುಮಾರು ೧೨ನೆಯ ಶತಮಾನ.

ಭೈರವ

ಭೂತ ಪ್ರೇತಗಳ ಉಚ್ಛಾಟನೆಗೆಂದು ಭೈರವನ ಪೂಜೆ ಪ್ರಸಿದ್ಧವಾಗಿದೆ. ಅವನದು ಅಪದುದ್ಧರಣ ಮಂತ್ರ, ಕೈಯಲ್ಲಿ ಕಪಾಲವನ್ನು ಹಿಡಿದು ದಂಡ, ಪಾಣೆ, ಹಾವನ್ನು ಜನಿವಾರವನ್ನಾಗಿ ಧರಿಸಿ ಯೋಗವನ್ನು ನಾಶಪಡಿಸುವವನಾಗಿದ್ದಾನೆ.

ಭೈರವನಲ್ಲಿ ಅನೇಕ ಪ್ರಕಾರಗಳಿವೆ. ಅವುಗಳಲ್ಲಿ ವಟು ಭೈರವ, ಸ್ವರ್ಣಾಕರ್ಷಣ ಭೈರವ ಮುಖ್ಯವಾದವು. ಭೈರವನು ಅಷ್ಟಭುಜಗಳನ್ನು ಹೊಂದಿರುತ್ತಾನೆ. ಕೈಗಳಲ್ಲಿ ಖಟ್ವಾಂಗ, ಪಾಶ, ಶೂಲ, ಡಮರು, ಕಪಾಲ ಮತ್ತು ಹಾವುಗಳನ್ನು ಹಿಡಿದಿರುತ್ತಾನೆ. ಈತನ ಬದಿಯಲ್ಲಿ ನಾಯಿ ಇರುತ್ತದೆ. ಈತ ಮೂರು ಕಣ್ಣು, ಕಪ್ಪುದೇಹ, ಕೂದಲುಗಳನ್ನು ಹೊಂದಿರುತ್ತಾನೆ.

ಈತನ ಲಾಂಛನ ಚೇಳು, ಇದನ್ನು ರೂಪ ಮಂಡನೆ ಉಲ್ಲೇಖಿಸುತ್ತದೆ.[೧೭] ಹೊಳಲ್ಕೆರೆ ಪಟ್ಟಣದಲ್ಲಿ ವಿಭಿನ್ನ ರೀತಿಯ ಶಿಲ್ಪಗಳಿವೆ. ಅವುಗಳ ಮೂರ್ತಿ ಲಕ್ಷಣಗಳ ವಿವರಗಳನ್ನು ಇಲ್ಲಿ ವಿವರಿಸಲಾಗಿದೆ.

ಕಾಲಭೈರವನ ದೇವಾಸ್ಥಾನದ ಗರ್ಭಗೃಹದಲ್ಲಿರುವ ಶಿಲ್ಪವು ಕಪ್ಪು ಶಿಲೆಯಲ್ಲಿದ್ದು ಸುಮಾರು ನಾಲ್ಕು ಅಡಿ ಎತ್ತರವಾಗಿ ತ್ರಿಭಂಗಿಯಲ್ಲಿ ನಗ್ನವಾಗಿ ಸ್ಥಾನಿಕವಾಗಿದೆ. ಚತುರ್ಭುಜಧಾರಿಯಾದ ಈತ ಕೈಗಳಲ್ಲಿ ಕ್ರಮವಾಗಿ ಖಡ್ಗ, ಪಾಶ, ಶೂಲ, ಕಪಾಲಗಳನ್ನು ಹಿಡಿದಿರುವನು, ಕೀರಿಟಧಾರಿಯಾದ ಶಿಲ್ಪವು ಕೊರಳಹಾರ, ಯಜ್ಞೋಪವಿತ, ಕಟೀಸೂತ್ರ ಧರಿಸಿದ್ದಾನೆ. ಕಾಲುಗಳಿಗೆ ಕಾಲುಕಡಗ ಧರಿಸಿ ಪಾದರಕ್ಷೆ ಹೊಂದಿದ್ದಾನೆ. ಮುಖದಲ್ಲಿ ಮೀಸೆಯಿದೆ. ಶಿಲ್ಪದ ಇಕ್ಕೆಲಗಳಲ್ಲಿ ಎರಡು ಬದಿಯಲ್ಲಿ ಚಿಕ್ಕ ಮೂರ್ತಿಗಳಿವೆ. ಅದರ ಮುಂದೆ ನಂದಿ ಶಿಲ್ಪವಿದೆ. ಅಲಂಕಾರಯುತ ಕಂಚಿನ ಪ್ರಭಾವಳಿಯಿದ್ದು, ದ್ವಾರಪಾಲಕರ ಶಿಲ್ಪಗಳು, ಪ್ರಭಾವಳಿಯ ಮೇಲೆ ಕೀರ್ತಿಮುಖ ಸಿಂಹವಿದೆ. ಶಿಲ್ಪದ ಕೆಳಗಿನ ಪಟ್ಟಿಕೆಯಲ್ಲಿ ಸಂಗೀತ ವಾದ್ಯ ನುಡಿಸುತಿರುವ, ನರ್ತಿಸುತ್ತಿರುವ ಶಿಲ್ಪಗಳಿವೆ. ಹೊಟ್ಟೆಯ ಭಾಗದಲ್ಲಿ ಶಿಲ್ಪವು ಸ್ವಲ್ಪ ಭಗ್ನವಾಗಿದೆ. ಆದುದರಿಂದ ವಾಮಾಚಾರ ನಡೆದಿರಬಹುದು ಎನ್ನುವ ಅನುಮಾನ ಹುಟ್ಟಿಸುತ್ತದೆ. ಈ ಶಿಲ್ಪದ ಕಾಲಮಾನ ಕ್ರಿ.ಶ.ಸುಮಾರು ೧೨–೧೩ನೆಯ ಶತಮಾನ ಈ ರೀತಿಯ ಶಿಲ್ಪವು ನೀರ್ಗುಂದದ ಸಿದ್ಧೇಶ್ವರ ದೇವಾಲಯದ ಮುಂಭಾಗದಲ್ಲಿದೆ.

ಇದೇ ದೇವಾಲಯದ ಅಂತರಾಳದಲ್ಲಿರುವ ಮತ್ತೊಂದು ಶಿಲ್ಪವು ಕಪ್ಪು ಶಿಲೆಯಲ್ಲಿದ್ದು, ಸುಮಾರು ಮೂರು ಅಡಿ ಎತ್ತರವಾಗಿದೆ. ತ್ರಿಭಂಗಿಯಲ್ಲಿ ಸ್ಥಾನಿಕವಾಗಿದೆ. ಕೈಗಳಲ್ಲಿ ಕ್ರಮವಾಗಿ ಖಡ್ಗ, ತ್ರಿಶೂಲ, ಡಮರು, ಕಪಾಲಗಳನ್ನು ಹಿಡಿದಿರುವನು. ಕೀರಿಟ ಮುಕುಟವಿದ್ದು, ಕಿವಿಯಲ್ಲಿ ಪತ್ರಕುಂಡಲ, ಕಂಠಹಾರ, ಕೊರಳಹಾರ, ಯಜ್ಞೋಪವೀತ, ತೋಳಬಂದಿ, ಕೈಕಡಗ, ಕಾಲುಕಡಗಗಳನ್ನು ಧರಿಸಿದ್ದಾನೆ. ಕಾಲುಗಳಲ್ಲಿ ನಾಗಬಂಧವಿದೆ. ಆಭರಣಗಳಿಂದ ಅಲಂಕೃತಗೊಂಡಿದ್ದಾನೆ. ಶಿಲ್ಪದ ಇಕ್ಕೆಲದಲ್ಲಿ ಭೃಂಗಿಯಿದೆ. ಶಿಲ್ಪದ ಸುತ್ತಲೂ ಅಲಂಕಾರಯುತ ಪ್ರಭಾವಳಿಯಿದ್ದು, ಅದರ ಮೇಲೆ ಕೀರ್ತಿಮುಖ ಸಿಂಹವಿದೆ. ಮುಖದಲ್ಲಿ ಮೀಸೆಯಿದೆ. ಈ ರೀತಿಯ ಶಿಲ್ಪವು ಸುತ್ತಲಿನ ಕಲ್ಲೇದೇವಪುರದ ಕಲ್ಲೇಶ್ವರ, ಚಿತ್ರದುರ್ಗದ ಹಿಂಡಿಬೇಶ್ವರ, ನುಂಕೇಮಲೆಯ ಭೈರವೇಶ್ವರ ದೇವಾಲಯದಲ್ಲಿ ಕಾಣಿಸುತ್ತವೆ. ಶಿಲ್ಪದ ಕಾಲಮಾನ ಕ್ರಿ.ಶ. ಸುಮಾರು ೧೩–೧೪ನೆಯ ಶತಮಾನದ್ದಾಗಿದೆ.

ಶಂಕರಲಿಂಗ ದೇವಾಲಯದ ಮುಖಮಂಟಪದ ಗೂಡಿನಲ್ಲಿರುವ ಶಿಲ್ಪವು ಕಪ್ಪು ಶಿಲೆಯಲ್ಲಿದ್ದು, ತ್ರಿಭಂಗಿಯಲ್ಲಿ ಪೀಠದ ಮೇಲೆ ಆಸೀನವಾಗಿದೆ. ಎರಡುವರೆ ಅಡಿ ಎತ್ತರದಲ್ಲಿರುವ ಇದು ಚತುರ್ಭುಜಧಾರಿಯಾಗಿದ್ದು ಕೈಗಳಲ್ಲಿ ಕ್ರಮವಾಗಿ ಖಡ್ಗ, ಶೂಲ, ಢಮರು, ಕಪಾಲಗಳನ್ನು ಹಿಡಿದಿರುವನು ಕೀರಿಟಧಾರಿಯಾಗಿ ಕಿವಿಯಲ್ಲಿ ಪತ್ರಕುಂಡಲ, ಕಂಠಹಾರ, ಮಣಿಸರ, ಕೊರಳಹಾರ,

ಯಜ್ಞೋಪವೀತಗಳನ್ನು ಧರಿಸಿರುವನು. ಭುಜಬಂದಿ, ತೋಳಬಂದಿ, ಕೈಕಡಗ, ಕಾಲಕಡಗಗಳನ್ನು ಧರಿಸಿ ನಿರ್ವಸ್ತ್ರಧಾರಿಯಾಗಿದ್ದಾನೆ. ಶಿಲ್ಪದ ಸುತ್ತಲೂ ಹೂಬಳ್ಳಿಯ ಅಲಂಕಾರಯುತ ಪ್ರಭಾವಳಿಯಿದೆ. ಅದರ ತುದಿಯಲ್ಲಿ ಕೀರ್ತಿಮುಖ ಸಿಂಹವಿದೆ. ಸೌಮ್ಯ ಮುಖಧಾರಿಯಾಗಿರುವ ಶಿಲ್ಪ ಅಲಂಕರಣೆಯಿಂದ ಗಮನ ಸೆಳೆಯುತ್ತದೆ. ಶಿಲ್ಪದ ಕಾಲಮಾನ ಕ್ರಿ.ಶ.೧೩-೧೪ನೆಯ ಶತಮಾನ. ಕುಳಿತ ಭೈರವನ ಶಿಲ್ಪಗಳು ಅಪರೂಪವಾಗಿದ್ದು ಈ ರೀತಿಯ ಶಿಲ್ಪವು ಧಾರವಾಡ ಪುರಾತತ್ವ ಮತ್ತು ಪ್ರಾಚ್ಯವಸ್ತು ಸಂಗ್ರಾಹಾಲಯದಲ್ಲಿದೆ.

ಶಿವಲಿಂಗಗಳು

ಶಿವನನ್ನು ಮೂರ್ತಿಯ ಲಿಂಗದ ಆಕೃತಿಯಲ್ಲಿ ಅರಾಧಿಸುತ್ತಾರೆ. ಲಿಂಗದಲ್ಲಿಯೇ ಶಿವನ ಮುಖವನ್ನು ಕಡೆದ ಮುಖಗಗಳು ಶಿವನ ಮನುಷ್ಯನಾಕಾರವನ್ನು ಪೂರ್ಣವಾಗಿ ಕಡೆದು ಅಳವಡಿಸಿದ ಲಿಂಗ ಮೂರ್ತಿಗಳು ಇವೆ. ಶಿವಪೂಜೆ ಎಂದರೆ ಲಿಂಗ ಪೂಜೆ. ಇಲ್ಲಿ ಶಿವನಿಗೆ ಮನುಷ್ಯನಾಕಾರವಿದ್ದು ಸೊಂಟದ ಕೆಳಗೆ ಎರಡೂ ಕಾಲುಗಳು ಕಲೆತು ಒಂದೇ ರೀತಿಯಲ್ಲಿರುತ್ತವೆ. ಇದು ಏಕಪಾದ ಮೂರ್ತಿ.[೧೮]

ಪ್ರಾಚೀನ ಶಿವಲಿಂಗಗಳಲ್ಲಿ ಕೇವಲ ನಾಳಗಳಷ್ಟೆ ಕಂಡು ಬರುತ್ತವೆ. ಅವುಗಳಿಗೆ ಯಾವುದೇ ಪೀಠ, ಪಾಣಿವಟ್ಟಲು ಇರುವುದಿಲ್ಲ. ಕಾಲಾನಂತರ ಲಿಂಗಗಳಿಗೆ ಪೀಠ, ಪಾಣಿವಟ್ಟಲು, ಮತ್ತು ಜಲಾಹರಿಗಳನ್ನು ಸೇರಿಸಲು ಪ್ರಾರಂಭವಾಯಿತು.

ಶಿವಲಿಂಗಗಳು ಕಂಬಗಳಂತೆಯೇ ಇದ್ದು ಅವುಗಳಲ್ಲಿ ಬ್ರಹ್ಮ, ವಿಷ್ಣು ಮತ್ತು ರುದ್ರ ಭಾಗಗಳಿರುತ್ತವೆ. ರುದ್ರಭಾಗವೇ ಪೂಜಾ ಭಾಗವಾಗಿದೆ. ಈ ಪೂಜಾ ಭಾಗದಲ್ಲಿ ಬ್ರಹ್ಮಸೂತ್ರವನ್ನು ಅಳವಡಿಸಲಾಗಿರುತ್ತದೆ. ಹೊಳಲ್ಕೆರೆ ಪಟ್ಟಣದಲ್ಲಿ ಪಂಚಲಿಂಗಗಳ ಜೊತೆ ಇನ್ನೂ ಹಲವು ಲಿಂಗಗಳಿವೆ ಅವುಗಳ ವಿವರವನ್ನು ಸ್ಥೂಲವಾಗಿ ಕೆಳಗೆ ಕೊಡಲಾಗಿದೆ.

ಮಾತಾಗಾಯಿತ್ರಿ ದೇವಸ್ಥಾನದಲ್ಲಿ ಇರುವ ಶಿವಲಿಂಗವು ಪೀಠದ ಮೇಲೆ ಒಂದುವರೆ ಅಡಿ ಎತ್ತರವಿದ್ದು ಕಪ್ಪು ಶಿಲೆಯಲ್ಲಿದೆ. ಚೌಕಾಕಾರದ ಪೀಠ ಪಾಣಿವಟ್ಟಲು, ಜಲಾಹರಿಯಿದೆ. ಬ್ರಹ್ಮಭಾಗದ ಹತ್ತಿರ ಕಂಚಿನ ನಾಗ ಮೂರ್ತಿಯನ್ನು ಇಟ್ಟಿದ್ದಾರೆ. ಶಿವಲಿಂಗದ ಕಾಲಮಾನ ಕ್ರಿ.ಶ.ಸುಮಾರು ೧೩-೧೪ನೆಯ ಶತಮಾನ.

ಶ್ರೀ ಗುರು ಕೊಟ್ಟೂರು ಬಸವೇಶ್ವರಸ್ವಾಮಿ ದೇವಾಸ್ಥಾನದ ಗರ್ಭಗೃಹದಲ್ಲಿರುವ ಶಿವಲಿಂಗವು ಕಪ್ಪು ಶಿಲೆಯಲ್ಲಿದ್ದು ಎರಡು ಅಡಿ ಎತ್ತರದಲ್ಲಿದೆ. ಪೂಜಾಭಾಗವಾದ ರುದ್ರಭಾಗದಲ್ಲಿ ಬ್ರಹ್ಮಸೂತ್ರವಿದೆ. ಚೌಕಾಕಾರದ ಪೀಠ ಪಾಣಿವಟ್ಟಲು ಜಲಾಹರಿಯಿದೆ.

ವೀರಭದ್ರ ದೇವಸ್ಥಾನದ ಗರ್ಭಗೃಹದಲ್ಲಿರುವ ಶಿವಲಿಂಗವು ಎರಡು ಅಡಿ ಎತ್ತರವಾಗಿದ್ದು ದುಂಡನೆಯಾಕಾರದ ಪೀಠದ ಮೇಲಿದೆ. ಇದರಲ್ಲಿ ಬ್ರಹ್ಮಭಾಗ, ಪಾಣಿವಟ್ಟಲು, ಜಲಾಹರಿಗಳಿವೆ.

ಬ್ರಹ್ಮಭಾಗವು ಒಂದು ಅಡಿ ಎತ್ತರವಾಗಿದ್ದು, ದುಂಡಾಗಿದೆ ಲಿಂಗದ ಎದುರು ಮುಂದೆ ಮತ್ತು ಪಕ್ಕದಲ್ಲಿ ನಂದಿ ಶಿಲ್ಪಗಳಿವೆ. ಈ ರೀತಿಯ ಲಿಂಗಗಳು ನಮಗೆ ಚಿತ್ರದುರ್ಗ ಜಿಲ್ಲೆಯಾದ್ಯಂತ ಕಾಣುತ್ತವೆ.

ಸೋಮೇಶ್ವರ ದೇವಾಲಯದ ಗರ್ಭಗೃಹದಲ್ಲಿ ಪ್ರತಿಷ್ಠಾಪಿತವಾಗಿರುವ ಲಿಂಗವು ತಳಮಟ್ಟದಿಂದ ಎರಡು ಅಡಿ ಆಳದಲ್ಲಿದೆ. ಇದನ್ನು ಭಕ್ತರು ಇತ್ತೀಚೆಗೆ ತಂದು ಪ್ರತಿಷ್ಠಾಪಿಸಿದ್ದಾರೆ. ಶಿಲ್ಪವು ಚೌಕಾಕಾರದ ಪೀಠದ ಮೇಲಿದೆ. ಚೌಕಾಕಾರದ ಪಾಣಿವಟ್ಟಲು ಜಲಾಹರಿ ಭಾಗಗಳಿದ್ದು, ಕಪ್ಪುಶಿಲೆಯಲ್ಲಿದೆ. ಶಿಲ್ಪದ ಕಾಲಮಾನ ಕ್ರಿ.ಶ.ಸುಮಾರು ೧೨-೧೩ನೆಯ ಶತಮಾನ.

ಹೊಳಲ್ಕೆರೆ ಪಟ್ಟಣದಲ್ಲಿರುವ ಪಂಚಲಿಂಗಗಳ ವಿವರ

ಗಣಪತಿ ದೇವಸ್ಥಾನದ ಹತ್ತಿರ ತೋಟದ ಪಕ್ಕದಲ್ಲಿರುವ ಲಿಂಗವು ಚೌಕಾಕಾರದ ಪೀಠದ ಮೇಲೆ ಇದ್ದು, ಎರಡು ಅಡಿ ಎತ್ತರದ ಕಪ್ಪು ಶಿಲೆಯಲ್ಲಿದೆ. ಹೊಳಲ್ಕೆರೆ ಪಟ್ಟಣದಲ್ಲಿ ಪಂಚಲಿಂಗಗಳಲ್ಲಿ ಒಂದು. ಇದನ್ನು ಶಂಭುಲಿಂಗ ಎನ್ನುವರು. ಇದು ದುಂಡನೆಯಾಕಾರದ ಪಾಣಿವಟ್ಟಲು, ಜಲಾಹರಿ, ಬ್ರಹ್ಮ ಭಾಗಗಳನ್ನು ಹೊಂದಿದೆ. ಬ್ರಹ್ಮ ಭಾಗವು ಅರ್ಧ ಅಡಿ ಎತ್ತರವಿದ್ದು, ದುಂಡಾಗಿದೆ. ಲಿಂಗದ ಕಾಲಮಾನ ಕ್ರಿ.ಶ.ಸುಮಾರು ೧೨-೧೩ನೆಯ ಶತಮಾನ.

ಶಂಕರ ಲಿಂಗ ದೇವಸ್ಥಾನದ ಗರ್ಭಗೃಹದಲ್ಲಿರುವ ಲಿಂಗವು ಚೌಕಾಕಾರದ ಪೀಠದ ಮೇಲೆ ಪ್ರತಿಷ್ಠಾಪಿತವಾಗಿದೆ. ದುಂಡನೆಯ ಪಾಣಿವಟ್ಟಲು ಜಲಾಹರಿ ಭಾಗಗಳನ್ನು ಒಳಗೊಂಡಿದೆ. ಲಿಂಗದ ಹಿಂದೆ ನಾಗಶಿಲ್ಪವಿದ್ದು ಇದನ್ನು ನಾಗಲಿಂಗ ಎನ್ನಬಹುದು. ಈ ಲಿಂಗ ಪಂಚಲಿಂಗಗಳಲ್ಲಿ ಇದೆ ಪ್ರಥಮ ಎಂದು ತಿಳಿಯುತ್ತದೆ. ಇದರ ಕಾಲಮಾನ ಕ್ರಿ.ಶ. ಸುಮಾರು ೧೦-೧೧ನೆಯ ಶತಮಾನದ್ದಾಗಿರಬಹುದು.

ಕಲ್ಲೇಲಿಂಗ ದೇವಾಲಯದ ಗರ್ಭಗೃಹದಲ್ಲಿರುವ ಲಿಂಗವು ಎರಡು ಅಡಿ ಎತ್ತರವಾಗಿದ್ದು, ಕಪ್ಪು ಶಿಲೆಯಲ್ಲಿದೆ. ಚೌಕಾಕಾರದ ಅಲಂಕಾರಯುತ ಪೀಠದಲ್ಲಿ ಸ್ಥಾಪಿತವಾಗಿರುವ ಲಿಂಗವು ಜಲಾಹರಿ, ಪಾಣಿವಟ್ಟಲು ಬ್ರಹ್ಮಭಾಗಗಳನ್ನು ಒಳಗೊಂಡಿದೆ. ಬ್ರಹ್ಮ ಭಾಗದಲ್ಲಿ ಸೋಮಸೂತ್ರವಿದೆ. ಲಿಂಗದ ಕಾಲಮಾನ ಕ್ರಿ.ಶ.೧೧-೧೨ನೆಯ ಶತಮಾನ.

ಗಂಗಾಧರೇಶ್ವರ ದೇವಾಲಯದ ಗರ್ಭಗೃಹದಲ್ಲಿರುವ ಲಿಂಗವು ಮೂರು ಅಡಿ ಎತ್ತರವಾಗಿದ್ದು, ಕಪ್ಪು ಶಿಲೆಯಲ್ಲಿದೆ. ಚೌಕಾಕಾರದ ಪೀಠದ ಮೇಲೆ ರಚಿತವಾಗಿರುವ ಲಿಂಗವು ಪಾಣಿವಟ್ಟಲು ಜಲಾಹರಿ, ಬ್ರಹ್ಮಭಾಗಗಳನ್ನು ಒಳಗೊಂಡಿದೆ. ಬ್ರಹ್ಮಭಾಗ ದುಂಡಾಗಿದ್ದು, ಸೋಮಸೂತ್ರವಿದೆ. ಲಿಂಗದ ಕಾಲಮಾನ ಕ್ರಿ.ಶ.ಸುಮಾರು ೧೨-೧೩ನೆಯ ಶತಮಾನ.

ಶಂಭುಲಿಂಗೇಶ್ವರ ದೇವಾಸ್ಥಾನದ ಗರ್ಭಗೃಹದಲ್ಲಿರುವ ಲಿಂಗವು ಕಪ್ಪು ಶಿಲೆಯಲ್ಲಿದ್ದು, ಚೌಕಾಕಾರದ ಪೀಠದ ಮೇಲೆ ರಚಿತವಾಗಿದೆ. ಲಿಂಗವು ಪಾಣಿವಟ್ಟಲು, ಬ್ರಹ್ಮಭಾಗ,

ಜಲಾಹರಿಗಳನ್ನು ಒಳಗೊಂಡಿದೆ. ಈ ಲಿಂಗದ ವಿಶೇಷತೆ ಎಂದರೆ ಬ್ರಹ್ಮಭಾಗವು ಪಚ್ಚೆಕಲ್ಲಿನಿಂದ ಮಾಡಲಾಗಿದೆ. ಸ್ಥಳೀಯರು ಈ ಲಿಂಗವನ್ನು ಹಂಪಿಯಿಂದ ಮಾಡಿಸಿ ತಂದು ಇಲ್ಲಿ ಪ್ರತಿಷ್ಠಾಪಿಸಲಾಗಿದೆ ಎನ್ನುತ್ತಾರೆ.

ಲಿಂಗವು ಕಪ್ಪುಶಿಲೆಯಲ್ಲಿದ್ದು, ಎರಡು ಅಡಿ ಎತ್ತರವಾಗಿ ಚೌಕಾಕಾರದ ಪೀಠ, ಪಾಣಿವಟ್ಟಲು, ಜಲಾಹರಿ, ದುಂಡನೆಯ ಬ್ರಹ್ಮಭಾಗವನ್ನು ಒಳಗೊಂಡಿದೆ. ಇದರ ಕಾಲಮಾನ ಕ್ರಿ.ಶ.ಸುಮಾರು ೧೬-೧೭ನೆಯ ಶತಮಾನ.

ರಂಗನಾಥ ದೇವಸ್ಥಾನ ಗರ್ಭಗೃಹದ ಮಧ್ಯದಲ್ಲಿ ಇರುವ ಲಿಂಗವು ಮರಳು ಶಿಲೆಯಲ್ಲಿದ್ದು ಎರಡು ಅಡಿ ಎತ್ತರವಾಗಿದೆ. ಚೌಕಾಕಾರದ ಪಾಣಿವಟ್ಟಲು ಇದ್ದು, ಜಲಾಹರಿ ಭಾಗವು ಚಿಕ್ಕದಾಗಿದೆ. ಬ್ರಹ್ಮಭಾಗವನ್ನು ನೋಡಿದರೆ ಒಂದು ಉದ್ದನೆಯ ಕಲ್ಲನ್ನು ತಂದು ಇಟ್ಟಿದ್ದಾರೆ ಅನ್ನಿಸುತ್ತದೆ. ಈ ದೇವಾಲಯದ ಲಕ್ಷಣ ನೋಡಿದರೆ ಇಲ್ಲಿರುವ ಮೂರ್ತಿಯನ್ನು ಬೇರೆ ಕಡೆ ಇಟ್ಟು ನಂತರದ ದಿನಗಳಲ್ಲಿ ಲಿಂಗ ತಂದು ಇಟ್ಟಿರಬಹುದು. ಲಿಂಗದ ಕಾಲಮಾನ ಕ್ರಿ.ಶ.ಸುಮಾರು ೧೫-೧೬ನೆಯ ಶತಮಾನ.

ನಂದಿ

ಶೈವಧರ್ಮದಲ್ಲಿ ಶಿವನಿಗಿಂತ ಹೆಚ್ಚಾಗಿ ಅವನ ವಾಹನವಾದ ನಂದಿಯು ಪೂಜೆಗೊಳಪಟ್ಟಿದೆ. ಶಿವನಿಗೆ ಪ್ರತೀಕವಾಗಿ ನಂದಿಯನ್ನು ಪೂಜಿಸುವುದು ವಾಡಿಕೆ. ಪ್ರತಿ ಶೈವಧರ್ಮ ದೇವಾಲಯಗಳ ಗರ್ಭಗೃಹದಲ್ಲಿರುವ ಶಿವಲಿಂಗಕ್ಕೆ ಅಭಿಮುಖವಾಗಿ ನಂದಿಯನ್ನು ಪ್ರತಿಷ್ಠಾಪಿಸಲಾಗಿರುತ್ತದೆ. ಇವುಗಳು ಕೆಲವೊಮ್ಮೆ ಗರ್ಭಗೃಹದಲ್ಲಿ ಪ್ರಧಾನ ದೇವರಾಗಿಯೂ ಕಾಣುತ್ತದೆ. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ನಂದಿ ಶಿಲ್ಪಗಳು ಸಾಮಾನ್ಯವಾಗಿ ಕಂಡುಬರುತ್ತವೆ.

ಗುರು ಕೊಟ್ಟೂರು ಬಸವೇಶ್ವರ ದೇವಸ್ಥಾನದ ಹತ್ತಿರ ಲಿಂಗದ ಎದುರಿಗೆ ನಂದಿ ಶಿಲ್ಪವಿದೆ. ನಂದಿಯು ಒಂದು ಅಡಿ ಎತ್ತರವಾಗಿದ್ದು, ಕಪ್ಪು ಶಿಲೆಯಲ್ಲಿದೆ. ಚಿಕ್ಕ ಕೊಂಬುಗಳಿವೆ. ಘಂಟಾಸರಹಾಕಲಾಗಿದೆ. ಭುಜಧಾರಿಯಾಗಿದ್ದು, ಬೆನ್ನ ಮೇಲೆ ವಸ್ತ್ರವನ್ನಾಕಲಾಗಿದೆ. ಶಿಲ್ಪದ ಕಾಲಮಾನ ಕಿ.ಶ. ೧೭-೧೮ನೆಯ ಶತಮಾನ.

ವೀರಭದ್ರ ದೇವಸ್ಥಾನದ ಹತ್ತಿರದ ಗರ್ಭಗೃಹದ ಮಧ್ಯದಲ್ಲಿ ಪೀಠದ ಮೇಲೆ ಪ್ರತಿಷ್ಠಾಪಿತವಾಗಿರುವ ನಂದಿಯು ಕಪ್ಪು ಶಿಲೆಯಲ್ಲಿದ್ದು, ಮೂರು ಅಡಿ ಎತ್ತರವಾಗಿದೆ. ಶಿಲ್ಪದಲ್ಲಿ ನಂದಿಯ ಕೊರಳಗೆ ಘಂಟಾಸರ, ಕೊರಳ ಹಗಡು, ಮೂಗುದಾರಗಳನ್ನು ಹಾಕಲಾಗಿದೆ. ಬೆನ್ನ ಮೇಲೆ ಅಲಂಕಾರಯುತ ವಸ್ತ್ರವಿದೆ. ಬೃಹದಾಕರವಾಗಿರುವ ನಂದಿಯ ಹಿಂದೆ ಗರ್ಭಗುಡಿಗೆ ಒಂದು ಕಿಂಡಿಯನ್ನು ಮಾಡಲಾಗಿದೆ. ಸಾಮಾನ್ಯವಾಗಿ ನಂದಿಗೆ ಮೂಗುದಾರವಿರುವುದು ವಿಶೇಷವಾಗಿದೆ. ಶಿಲ್ಪದ ಕಾಲಮಾನ ಕ್ರಿ.ಶ. ೧೩-೧೪ನೆಯ ಶತಮಾನ.

ಅದರ ಎದುರಿಗೆ ಇರುವ ಮತ್ತೊಂದು ಗರ್ಭಗುಡಿಯಲ್ಲಿ ಲಿಂಗದ ಪಕ್ಕ ಮತ್ತು ಎದುರಿಗೆ ಎರಡು ನಂದಿ ಶಿಲ್ಪಗಳಿವೆ. ಇವು ಸಹ ಘಂಟಾಸರ, ಹಣೆಪಟ್ಟಿ ಕಾಲಿಗೆ ಕಾಲು ಕಡಗಗಳನ್ನು ಧರಿಸಿವೆ. ಒಂದು ನಂದಿ ಶಿಲ್ಪವನ್ನು ನಂತರದ ಕಾಲಮಾನದಲ್ಲಿ ಲಿಂಗದ ಪಕ್ಕ ತಂದಿಟ್ಟಿರಬಹುದು.

ಸೋಮೇಶ್ವರ ದೇವಾಲಯದ ನಂದಿಯು ಒಂದುವರೆ ಅಡಿ ಎತ್ತರವಾಗಿದ್ದು, ಕಪ್ಪು ಶಿಲೆಯಲ್ಲಿದೆ. ಶಿಲ್ಪವು ತಳಮಟ್ಟದಿಂದ ಎರಡು ಅಡಿ ಆಳದಲ್ಲಿದ್ದು, ಅಲಂಕಾರಯುತ ಹುರಿಯನ್ನು ಬೆನ್ನಿಗೆ ಕಟ್ಟಲಾಗಿದೆ. ಭುಜಧಾರಿಯಾಗಿರುವ ನಂದಿಯ ಕೊರಳಿಗೆ ಘಂಟಾಸರ ಹಾಕಿದೆ. ಕಾಲಮಾನ ಕ್ರಿ.ಶ. ಸುಮಾರು ೧೩-೧೪ನೆಯ ಶತಮಾನ.

ಹಳ್ಳದ ವೀರಭದ್ರ ದೇವಾಸ್ಥಾನದ ಮುಂದಿನ ಸ್ತಂಬದ ಮೇಲಿರುವ ನಂದಿಯು ವೀರಭದ್ರ ಮೂರ್ತಿಗೆ ಅಭಿಮುಖವಾಗಿದೆ. ಹಣೆಪಟ್ಟಿ, ಕೊರಳಹಾರ, ಘಂಟಾಸರ, ಬೆನ್ನಿಗೆ ವಸ್ತ್ರವನ್ನು ಹಾಕಲಾಗಿದೆ. ಮೂರ್ತಿಯು ಭಗ್ನವಾಗಿದೆ. ಇದೇ ದೇವಸ್ಥಾನದ ಎದುರಿಗೆ ಒಂದು ಚಿಕ್ಕ ಕಂಬದ ಮೇಲೆ ಪ್ರತಿಷ್ಠಾಪಿತವಾಗಿರುವ ನಂದಿಯು ವೀರಭದ್ರ ದೇವಸ್ಥಾನದ ಅಭಿಮುಖವಾಗಿ ಕಪ್ಪು ಶಿಲೆಯಲ್ಲಿದ್ದು, ಒಂದು ಅಡಿ ಎತ್ತರವಾಗಿದೆ. ಕಾಲುಗಳು ಮಾತ್ರ ಕಾಣುತ್ತವೆ. ಶಿಲ್ಪವು ಭಗ್ನಗೊಂಡಿದೆ.

ಗಣಪತಿ ದೇವಸ್ಥಾನದ ಪಕ್ಕದ ತೋಟದಲ್ಲಿ ಇರುವ ಲಿಂಗದ ಎದರುಗಿರುವ ನಂದಿಯು ಎರಡು ಅಡಿ ಎತ್ತರವಾಗಿ ಕಪ್ಪು ಶಿಲೆಯಲ್ಲಿದೆ. ನಂದಿಯ ತಲೆಯು ಚಿಕ್ಕದಾಗಿದ್ದು ದೇಹ ಮಾತ್ರ ದೊಡ್ಡದಾಗಿದೆ. ಕೊರಳಿಗೆ ಘಂಟಾಸರ ಭುಜಕ್ಕೆ ಹಾರ, ಕಾಲಿಗೆ ಕಾಲ ಕಡಗಗಳನ್ನು ಹಾಕಲಾಗಿದೆ. ನಂದಿಯು ಪೀಠದ ಮೇಲೆ ಆಸೀನವಾಗಿದೆ. ಶಿಲ್ಪದ ಕಾಲಮಾನ ಕ್ರಿ.ಶ.ಸುಮಾರು ೧೨-೧೩ನೆಯ ಶತಮಾನ.

ಕೋಡಿ ಬಸವೇಶ್ವರ ದೇವಾಲಯದ ಗರ್ಭಗೃಹದಲ್ಲಿ ಪ್ರತಿಷ್ಠಾಪಿತವಾಗಿರುವ ನಂದಿಯು ಮೂರು ಅಡಿ ಎತ್ತರವಾಗಿದ್ದು, ಕಪ್ಪು ಶಿಲೆಯಲ್ಲಿದೆ. ಪೀಠದ ಮೇಲೆ ಆಸೀನವಾಗಿರುವ ಇದಕ್ಕೆ ಹಣೆಪಟ್ಟಿ, ಕೊರಳಹಾರ, ಘಂಟಾಸರ, ಕಾಲುಕಡಗ ಬೆನ್ನಿಗೆ ವಸ್ತ್ರ, ಇತ್ಯಾದಿ ಅಲಂಕರಣೆ ಮಾಡಲಾಗಿದೆ. ಶಿಲ್ಪವು ಬೃಹದಾಕಾರವಾಗಿದ್ದು ವಿಶೇಷವಾಗಿದೆ. ಶಿಲ್ಪದ ಕಾಲಮಾನ ಕ್ರಿ.ಶ.ಸುಮಾರು ೧೩-೧೪ನೆಯ ಶತಮಾನ.

ಶಂಕರಲಿಂಗ ದೇವಸ್ಥಾನದ ಲಿಂಗದ ಎದುರಿಗೆ ಪ್ರತಿಷ್ಟಾಪಿತವಾಗಿರುವ ನಂದಿಯು ಒಂದುವರೆ ಅಡಿ ಎತ್ತರವಾಗಿದ್ದು ಕಪ್ಪು ಶಿಲೆಯಲ್ಲಿದೆ. ಶಿಲ್ಪಕ್ಕೆ ಹಣೆಪಟ್ಟಿ, ಕೊರಳಹಗಡು, ಘಂಟಾಸರ, ಬೆನ್ನಿಗೆ ವಸ್ತ್ರ, ಹಿಂದಿನ ಬಲಕಾಲಿಗೆ ಮುಂದಿನ ಎಡಗಾಲಿಗೆ ಕಡಗಗಳನ್ನು ಹಾಕಲಾಗಿದೆ. ಶಿಲ್ಪದ ಕಾಲಮಾನ ಕ್ರಿ.ಶ.೧೩-೧೪ನೆಯ ಶತಮಾನ.

ಮಾತಾಗಾಯಿತ್ರಿ ದೇವಸ್ಥಾನದಲ್ಲಿರುವ ಲಿಂಗದ ಎದುರಿಗೆ ಇರುವ ನಂದಿಯು ಕಪ್ಪು ಶಿಲೆಯಲ್ಲಿದ್ದು, ಪೀಠದ ಮೇಲೆ ಆಸೀನವಾಗಿದೆ. ಶಿಲ್ಪದ ಹಣೆಗೆ ಪಟ್ಟಿ, ಕೊರಳಿಗೆ ಎರಡು ರೀತಿಯ ಹಾರ, ಘಂಟಾಸರ, ಬೆನ್ನಿಗೆ ಅಲಂಕೃತವಾದ ವಸ್ತ್ರಗಳನ್ನು ಹಾಕಲಾಗಿದೆ. ಮುಂದಿನ ಬಲಗಾಲಿಗೆ ಕಡಗ ಇದೆ. ಶಿಲ್ಪದ ಕಾಲಮಾನ ಕ್ರಿ.ಶ. ಸುಮಾರು ೧೩-೧೪ನೆಯ ಶತಮಾನ.

ಲಿಂಗೇಶ್ವರ ದೇವಸ್ಥಾನದ ಲಿಂಗದ ಎದುರಿಗೆ ಪ್ರತಿಷ್ಠಾಪಿಸಲಾಗಿರುವ ನಂದಿಯ ಕಪ್ಪು ಶಿಲೆಯಲ್ಲಿದ್ದು, ಎರಡು ಅಡಿ ಎತ್ತರವಾಗಿದೆ. ಹಣೆಪಟ್ಟಿ, ಕೊರಳಹಗಡು, ಘಂಟಾಸರಗಳನ್ನು ಹಾಕಲಾಗಿದೆ. ಬಲಗಾಲಿಗೆ ಕಡಗವನ್ನು ಹಾಕಲಾಗಿದೆ. ಶಿಲ್ಪದ ಕಾಲಮಾನ ಕ್ರಿ.ಶ.೧೫-೧೬ನೆಯ ಶತಮಾನ.

ಕಲ್ಲೇಲಿಂಗ ದೇವಸ್ಥಾನ ಶಿಲ್ಪವು ಕಪ್ಪು ಶಿಲೆಯಲ್ಲಿದ್ದು, ಎರಡು ಅಡಿ ಎತ್ತರವಾಗಿದೆ. ಹಣೆಪಟ್ಟಿ, ಕೊರಳ ಹಗಡು ಘಂಟಾಸರವನ್ನು ಹೊಂದಿದೆ ಬೆನ್ನಿಗೆ ವಸ್ತ್ರವನ್ನು ಹಾಕಲಾಗಿದೆ ಶಿಲ್ಪದ ಬಲಗಾಲಿಗೆ ಕಡಗ ಇದೆ. ಶಿಲ್ಪದ ಕಾಲಮಾನ ಕ್ರಿ.ಶ.೧೨-೧೩ನೆಯ ಶತಮಾನ.

ಬಸವೇಶ್ವರ ದೇವಾಲಯದ ಗರ್ಭಗೃಹದಲ್ಲಿರುವ ನಂದಿಯು ಮೂರು ಅಡಿ ಎತ್ತರವಾಗಿದ್ದು, ಕಪ್ಪು ಶಿಲೆಯಲ್ಲಿದೆ. ಹಣೆಪಟ್ಟಿ, ಕೊರಳಿಗೆ ಹಾರ, ಘಂಟಾಸರ, ವಿವಿಧ ರೀತಿಯ ಆಭರಣಗಳನ್ನು ಹಾಕಲಾಗಿದೆ. ಎಡಗಾಲಿಗೆ ಕಡಗ ಇದೆ. ಶಿಲ್ಪದ ಕಾಲಮಾನ ಕ್ರಿ.ಶ.ಸುಮಾರು ೧೨-೧೩ನೆಯ ಶತಮಾನ.

ಶಂಭುಲಿಂಗ ದೇವಾಲಯದ ಎದುರಿಗೆ ಇರುವ ನಂದಿಯು ಒಂದು ಅಡಿ ಎತ್ತರವಾಗಿದ್ದು, ಕಪ್ಪು ಶಿಲೆಯಲ್ಲಿದೆ. ಕೊರಳಿಗೆ ಚೈನು, ಹಗಡು, ಘಂಟಾಸರ ಇದೆ. ಬೆನ್ನಿನ ಮೇಲೆ ಅಲಂಕಾರಯುತ ವಸ್ತ್ರವಿದೆ. ಹಿಂದಿನ ಬಲಗಾಲಿಗೆ ಮುಂದಿನ ಎಡಗಾಲಿಗೆ ಕಡಗ ತೊಡಿಸಲಾಗಿದೆ. ಶಿಲ್ಪದ ಕಾಲಮಾನ ಕ್ರಿ.ಶ.ಸುಮಾರು ೧೩-೧೪ನೆಯ ಶತಮನ.

ಈ ಪ್ರದೇಶದಲ್ಲಿ ನಂದಿ ಶಿಲ್ಪಗಳು ಸಾಕಷ್ಟು ಇದ್ದು, ಕೆಲವು ಲಿಂಗದ ಎದುರಿಗೆ ಇದ್ದರೆ, ಕೆಲವು ಪ್ರಧಾನವಾಗಿ ಗರ್ಭಗೃಹದಲ್ಲಿ ಪ್ರತಿಷ್ಠಾಪಿತವಾಗಿವೆ. ಇಷ್ಟೊಂದು ನಂದಿ ಶಿಲ್ಪಗಳನ್ನು ನೋಡಿದರೆ ಶೈವಧರ್ಮವು ಈ ಭಾಗದಲ್ಲಿ ಪ್ರಧಾನವಾಗಿತ್ತೆಂದು ಕಂಡುಬರುತ್ತದೆ.

ಆಂಜನೇಯ

ಭಾರತದಲ್ಲಿ ಆಂಜನೇಯನ ಗುಡಿ ಇಲ್ಲದ ಗ್ರಾಮ, ನಗರ, ಪಟ್ಟಣಗಳಿಲ್ಲವೆಂದೇ ಹೇಳಬಹುದು. ಇಂಥ ಸರ್ವಜನ ಪೂಜಾಭಾಜನನಾದ ಆಂಜನೇಯ ರಾಮಾಯಣದ ಮಹಾವೀರರಲ್ಲಿ ಒಬ್ಬ. ಇವನು ಶೌರ್ಯ, ಸಾಹಸ, ಬುದ್ಧಿವಂತಿಕೆಯನ್ನು ಹೊಂದಿದವನು. ಇಂತಹ ಆಂಜನೇಯನ ಹುಟ್ಟಿದ ಬಗೆಗೆ ಅನೇಕ ಕಥೆಗಳಿವೆ, ವಾಲ್ಮೀಕಿ ರಾಮಾಯಣ ಕಿಷ್ಕಿಂದಾ ಖಂಡದಲ್ಲಿ ನಮಗೆ ಪ್ರಥಮ ದರ್ಶನ ಕೊಡುತ್ತಾನೆ.[೧೯] ಆನಂತರವೇ ಆಂಜನೇಯ

ದೇವಾಲಾಯಗಳು ದೇಶಾದ್ಯಾಂತಲೂ ಸ್ಥಾಪಿತವಾದವು. ಇವುಗಳಲ್ಲಿ ಚಿಕ್ಕ ಗುಡಿಗಳಿರುವುದೇ ಅಧಿಕ. ಸಾಮಾನ್ಯವಾಗಿ ಈ ದೇವಾಲಯಗಳ ದಕ್ಷಿಣಾಭಿಮುಖವಾಗಿರುತ್ತದೆ. ಮೂರ್ತಿಯ ಮುಖ ಪೂರ್ವದಿಕ್ಕಿಗಿರುವುದೇ ಹೆಚ್ಚು, ಇದಕ್ಕೆ ಅಪವಾದವೆಂಬಂತೆ. ಇಲ್ಲಿ ಈಶಾನ್ಯ ಮುಖ ಆಂಜನೇಯನಿದ್ದಾನೆ. ವೇಣುಗೋಪಾಲ ಸ್ವಾಮಿ ದೇವಾಲಯದಲ್ಲಿ ದಕ್ಷಿಣಭಿಮುಖವಾಗಿ ಭಿತ್ತಿಯಲ್ಲಿರುವ ಆಂಜನೇಯ ಮೂರ್ತಿಯ ಮರಳುಕಲ್ಲಿನದು. ಒಂದು ಅಡಿ ಎತ್ತರದಲ್ಲಿದೆ. ಮುಖವು ಪೂರ್ವಾಭಿಮುಖವಾಗಿದೆ. ಈ ಪ್ರದೇಶದಲ್ಲಿ ಗಣಪತಿ ದೇವಸ್ಥಾನದಲ್ಲಿ ಒಂದು ವೇಣುಗೋಪಾಲ ಸ್ವಾಮಿ ದೇವಸ್ಥಾನದಲ್ಲಿ ಮೂರು, ನೀಲಕಂಠ ದೇವಸ್ಥಾನದಲ್ಲಿ ಒಂದು ಮೂರ್ತಿಗಳಿವೆ. ನೀಲಕಂಠ ದೇವಸ್ಥಾನದ ಪಕ್ಕದಲ್ಲಿರುವ ಆಂಜನೇಯ ಮೂರ್ತಿ ಆರು ಅಡಿ ಎತ್ತರವಿದ್ದು ವಿಶೇಷವಾಗಿದೆ.

ಒಂಟಿ ಕಂಬದ ಮಠ

ಸುತ್ತಮುತ್ತ ಅಡಿಕೆ ತೆಂಗು ಮುಂತಾದ ತೋಟಗಳಿಂದ ಕೂಡಿದ್ದು, ದಕ್ಷಿಣದಲ್ಲಿ ಹಬ್ಬಿರುವ ಹಸಿರು ಬೆಟ್ಟಗಳ ಸಾಲು, ಇವುಗಳ ಮಧ್ಯೆ ಹೊಲದ ಬಯಲಲ್ಲಿ ಒಂದೆಡೆ ಪುರಾತನ ಕಟ್ಟಡಗಳ ಸಮೂಹ, ಬದಿಯಲ್ಲೇ ತಿಳಿನೀರಿನ ಒಂದು ಕಲ್ಯಾಣಿ, ಇತ್ತೀಚಿಗೆ ಹಿರಿಯ ಸನ್ಯಾಸಿಯೊಬ್ಬರು ಬಂದರು. ಇಲ್ಲಿಯ ಪ್ರಾಚ್ಯಾವಶೇಷಗಳನ್ನು ಅವುಗಳ ಕಲೆಗಾರಿಕೆಯನ್ನೂ ನಿಶ್ಚಲ ಪ್ರಶಾಂತತೆಯನ್ನು ಕಂಡು ಆಕರ್ಷಿತರಾದರು. ಆ ಕ್ಷಣದಲ್ಲೇ ಅವರು ತಮ್ಮ ಸಮಾಧಿಸ್ಥಾನ ಅದೇ ಆಗಬೇಕೆಂದು ನಿರ್ಣಯಿಸಿಯೇ ಬಿಟ್ಟರು. ಅವರೇ ಈಚೆಗೆ ಲಿಂಗೈಕ್ಯರಾದ ಚಿತ್ರದುರ್ಗದ ಬೃಹನ್ಮಠದ ಹಿರಿಯ ಶ್ರೀಗಳಾದ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು. ಆ ಸ್ಥಳವೇ ಚಿತ್ರದುರ್ಗ ಜಿಲ್ಲೆಯ ತಾಲೂಕು ಕೇಂದ್ರಗಳಲ್ಲೊಂದಾದ ಹೊಳಲ್ಕೆರೆಯ ಬಳಿಯ ಒಂಟಿ ಕಂಬದ ಮಠ. ಶ್ರೀಗಳು ಆ ಸ್ಥಳವನ್ನು ಸಂದರ್ಶಿಸಿದ ದಿನ 'ಬಸವ ಜಯಂತಿ'ಯ ದಿನವಾಗಿತ್ತು. (೧೯೯೪ರ ಮೇ ೧೨ ಗುರುವಾರ).

ಪ್ರಾಚೀನ ಸ್ಥಳಗಳಲ್ಲಿ ಹೊಳಲ್ಕೆರೆಯೂ ಒಂದು. ಹೊಯ್ಸಳ ದೊರೆಗಳು, ವಿಜಯನಗರದ ಅರಸರು, ಚಿತ್ರದುರ್ಗದ ನಾಯಕರು, ಇವರ ಕಾಲದ ಅನೇಕ ಶಾಸನಗಳು ಸ್ಮಾರಕಗಳೂ ಇಲ್ಲಿವೆ. ಚಿತ್ರದುರ್ಗದ ಬೃಹನ್ಮಠಕ್ಕೆ ಸೇರಿದ ಮೂರು ಶಾಖಾ ಮಠಗಳಲ್ಲಿ ಊರ ಹೊರಗಿರುವ 'ಒಂಟಿ ಕಂಬದ ಮಠ' ಈಚೆಗೆ ಅನೂರ್ಜಿತ ಸ್ಥಿತಿಯಲ್ಲಿದ್ದರೂ ಹಿಂದೊಂದು ಕಾಲಕ್ಕೆ ಅತ್ಯಂತ ವೈಭವ ಸೌಂದರ್ಯ ಪ್ರಾಶಸ್ತ್ಯಗಳನ್ನು ಹೊಂದಿತ್ತೆನಿಸುವಂತಹ ಹಲವು ಪುರಾತನ ಕಟ್ಟಡಗಳ ಸಮುಚ್ಚಯ ಇದಾಗಿದೆ. ಈಗ ಶ್ರೀಗಳ ಐಕ್ಯಸ್ಥಾನವಾಗುವ ಅದೃಷ್ಟವನ್ನು ಹೊಂದಿ ಕಾಯಕಲ್ಪದ ಸದಾವಕಾಶವನ್ನು ಪಡೆದು ಕೊಂಡಿದೆ.

ಸುತ್ತಮುತ್ತ ಹರಡಿನಿಂತಿರುವ ಹಸುರಿನ ಮಧ್ಯೆ ಸುಮಾರು ಅರವತ್ತು ಎಕರೆಯಷ್ಟು ವಿಸ್ತೀರ್ಣದ ತನ್ನದೇ ಆದ ಭೂಮಿಯಲ್ಲಿ ಈ ಮಠ ನೆಲೆಸಿದೆ. ಇಲ್ಲಿಯ ಹಳೆಯ ಕಲ್ಲು

ಕಟ್ಟಗಳ ನಡುವೆ ಅಪರೂಪದ ವಾಸ್ತುವಿಸ್ಮಯವೊಂದು ಹುದುಗಿದೆ. ವಿಶಾಲವಾದ ಅಷ್ಟಕೋನಾಕೃತಿಯ ಒಂದು ಪ್ರಾಂಗಣ ಅದರ ಮಧ್ಯೆದಲ್ಲಿ ಒಂದೇ ಒಂದು ದೊಡ್ಡ ಕಲ್ಲುಕಂಬ. ಸುತ್ತಲೂ ಎಂಟು ದಿಕ್ಕುಗಳಿಂದ ಬಂದಿರುವ ದೊಡ್ಡ ಕಲ್ಲುತೊಲೆಗಳನ್ನು ಆ ಒಂದೇ ಕಂಬ ಹೊತ್ತು ನಿಂತಿರುವುದು ಆಶ್ಚರ್ಯವನ್ನುಂಟು ಮಾಡುತ್ತದೆ. ಆ ಎಂಟು ತೊಲೆಗಳ ಮೇಲೆ ಅಡ್ಡಡ್ಡವಾಗಿ ಸಂಯೋಜಿಸಿರುವ ಕಲ್ಲು ಚಪ್ಪಡಿಗಳ ಛಾವಣಿ ಕೂಡಾ ಸಂಕೀರ್ಣವಿದ್ದು ತಲೆದೂಗಿಸುವಂತಿದೆ. ಈ ಮಠಕ್ಕೆ ಒಂಟಿ ಕಂಬದ ಮಠ ಎನ್ನುವ ಹೆಸರು ಬರಲು ಈ ವಾಸ್ತು ವಿಶೇಷವೇ ಕಾರಣವೆನ್ನುವುದು ಸ್ಪಷ್ಟವಾಗಿದೆ. ಇದು ಒಂದು ರೀತಿಯ ಛತ್ರಿಯ ಆಕಾರವೆಂದೇ ಹೇಳಬಹುದು.

೫ನೆಯ ದಶಕದಲ್ಲಿ ಶ್ರೀ ಜಯದೇವ ಜಗದ್ಗುರುಗಳು ಇಲ್ಲಿ ಶ್ರೀ ಮುರುಘೇಂದ್ರ ದೇವರು ಎಂಬ ಶಾಖಾಮಠಾಧೀಶರೊಬ್ಬರನ್ನು ನೇಮಿಸಿದ್ದರು. ಅವರು ಇಲ್ಲಿಯ ಶಿಥಿಲ ಕಟ್ಟಡಗಳಲ್ಲಿ ನೆಲಸಿರಲಾಗದೆ ಹೊಳಲ್ಕೆರೆಯೊಳಗಿರುವ ಹಾಲು ಸ್ವಾಮಿ ಮಠದಲ್ಲಿ ನೆಲಸಿದ್ದು, ಆ ಮಠವನ್ನೂ ಊರೊಳಗಿದ್ದ ಇನ್ನೊಂದು ಮಠವಾದ ಕೋಡಿ ಮಠವನ್ನೂ ಮತ್ತು ಈ ಒಂಟಿ ಕಂಬದ ಮಠವನ್ನು ನೋಡಿಕೊಳ್ಳುತ್ತಾ ಬಂದಿದ್ದಾರೆ.

ಶ್ರೀಗಳ ಐಕ್ಯಸ್ಥಾನದ ಅಪೇಕ್ಷೆ ಅದಕ್ಕೆ ಶ್ರೀರಕ್ಷೆಯಾಗಿ ಒದಗಿಬಂದು ಅದೀಗ ಜೀವ ಶಕ್ತಿಯ ಸಂಚಾರವಾಗಿ ಒಮ್ಮೆಲೇ ನಿಶ್ಚೇತನ ಸ್ಥಿತಿಯಿಂದ ಸಚೇತನ ಸ್ಥಿತಿಗೆ ಬಂದಂತಾಗಿದೆ. ಬೃಹನ್ಮಠದ ನೂತನ ಜಗದ್ಗುರುಗಳಾದ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು ಕೈಕೊಂಡಿರುವರು. ಇವರು ೧೯೯೪ ಆಗಸ್ಟ್ ೭ರಂದು ಹೃದಯಾಘಾತದಿಂದ ಲಿಂಗೈಕ್ಯರಾದರು. ಶ್ರೀಗಳ ಅಪೇಕ್ಷೆಯಂತೆ ಆಗಸ್ಟ್ ೮ರಂದು ಸೋಮವಾರ ಅವರ ಸಮಾಧಿ ನಿರ್ಮಾಣಕ್ಕೆ ಶಿಲಾನ್ಯಾಸ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿತ್ತು, ಕಿರಿಯ ಶ್ರೀಗಳು ಶಿಲಾನ್ಯಾಸ ಮಾಡುವವರಿದ್ದರು. ಆದರೆ ಆಗಸ್ಟ ೮ ರಂದು ಸಮಾದಿ ಮಂದಿರ ನಿರ್ಮಾಣಕ್ಕೆ ಶಂಕು ಸ್ಥಾಪನೆ ಆಗುವ ಬದಲು ಅವರ ಕ್ರಿಯಾ ಸಮಾಧಿಯೇ ಆಗಬೇಕಾಗಿ ಬಂದದ್ದು ಒಂದು ವಿಚಿತ್ರ, ಶ್ರೀಗಳ ಅಪೇಕ್ಷೆಯಂತೆ ಒಂಟಿ ಕಂಬದ ಮಠವು ಅವರ ಚಿರವಿಶ್ರಾಂತಿಯ ನೆಲೆಯಾಯಿತು.

ಒಟ್ಟಾರೆ ಶ್ರೀಗಳು, ಜಾತಿಭೇದವಿಲ್ಲದೆ ಸರ್ವಜನ ಸಮುದಾಯದ ಹಿತಸಾಧನೆಗೆ, ಶರಣತತ್ವ ವಚನ ವ್ಯಾಖ್ಯಾನ ನೈಪುಣ್ಯಕ್ಕೆ ವಿವಿಧ ಕಲಾ ವಿದ್ವತ್ ಪ್ರೇಮ ಪ್ರೊತ್ಸಾಹಗಳಿಗೆ ನಾಡಿನಲ್ಲಿ ಹೆಸರಾಗಿದ್ದರು. ಅಂಥ ಪೂಜ್ಯರು ಹೊಳಲ್ಕೆರೆಯ ಈ ಸುಂದರ ಪ್ರಶಾಂತ ಪ್ರದೇಶವನ್ನು ತಮ್ಮ ಐಕ್ಯ ಸ್ಥಾಳವಾಗಿ ಆಯ್ಕೆ ಮಾಡಿಕೊಂಡದ್ದು, ಅವರ ಸಂಸ್ಕೃತಿ ಕಲಾ ಪ್ರೇಮದ ದೃಷ್ಟಿಯನ್ನು ತೋರಿಸುತ್ತದೆ. ಶ್ರೀಗಳ ಐಕ್ಯ ಮಂದಿರ ಸ್ಥಾನದ ಆಯ್ಕೆ ಹೊಳಲ್ಕೆರೆ ಪ್ರದೇಶದ ಜನರಲ್ಲಂತೂ ಉತ್ಸಾಹದ ಅಲೆಯನ್ನೇ ಎಬ್ಬಿಸಿದೆ. ಇಲ್ಲಿ ಪ್ರಾಥಮಿಕದಿಂದ ಹಿಡಿದು ಪ್ರೌಢ

ಮಟ್ಟದವರೆಗಿನ ವಸತಿಯುತ ಶಾಲೆ, ಒಂದು ಉದ್ಯಾನವನ, ಇತ್ಯಾದಿಗಳನ್ನು ತೆರೆಯಬೇಕೆಂದು ಶ್ರೀ ಶಿವಮೂರ್ತಿ ಸ್ವಾಮಿಗಳವರ ಆಪೇಕ್ಷೆಯಾಗಿತ್ತು. ಕೇವಲ ಭಗ್ನಾವಶೇಷಗಳ ಸ್ಥಳವಾಗಿ ಹೊಗಿದ್ದ ಈ ಮಠ ಇದೀಗ ತನ್ನ ಪ್ರಾಚೀನ ಪರಿಸರದೊಂದಿಗೆ ಶ್ರೀಗಳವರ ಐಕ್ಯ ಮಂದಿರಸ್ಥಾನವೂ ಆಗಿ ಪ್ರಾಶಸ್ತ್ಯಪಡೆದು ಶೈಕ್ಷಣಿಕ ಕೇಂದ್ರವೂ, ಸಂದರ್ಶಕರನ್ನು ಭಕ್ತಾಭಿಮಾನಿಗಳನ್ನು ಆಕರ್ಷಿಸುವ ಒಂದು ಗಣ್ಯ ಸ್ಥಳವಾಗಿ ಬೆಳೆಯುತ್ತಿದೆ.

ii. ವೈಷ್ಣವ ಶಿಲ್ಪಗಳು

ಭಾರತೀಯರ ಪ್ರಾಚೀನ ಧರ್ಮಗಳಲ್ಲಿ ವೈಷ್ಣವ ಧರ್ಮವೂ ಒಂದು. ಇದರ ಪ್ರಾರಂಭದ ಉಲ್ಲೇಖಗಳನ್ನು ವೈದಿಕ ಸಾಹಿತ್ಯದಲ್ಲಿ ನೋಡಬಹುದು. ನಂತರ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಸಾಂಬ ಮತ್ತು ಅನಿರುದ್ಧರೆನ್ನುವ ಪಂಚವೀರರು ಇದರ ಅನುಯಾಯಿಗಳಾಗಿದ್ದರಿಂದ ಇವರ ಆರಾಧನೆಯನ್ನು ವೀರವಾದ ಎಂದು ಕರೆಯಲಾಗುತ್ತದೆ.[೨೦] ಈ ವಾದದ ಪ್ರಕಾರ ವಾಸುದೇವನೇ ಶ್ರೇಷ್ಠ. ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧರು ಒಬ್ಬರಾದ ನಂತರ ಮತ್ತೊಬ್ಬರು ವಾಸುದೇವನಿಂದ ಆವಿರ್ಭವಿಸಿದವರು. ಸುಮಾರು ಕ್ರಿಪೂ. ೪ನೆಯ ಶತಮಾನದ ವೇಳೆಗೆ ಮಥುರಾ ಪ್ರದೇಶದ ಜನರು ವಾಸುದೇವ ಅಥವಾ ಶ್ರೀ ಕೃಷ್ಣನ ಪೂಜೆಯನ್ನು ಮಾಡುತ್ತಿದ್ದರೆಂದು ಗ್ರೀಕ್ ರಾಯಭಾರಿ ಮೇಗಸ್ತಾನಿಸ್ ಮತ್ತು ಪಾಣಿನಿಯರು ಅಭಿಪ್ರಾಯಪಟ್ಟಿದ್ದಾರೆ. ಕ್ರಿ ಪೂ ಸುಮಾರು ೨ನೆಯ ಶತಮಾನದ ಬೆಸನಗರದ ಶಾಸನದಲ್ಲಿ ಗ್ರೀಕ್ ರಾಯಭಾರಿ ಎಲೆಯೋಡೊರಸ್ ಭಾಗವತನಾಗಿದ್ದು, ಗುರುಡ ಧ್ವಜವನ್ನು ನಿರ್ಮಿಸಿ ದೇವ ದೇವನಾದ ವಾಸುದೇವನನ್ನು ಪೂಜಿಸುವ ಪರಮ ಭಾಗವತ ನಾನು ಎಂದು ತನ್ನನ್ನು ಕರೆದುಕೊಂಡಿದ್ದಾನೆ. ತ್ರಿಮೂರ್ತಿಗಳಲ್ಲಿ ಒಬ್ಬನಾದ ವಿಷ್ಣು, ವೈಷ್ಣವ ಧರ್ಮದ ಪ್ರಮುಖ ದೇವರು ಆಗಿದ್ದಾನೆ. ಸಂರಕ್ಷಣಾ ದೇವತೆಯಾದ ವಿಷ್ಣು ಅನೇಕ ಅವತಾರಗಳನ್ನು ಎತ್ತಿದ ಬಗ್ಗೆ ಪುರಾಣಗಳಲ್ಲಿ ವರ್ಣನೆಗಳಿರುವುದು ಕಂಡುಬರುತ್ತದೆ. ವಿಷ್ಣುವಿನ ಅವತಾರಗಳು ಹತ್ತು ಎಂದು ಶತಪಥ ಬ್ರಾಹ್ಮಣದಲ್ಲಿ ಉಲ್ಲೇಖವಿದೆ. ಆದರೆ, ಕೆಲವೊಂದು ಸಲ ಇಪ್ಪತ್ತೆರಡು ಅದಕ್ಕಿಂತಲೂ ಹೆಚ್ಚಿಗೆ ಹೇಳುವುದುಂಟು.[೨೧] ಬೇರೆ ಬೇರೆ ಕೃತಿಗಳು ಬೇರೆ ಬೇರೆ ಅವತಾರಗಳನ್ನು ಹೇಳುತ್ತವೆ. ಆದರೆ ಸಾಮಾನ್ಯವಾಗಿ ಹತ್ತು ಅವತಾರಗಳು ಅವು ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ. ಹೊಳಲ್ಕೆರೆ ಪಟ್ಟಣದಲ್ಲಿ ಸಾಕಷ್ಟು ವೈಷ್ಣವ ಶಿಲ್ಪಗಳಿವೆ. ಅದರ ವಿವರವನ್ನು ಸ್ಥೂಲವಾಗಿ ಕೆಳಗಿನಂತೆ ವಿವರಿಸಲಾಗಿದೆ.

ವಿಷ್ಣು

ವೇಣುಗೋಪಾಲ ಸ್ವಾಮಿ ದೇವಾಲಯದ ಮುಖಮಂಟಪದಲ್ಲಿ ಇರುವ ಈ ಶಿಲ್ಪವು ಕಪ್ಪುಶಿಲೆಯಲ್ಲಿದ್ದು ಸ್ಥಾನಿಕ ಭಂಗಿಯಲ್ಲಿದೆ. ನಾಲ್ಕು ಅಡಿ ಎತ್ತರದ ಶಿಲ್ಪವು ಕೈಗಳಲ್ಲಿ

ಕ್ರಮವಾಗಿ ಪದ್ಮ, ಚಕ್ರ, ಶಂಖ, ಗದಾಧಾರಿಯಾಗಿದ್ದು, ತಲೆ ಕೀರಿಟಮುಕುಟಗೆ, ರತ್ನಪಟ್ಟಿಕೆಗಳಿಂದ ಅಲಂಕೃತಗೊಂಡಿದೆ. ಪತ್ರಕುಂಡಲ, ಕಂಠಹಾರ, ಮಣಿಸರ, ಯಜ್ಞೋಪವೀತ, ಕೇಯೂರ, ಕಟಿವಸ್ತ್ರಧಾರಿಯಾಗಿದ್ದು, ಕಾಲಿಗೆ ಕಾಲುಕಡಗಗಳನ್ನು ಧರಿಸಿದ್ದಾನೆ. ಶಿಲ್ಪದ ಇಕ್ಕೆಲಗಳಲ್ಲಿ ಶ್ರೀದೇವಿ, ಭೂದೇವಿಯರು ಇದ್ದಾರೆ. ಅಲಂಕಾರಯುತ ಪ್ರಭಾವಳಿ ಇದ್ದು, ಮಧ್ಯದಲ್ಲಿ ಕೀರ್ತಿಮುಖವಿದೆ. ಈ ಶಿಲ್ಪದ ವಿಶೇಷತೆ ಎಂದರೆ ರುಂಡಭಾಗ ಪುರುಷ ಲಕ್ಷಣ ಹೊಂದಿದ್ದು ಮುಂಡಭಾಗವು ಸ್ತ್ರೀ ಶೈಲಿಯಲ್ಲಿದೆ. ಕೀರಿಟದ ಮಧ್ಯೆ ಶಿವಲಿಂಗವಿದ್ದು, ಸ್ಥಳೀಯರು ಇದನ್ನು ಚೆನ್ನಕೇಶವ ಮೂರ್ತಿ ಎನ್ನುವರು. ಇದೇ ರೀತಿಯ ಕೀರಿಟಧಾರಿ ಶಿವಲಿಂಗ ತೀರುಪತಿಯಲ್ಲಿ ಇರುವುದು ಕಂಡು ಬಂದಿದೆ. ಈ ಶಿಲ್ಪವು ಪಟ್ಟಣದ ಚೆನ್ನಕೇಶವ ದೇವಾಲಯದಲ್ಲಿದ್ದು, ನಂತರದ ದಿನಗಳಲ್ಲಿ ದೇವಾಲಯ ಹಾಳದ ಮೇಲೆ ಶಿಲ್ಪವನ್ನು ವೇಣುಗೋಪಾಲ ದೇವಾಲಯಕ್ಕೆ ತಂದು ಇಡಲಾಗಿದೆ.

ರಾಮ ಲಕ್ಷ್ಮಣ

ಪೂರ್ವಾಭಿಮುಖವಾಗಿರುವ ಕೊದಂಡರಾಮ ದೇವಾಲಯದಲ್ಲಿ ಕಪ್ಪು ಶಿಲೆಯಲ್ಲಿರುವ ಸೀತೆ, ರಾಮ, ಲಕ್ಷ್ಮಣರ ಶಿಲ್ಪಗಳಿವೆ. ರಾಮನು ಬಿಲ್ಲು ಬಾಣಗಳನ್ನು ಹಿಡಿದಿರುವನ್ನು, ಸೀತೆಯು ವಿವಿಧ ವಸ್ತ್ರಾಭರಣಗಳಿಂದ ಅಲಂಕೃತಗೊಂಡಿರುವಳು. ಶಿಲ್ಪದ ಹಿಂದೆ ಅಲಂಕಾರಯುತ ಪ್ರಭಾವಳಿಯಿದೆ.

ಬಳಪದ ಕಲ್ಲಿನಲ್ಲಿ ಇರುವ ಶಿಲ್ಪವು ಕಾಲಭೈರವ ದೇವಾಲಯದ ಮುಂದೆ ಸ್ಥಾನಿಕ ಭಂಗಿಯಲ್ಲಿದ್ದು, ಎರಡು ಅಡಿ ಎತ್ತರವಿದೆ. ಕೈಗಳಲ್ಲಿ ಕ್ರಮವಾಗಿ, ಭಗ್ನ, ಚಕ್ರ, ಭಗ್ನವಾಗಿದೆ. ಅಲಂಕಾರಯುತ ಕೀರಿಟವಿದ್ದು ಕಿವಿಯೋಲೆ, ಕಂಠಹಾರ, ಕೊರಳಹಾರ ಸೊಂಟಪಟ್ಟಿಕೆ ಧರಿಸಿರುವನು. ಅಲ್ಲದೇ ಭುಜಬಂಧಿ, ತೋಳಬಂದಿ ಕೈಕಡಗಗಳು ಇವೆ. ಶಿಲ್ಪವು ಭಗ್ನಗೊಂಡಿದ್ದು, ಶಿಲ್ಪದ ಲಕ್ಷಣ ಆಧರಿಸಿ ವಿಷ್ಣು ಶಿಲ್ಪವೆಂದು ಹೇಳಬಹುದು.

ವೇಣುಗೋಪಾಲಸ್ವಾಮಿಯ ಗರ್ಭಗುಡಿಯ ಮಧ್ಯದಲ್ಲಿ ಪ್ರತಿಷ್ಠಾಪಿಸಲಾಗಿರುವ ಶಿಲ್ಪವು ಸ್ಥಾನಿಕ ಭಂಗಿಯಲ್ಲಿದ್ದು, ಈ ಮೂರ್ತಿಯನ್ನು ೪–೫ ಅಡಿ ಎತ್ತರವಿದೆ. ಕಪ್ಪು ಶಿಲೆಯಲ್ಲಿರುವ ಇದು ಕೊಳಲನ್ನು ನುಡಿಸುತ್ತಿದೆ. ತಲೆಗೆ ಅಲಂಕಾರಯುತ ಕೀರಿಟ, ಕೈಬಳೆ, ತೋಳಬಂದಿ, ಕೊರಳಹಾರ ಇತ್ಯಾದಿ ಆಭರಣಗಳೊಂದಿಗೆ ಅಲಂಕೃತವಾಗಿದೆ. ಈ ಮೂರ್ತಿಯ ಸುತ್ತ ಕಂಚಿನ ಪ್ರಭಾವಳಿಯಿದೆ.

ವೇಣುಗೋಪಾಲಸ್ವಾಮಿಯ ಪಲ್ಲಕ್ಕಿಯಲ್ಲಿ ಈ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಸುಮಾರು ಮೂರು ಅಡಿ ಎತ್ತರವಾಗಿದೆ. ಕಂಚಿನಲ್ಲಿ ಇರುವ ಇದು ಕೈಯಲ್ಲಿ ಕ್ರಮವಾಗಿ ಅಭಯ, ಚಕ್ರ, ಶಂಖ, ಗಧೆಗಳನ್ನು ಹಿಡಿದಿರುವುದು. ತಲೆಗೆ ಅಲಂಕಾರಯುತ ಕಿರೀಟ ಇದ್ದು,

ಕೈಬಳೆ. ತೋಳಬಂದಿ, ಕೊರಳಹಾರ, ಯಜ್ಞೋಪವೀತಗಳನ್ನು ಧರಿಸಿರುವುದು. ಅಲಂಕಾರಯುತ ಪ್ರಭಾವಳಿ ಇದ್ದು ಪಕ್ಕದಲ್ಲಿ ಇನ್ನೆರಡು ದೇವಿಯರ ಶಿಲ್ಪಗಳಿವೆ.

ಗರುಡ

ವೇಣುಗೋಪಾಲ ದೇವಾಲಯದ ಎದುರಿಗೆ ದ್ವೀಪಸ್ತಂಭದ ಮೇಲೆ ತುಂಬ ಸುಂದರವಾದ ಗರುಡ ಶಿಲ್ಪವಿದೆ. ಕಪ್ಪು ಶಿಲೆಯಲ್ಲಿರುವ ಇದು ಕೈಮುಗಿದು ಕುಳಿತಿದೆ. ತಲೆಗೆ ಕಿರೀಟ, ಕರ್ಣಕುಂಡಲ, ಕೊರಳಹಾರ, ತೋಳಬಂದಿ, ಕೈಬಳೆ, ಕಟಿಸೂತ್ರ, ಕಾಲುಕಡಗಗಳನ್ನು ಧರಿಸಿರುವುದು. ಬೆನ್ನ ಹಿಂದೆ ಎರಡು ರೆಕ್ಕೆಗಳನ್ನು ಹೊಂದಿದೆ.

ಕಾಲಭೈರವ ದೇವಸ್ಥಾನದ ಆವರಣದಲ್ಲಿರುವ ಶಿಲ್ಪವು ಬಳಪ ಶಿಲೆಯಲ್ಲಿದ್ದು ಎರಡು ಅಡಿ ಎತ್ತರದಲ್ಲಿದೆ. ಶಿಲ್ಪವು ಕೈಗಳಲ್ಲಿ ಕ್ರಮವಾಗಿ ಗಧಾ, ಚಕ್ರ, ಶಂಖ, ಪದ್ಮಗಳನ್ನು ಹಿಡಿದಿರುವನು, ಕಿರೀಟಧಾರಿಯಾಗಿರುವ ಶಿಲ್ಪದಲ್ಲಿ ಕೇಯೊರ ಕಂಠಹಾರ, ಯಜ್ಞೋಪವಿತ, ಕಟಿಸೂತ್ರ, ತೋಳಬಂದಿ, ಕಾಲುಕಡಗಳನ್ನು ಧರಿಸಿದ್ದಾನೆ. ಶಿಲ್ಪದ ಹಿಂದೆ ಪ್ರಭಾವಳಿಯಿದ್ದು ಭಗ್ನಗೊಂಡಿದೆ. ಶಿಲ್ಪದ ಕಾಲಮಾನ ಕ್ರಿ.ಶ. ಸುಮಾರು ೧೩-೧೪ನೆಯ ಶತಮಾನ.

iii. ಶಾಕ್ತ ಶಿಲ್ಪಗಳು

ವಿವಿಧ ಸಂಸ್ಕೃತಿಯನ್ನು ಹೊಂದಿರುವ ಭಾರತ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಮಹಿಳೆಯರಿಗೆ ವಿಶೇಷ ಸ್ಥಾನವಿದೆ. ಭಾರತದ ಇತಿಹಾಸದ ಆರಂಭದ ಕಾಲವನ್ನು ನೋಡಿದರೆ ಒಂದರ್ಥದಲ್ಲಿ ಮಾತೃದೇವತಾ ಆರಾಧನೆಯನ್ನು ಕಾಣಬಹುದಾಗಿದೆ. ಪ್ರಾಚೀನ ಹರಪ್ಪ ಸಂಸ್ಕೃತಿಯಲ್ಲಿ ಮಾತೃದೇವತೆಗೆ ಪ್ರಮುಖ ಸ್ಥಾನವಿದ್ದುದನ್ನು ನಾವು ಇತಿಹಾಸ ಪುಟಗಳಿಂದ ನೋಡಿದ್ದೇವೆ. ಹೀಗೆ ಕ್ರಿ.ಪೂ.ಸುಮಾರು ೩೦೦೦ವರ್ಷಗಳ ಕಾಲದಲ್ಲೇ ಅಸ್ತಿತ್ವಕ್ಕೆ ಬಂದ ಮಾತೃದೇವತಾರಾಧನೆಯೇ ಶಾಕ್ತ ಸಂಪ್ರದಾಯದ ಮೂಲಾಧಾರ. ಹಾಗಾಗಿ ಭಾರತದಲ್ಲಿ ಶಿಲ್ಪಗಳು ಕಂಡುಬರುವುದನ್ನು ನೋಡಬಹುದು.[೨೨]

ಹೊಳಲ್ಕೆರೆ ಪಟ್ಟಣದಲ್ಲಿ ಶಾಕ್ತ ಶಿಲ್ಪಗಳು ಎಂದರೆ ಕುಕ್ಕವಾಡೇಶ್ವರಿ, ಕಾಳಿ ಚೌಡೇಶ್ವರಿ, ಮಾತಾಗಾಯಿತ್ರಿ, ಹೊಳಲಮ್ಮ, ಭೈರವಿ, ಸ್ತ್ರೀಶಿಲ್ಪ ಇತ್ಯಾದಿಗಳಿವೆ.

ಹೊಳಲಮ್ಮ ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಗಿರುವ ಈ ಶಿಲ್ಪವು ಮರಳುಗಲ್ಲಿನಲ್ಲಿದೆ. ಒಂದು ಪಟ್ಟಿಕೆಯಲ್ಲಿರುವ ಇದರಲ್ಲಿ ಮೂವರು ಸ್ತ್ರೀಯರಿದ್ದಾರೆ. ಮಧ್ಯದಲ್ಲಿ ಕುಳಿತ ಭಂಗಿಯಲ್ಲಿರುವ ಸ್ತ್ರೀಯು ಬಲಗೈಯಲ್ಲಿ ಖಡ್ಗವನ್ನಿಡಿದಿದ್ದಾಳೆ. ಪಕ್ಕದಲ್ಲಿರುವ ಸ್ತ್ರೀಯರ ಶಿಲ್ಪಗಳು ಭಗ್ನವಾಗಿರುವುದರಿಂದ ಸ್ಪಷ್ಟವಾಗಿ ಕಾಣುವುದಿಲ್ಲ.

ಪಟ್ಟಣದ ಪಶ್ಚಿಮಕ್ಕೆ ಹೊರಭಾಗದಲ್ಲಿ ಕುಕ್ಕವಾಡೇಶ್ವರಿ ದೇವಸ್ಥಾನದ ಗರ್ಭಗುಡಿಯಲ್ಲಿರುವ ಶಿಲ್ಪವು ಕಪ್ಪು ಶಿಲೆಯಲ್ಲಿದ್ದು, ಸಿಂಹದ ಮೇಲೆ ಆಸೀನವಾಗಿದೆ. ಕೈಗಳಲ್ಲಿ ಕ್ರಮವಾಗಿ ಖಡ್ಗ,

ಶೂಲ, ಢಮರು, ಅಭಯ ಹಸ್ತದಲ್ಲಿದೆ. ಶಿಲ್ಪದ ಸುತ್ತಲೂ ಅಲಂಕಾರಯುತ ಪ್ರಭಾವಳಿಯಿದೆ. ಇದರ ಮೇಲೆ ಕೀರ್ತಿಮುಖ ಸಿಂಹವಿದೆ. ಶಿಲ್ಪದ ಕಾಲಮಾನ ಕ್ರಿ.ಶ. ಸುಮಾರು ಕ್ರಿ.ಶ.೧೮–೧೯ನೆಯ ಶತಮಾನ.

ವೀರಭದ್ರ ದೇವಸ್ಥಾನದ ಗರ್ಭಗೃಹದಲ್ಲಿರುವ ಕಾಳಿ ಶಿಲ್ಪವು ಕಪ್ಪು ಶಿಲೆಯಲ್ಲಿದ್ದು, ಮೂರು ಅಡಿ ಎತ್ತರವಿದೆ. ಪೀಠದ ಮೇಲೆ ತ್ರಿಭಂಗಿಯಲ್ಲಿ ಸ್ಥಾನಿಕವಾಗಿದ್ದು, ಕೈಗಳಲ್ಲಿ ಕ್ರಮವಾಗಿ ಖಡ್ಗ, ಬಿಲ್ಲು, ಬಾಣ, ಗುರಾಣಿಗಳನ್ನಿಡಿದಿರುವಳು. ತಲೆಗೆ ಕಿರೀಟವಿದ್ದು, ಕಿವಿಯೋಲೆ, ಕಂಠಹಾರ, ಕೊರಳಹಾರ, ಕಟಿಸೂತ್ರ, ಕೈಕಡಗ, ತೋಳಬಂದಿ, ಕಾಲುಕಡಗ ಇತ್ಯಾದಿ ಅಭರಣಗಳನ್ನು ಧರಿಸಿರುವಳು. ಶಿಲ್ಪದ ಸುತ್ತಲೂ ಅಲಂಕಾರಯುತ ಪ್ರಭಾವಳಿಯಿದ್ದು, ಹೂವಿನ ಅಲಂಕರಣೆಯೊಂದಿಗೆ ಕೀರ್ತಿಮುಖ ಸಿಂಹವಿದೆ. ಶಿಲ್ಪದ ಕಾಲಮಾನ ಕ್ರಿ.ಶ. ಸುಮಾರು ೧೭–೧೩ನೆಯ ಶತಮಾನ.

ಚೌಡೇಶ್ವರಿ: ಕೇಸರುಗಟ್ಟೆಯ ಹಿಂದಿನ ದೇವಾಲಯದಲ್ಲಿರುವ ಶಿಲ್ಪವು ಎರಡು ಅಡಿ ಎತ್ತರವಾಗಿದೆ. ಸಿಂಹದ ಮೇಲೆ ಕುಳಿತಿದ್ದು ಕೈಗಳಲ್ಲಿ ಕ್ರಮವಾಗಿ ತ್ರಿಶೂಲ, ಡಮರು, ಅಭಯ, ಫಲಗಳನ್ನು ಹಿಡಿದಿರುವಳು. ಕಿರೀಟಧಾರಿಯಾಗಿದ್ದು, ಕಿವಿಯೋಲೆ ವಿವಿಧ ರೀತಿಯ ಆಭರಣಗಳನ್ನು ಧರಿಸಿರುವಳು ಶಿಲ್ಪದ ಕಾಲಮಾನ ಕ್ರಿ.ಶ.ಸುಮಾರು ೧೬–೧೭ನೆಯ ಶತಮಾನ.

ಸ್ತ್ರೀ ಶಿಲ್ಪ : ಬಳಪದ ಕಲ್ಲಿನಲ್ಲಿ ಇರುವ ಶಿಲ್ಪವು ಕಾಲಭೈರವ ದೇವಸ್ಥಾನದ ಮುಂದೆ ಧ್ಯಾನಸಕ್ತ ಭಂಗಿಯಲ್ಲಿ ಆಸೀನವಾಗಿದೆ. ಒಂದುವರೆ ಅಡಿ ಎತ್ತರದ ಇದು ಕಿವಿಗಳನ್ನು ಅಗಲವಾಗಿ ತೋರಿಸಲಾಗಿದೆ. ಕೊರಳ ಹಾರ, ಕಂಠಹಾರ, ಭುಜಬಂದಿ, ತೋಳಬಂದಿ ಕೈ ಕಡಗಗಳನ್ನು ಧರಿಸಿದ್ದಾಳೆ. ಕೈಗಳನ್ನು ಸ್ಪಷ್ಟವಾಗಿ ಕೆತ್ತಿರುವುದಿಲ್ಲ. ಕಾಲುಕಡಗಳನ್ನು ಕಂಡರಿಸಲಾಗಿದೆ. ಶಿಲ್ಪದ ಕಾಲಮಾನ ಕ್ರಿ.ಶ. ಸುಮಾರು ೧೩–೧೪ನೆಯ ಶತಮಾನ.

ಭೈರವಿ : ಬಂಡಿ ಚಿಕ್ಕಮ್ಮ ದೇವಸ್ಥಾನದ ಎದುರಿಗೆ ಇರುವ ಕಟ್ಟೆಯ ಮೇಲೆ ಈ ಶಿಲ್ಪವು ಆಸೀನ ಭಂಗಿಯಲ್ಲಿದೆ. ಎರಡು ಅಡಿ ಎತ್ತರವಾಗಿರುವ ಇದು ಕಣಶಿಲೆಯಲ್ಲಿದೆ. ಕೈಗಳಲ್ಲಿ ಕ್ರಮವಾಗಿ ಖಡ್ಗ, ಭಗ್ನ, ಢಮರು, ಫಲಗಳನ್ನು ಹಿಡಿದಿರುವುದು. ಕೀರಿಟ ಮುಕುಟ ಧಾರಿಯಾಗಿರುವ ಭೈರವಿ ಕಂಠಹಾರ, ಸೊಂಟ ಪಟ್ಟಿಕೆ, ತೊಳಬಂದಿ, ಕೈಕಡಗ, ಕಾಲುಕಡಗಳನ್ನು ಧರಿಸಿರುವಳು. ಶಿಲ್ಪದ ಸುತ್ತ ಪ್ರಭಾವಳಿ ಇದ್ದು, ಶಿಲ್ಪವು ಭಗ್ನಗೊಂಡಿದೆ. ಶಿಲ್ಪದ ಲಕ್ಷಣದ ಆಧಾರದ ಮೇಲೆ ಭೈರವಿ ಎಂದು ಗುರುತಿಸಬಹುದು. ಇದೇ ರೀತಿ ಶಿಲ್ಪವು ಪಟ್ಟಣದ ಶಂಕರ ಲಿಂಗ ದೇವಾಸ್ಥಾನದಲ್ಲಿದೆ.

ಶಂಕರಲಿಂಗ ದೇವಲಯದ ದೇವಕೊಷ್ಠದಲ್ಲಿ ಪ್ರತಿಷ್ಠಾಪಿಸಲಾಗಿದೆ. ಶಿಲ್ಪವು ಕಪ್ಪು ಶಿಲೆಯಲ್ಲಿದ್ದು, ತ್ರಿಭಂಗಿಯಲ್ಲಿ ಪೀಠದ ಮೇಲೆ ಆಸೀನವಾಗಿದೆ. ಎರಡು ಅಡಿ ಎತ್ತರವಾಗಿದ್ದು, ಕೈಗಳಲ್ಲಿ ಕ್ರಮವಾಗಿ ಖಡ್ಗ, ಶೂಲ, ಡಮರು, ಕಪಾಲಗಳನ್ನು ಹಿಡಿದಿರುವುದು. ಮಣಿಸರ, ಭುಜಬಂಧಿ,

ಸೊಂಟಪಟ್ಟಿ, ತೋಳಬಂದಿ, ಬೆರಳಿಗೆ ಉಂಗುರ ಧರಿಸಿ ನಗ್ನವಾಗಿದೆ. ಶಿಲ್ಪದ ಇಕ್ಕೆಲದ ಎರಡು ಬದಿಯಲ್ಲಿ ಎರಡು ರುಂಡಗಳಿವೆ. ಶಿಲ್ಪದ ಹಿಂದೆ ಅಲಂಕಾರಯುತ ಪ್ರಭಾವಳಿಯಿದೆ. ಅದರಲ್ಲಿ ಕೀರ್ತಿ ಮುಖಸಿಂಹವಿದೆ. ಶಿಲ್ಪದ ಕಾಲಮಾನ ಕ್ರಿ.ಶ. ಸುಮಾರು ೧೨-೧೩ನೆಯ ಶತಮಾನದ್ದಾಗಿದೆ.

ಕೊಪ್ಪದಮ್ಮ ದೇವಾಲಯದ ಗರ್ಭಗೃಹದಲ್ಲಿರುವ ಶಿಲ್ಪವು ಪೀಠದ ಮೇಲೆ ಆಸೀನವಾಗಿದ್ದು, ಚತುರ್ಭುಜಧಾರಿಯಾಗಿದೆ, ಕೈಯಲ್ಲಿ ಖಡ್ಗ, ಶಂಖವಿದೆ. ತಲೆಗೆ ಕಿರೀಟ, ಕಿವಿಯೋಲೆ, ಕೊರಳಹಾರ, ಕಂಠಹಾರ, ವಿವಿಧ ರೀತಿಯ ಆಭರಣಗಳನ್ನು ಧರಿಸಿರುವಳು ಶಿಲ್ಪದ ಸುತ್ತಲೂ ಪ್ರಭಾವಳಿಯಿದ್ದು ಕೀರ್ತಿಮುಖ ಸಿಂಹವಿದೆ. ಶಿಲ್ಪದ ಕಾಲಮಾನ ಕ್ರಿ.ಶ. ಸುಮಾರು ೧೩-೧೪ನೆಯ ಶತಮಾನ.

ಗುಂಡಾಲಮ್ಮ ದೇವಾಲಯದ ಗರ್ಭಗುಡಿಯಲ್ಲಿರುವ ಶಿಲ್ಪವು ಕಪ್ಪು ಶಿಲೆಯಲ್ಲಿದ್ದು, ಸಿಂಹದ ಮೇಲೆ ಆಸೀನವಾಗಿದೆ. ಚತುರ್ಭುಜಧಾರಿಯಾಗಿರುವ ಇದು ಕೈಗಳಲ್ಲಿ ಕ್ರಮವಾಗಿ, ಖಡ್ಗ, ತ್ರಿಶೂಲ, ಡಮರು, ಪುಷ್ಪಗಳನ್ನು ಹಿಡಿದಿರುವಳು. ತೋಳಬಂದಿ, ಕೈಬಳೆಗಳನ್ನು ಹಾಕಿ, ಕೊರಳಹಾರ, ಕಿವಿಯೋಲೆ, ವಿವಿಧ ರೀತಿಯ ಆಭರಣಗಳನ್ನು ಧರಿಸಿರುವಳು.

ಸ್ತ್ರೀ ದೇವತೆಯ ಶಿಲ್ಪ

ವೇಣುಗೋಪಾಲ ದೇವಾಲಯದಲ್ಲಿರುವ ಇದು ನಾಲ್ಕು ಅಡಿ ಎತ್ತರವಾಗಿರುವ ಶಿಲ್ಪ. ಸ್ಥಾನಿಕ ಭಂಗಿಯಲ್ಲಿದ್ದು, ಕಪ್ಪು ಶಿಲೆಯಲ್ಲಿದೆ. ಕಿರೀಟಧಾರಿಯಾಗಿದ್ದು, ಕರ್ಣಕುಂಡಲ, ಕೊರಳಹಾರ, ಕಟಿಸೂತ್ರ, ಯಜ್ಞೋಪವಿತಗಳನ್ನು ಧರಿಸಿದೆ. ನಾಲ್ಕು ಕೈಗಳನ್ನು ಹೊಂದಿದ್ದು ಕ್ರಮವಾಗಿ ಪದ್ಮ, ಚಕ್ರ, ಶಂಖ, ಗಧಾಗಳನ್ನು ಹಿಡಿದಿರುವುದು. ಅಕ್ಕಪಕ್ಕ ಎರಡು ದ್ವಾರಪಾಲಕರ ಶಿಲ್ಪಗಳಿದ್ದು ಶಿಲ್ಪದ ಸುತ್ತಲೂ ಅಲಂಕಾರಯುತ ಪ್ರಭಾವಳಿಯಿದೆ. ಶಿಲ್ಪದ ಲಕ್ಷಣಗಳನ್ನು ನೋಡಿದರೆ ಕಿ.ಶ.ಸುಮಾರು ೧೦-೧೧ನೆಯ ಶತಮಾನದ್ದಾಗಿರಬಹುದು.

೫.೩. ಸ್ಮಾರಕ ಶಿಲ್ಪಗಳು

ಗತಿಸಿಹೋದ ಮಾನವನ ಸಮಾಧಿ ಮಾಡಿದ ನಿರ್ದಿಷ್ಟ ಸ್ಥಳದ ಗುರುತಿಗಾಗಿಯೇ ಅಥವಾ ಮಡಿದವನ ಸ್ಮರಣೆಗಾಗಿ ಹಲವಾರು ಸಂಕೇತ, ಗುರುತುಗಳನ್ನು ಸಮಾಧಿ ಮಾಡಿದ ಸ್ಥಳದಲ್ಲಿ ನೇಡುತ್ತಿದ್ದರು. ಸಾಮಾನ್ಯವಾಗಿ ಇವು ಸ್ಮಾರಕಗಳು. ಈ ಸ್ಮಾರಕಗಳಲ್ಲಿ ವೀರಗಲ್ಲು, ಮಹಾಸತಿಕಲ್ಲು, ನಿಷಧಿಗಲ್ಲುಗಳು ಕಾಣುವವು. ಕೆಲವು ಸ್ಮಾರಕಗಳಲ್ಲಿ ಗೊಸಾಸಕಲ್ಲುಗಳು ಕಾಣುವವು. ಅವುಗಳನ್ನು ದಾನಮಾಡಿದ ಸ್ಮರಣೆಗಾಗಿ ಸ್ಥಾಪಿಸಿದವುಗಳಾಗಿವೆ.

೫.೩.೧. ವೀರಗಲ್ಲುಗಳು

ಪ್ರಾಚೀನ ಮತ್ತು ಇತಿಹಾಸಕಾಲದ ಮಾನವನ ಹೋರಾಟವೆಂದರೆ ನಮಗೆ ನೆನಪಿಗೆ ಬರುವುದು ಯುದ್ಧ. ಅದೊಂದು ಸಾಮೂಹಿಕ ಕ್ರಿಯೆ. ಅದಕ್ಕೆ ಯುದ್ಧದ ಗೌರವ ಮತ್ತು ಜಯಾಪಜಯಗಳು ದೊರೆಯುವುದು.

ಯುದ್ಧದಲ್ಲಿ ವೀರನಾದವನು ಪರಾಕ್ರಮವನ್ನು ಪ್ರದರ್ಶಿಸುವುದರಿಂದ ಅಥವಾ ಸಾಯುವುದರಿಂದ ಮಾತ್ರ ವೀರ ಎಂಬ ಗೌರವಕ್ಕೆ ಪಾತ್ರನಾಗುತ್ತಿರಲಿಲ್ಲ. ತನ್ನ ಸ್ವಂತ ರಕ್ಷಣೆಗಾಗಿ, ಇತರರಿಗೆ ಧಕ್ಕೆ ಉಂಟಾದಾಗ ತನ್ನ ಊರು, ದೇಶ, ನೆಂಟರು ತೊಂದರೆಯಲ್ಲಿ ಸಿಕ್ಕಾಗ ಅವರನ್ನು ಆ ತೊಂದರೆಯಿಂದ ಬಿಡಿಸುವಲ್ಲಿ ವ್ಯಕ್ತಿಯೊಬ್ಬನು ಮಾಡುವ ಹೋರಾಟವನ್ನು ವೀರತನವೆಂದು ಪರಿಗಣಿಸಲಾಗುತ್ತಿತ್ತು.

ವೀರಗಲ್ಲುನ್ನು ಹಾಕಿಸುವ ಉದ್ದೇಶವೆನೆಂದರೆ ಲೋಕಕ್ಕೆ ತಿಳಿಯುವಂತೆ ಮಾಡುವುದು ಹಾಗೂ ಮುಂದಿನ ತಲೆಮಾರಿಗೆ ವೀರರು ಉತ್ತೇಜನಗೊಳ್ಳುವಂತೆ ಮತ್ತು ಮಡಿದ ವೀರನನ್ನು ತನ್ನ ಆದರ್ಶ ಪುರುಷನನ್ನಾಗಿ ಮಾಡಿಕೊಳ್ಳುವಂತೆ ಮಾಡುವುದೇ ಆಗಿತ್ತು. ಇವುಗಳನ್ನು ದೇವಾಲಯಗಳ ಮುಂದೆ, ಊರ ಬಾಗಿಲ, ಚಾವಡಿಗಳ, ಹೊಂಡಗಳ ಬಳಿ, ಹೊಲ, ಗದ್ದೆ, ತೋಪು, ಮೈದಾನಗಳಲ್ಲಿ ನಿಲ್ಲಿಸಲಾಗುತ್ತಿತ್ತು. ಒಟ್ಟಿನಲ್ಲಿ ಜನಗಳ ಕಾಣ್ಣಿಗೆ ಬೇಗ ಕಾಣಿಸುವ ರೀತಿಯಲ್ಲಿ ನಿಲ್ಲಿಸುವರು.

ವೀರಗಲ್ಲು

ಕಾಲಭೈರವ ದೇವಸ್ಥಾನ ಮುಂದಿರುವ ತುರುಗೋಳ್ ವೀರಗಲ್ಲು ಪ್ರಾಚೀನ ಕಾಲದಲ್ಲಿ ಗೋವುಗಳಿಗೆ ಒಂದು ಪೂಜ್ಯ ಸ್ಥಾನವಿದ್ದಿತ್ತು. ಒಂದು ಗುಂಪಿನ ಗೋವುಗಳನ್ನು ಮತ್ತೊಂದು ಗುಂಪಿನ ಜನ ಅಪಹರಿಸಿದಾಗ ಅವರನ್ನು ಎದುರಿಸಿ ಗೋವುಗಳನ್ನು ಹಿಂದಿರುಗಿಸುವುದು ವೀರನ ಒಂದು ಮೌಲ್ಯವಾಗಿತ್ತು. ಈ ರೀತಿಯ ಶಿಲ್ಪವು ಕಾಲಭೈರವ ದೇವಸ್ಥಾನದ ಮುಂಭಾಗದಲ್ಲಿದೆ. ಕಪ್ಪುಶಿಲೆಯಲ್ಲಿ ಇರುವ ಇದು ಮೂರು ಪಟ್ಟಿಕೆಗಳನ್ನು ಹೊಂದಿದ್ದು ಮೊದಲ ಪಟ್ಟಿಕೆಯ ಬಲಭಾಗದಲ್ಲಿ ಎರಡು ಗೋವುಗಳು ಇದ್ದು ಅದರ ಮುಂಭಾಗದಲ್ಲಿ ವೀರನು ಬೀಲ್ಲು ಬಾಣಗಳನ್ನು ಹಿಡಿದು ಹೋರಾಟ ಮಾಡುವಂತಿದೆ. ವೀರನು ತಲೆಗೆ ತುರುಬನ್ನು ಕಟ್ಟಿದ್ದು, ಸೊಂಟದಲ್ಲಿ ಕಿರುಗತ್ತಿ ಇದ್ದು, ಮೊಣಕಾಲವರೆಗೆ ವಸ್ತ್ರವನ್ನು ಉಟ್ಟಿದ್ದಾನೆ. ಅವನ ಎದುರಿಗೆ ಕುದುರೆಯ ಮೇಲೆ ಇರುವ ಕಳ್ಳನು ತನ್ನ ಎಡಗೈಯಲ್ಲಿ ಕುದುರೆಯ ಲಾಳ ಬಲಗೈಯಲ್ಲಿ ಈಟಿಯನ್ನು ಹಿಡಿದು ಎಸೆಯುವಂತಿದೆ. ಕುದುರೆಯು ತನ್ನ ಮುಂದಿನ ಎರಡು ಕಾಲುಗಳನ್ನು ಮೇಲೆಕ್ಕೆ ಎತ್ತಿ ನೆಗೆಯುತ್ತಿದೆ. ಅದರ ಮೇಲೆ ಎರಡು ಗೋವುಗಳ ಮುಂದೆ ಇಬ್ಬರು ವೀರರು ಬಿಲ್ಲು ಬಾಣಗಳನ್ನು ಹಿಡಿದು ಹೊರಾಡುವಂತಿದೆ. ಸೊಂಟದಲ್ಲಿ ಕಿರುಗತ್ತಿ, ತಲೆಗೆ ತುರುಬು, ಮೋಣಕಾಲವರೆಗೆ ವಸ್ತ್ರಗಳನ್ನು ಉಟ್ಟಿದ್ದಾರೆ. ಅವರ ಎದುರಿಗೆ ಇಬ್ಬರು ಗೋಕಳ್ಳರು ಇದ್ದು, ಒಬ್ಬ ಕುದುರೆಯ ಮೇಲೆ ಕುಳಿತು ಎಡಗೈಯಲ್ಲಿ ಲಾಳ, ಬಲಗೈಯಲ್ಲಿ ಈಟಿಯನ್ನು ಓಡಿದಿದ್ದಾನೆ. ಕುದುರೆಯ ಹಿಂದೆ ಮತ್ತೊಬ್ಬ ಬಿಲ್ಲು ಬಾಣಗಳನ್ನು ಓಡಿದು ದಾಳಿ ಮಾಡುವಂತಿದೆ.

ಎರಡನೆಯ ಪಟ್ಟಿಕೆಯಲ್ಲಿ ಚಾಮರಧಾರೆ ಅಪ್ಸರೆಯರು ವಿಮಾನದಲ್ಲಿ ವೀರನನ್ನು ಕುಳ್ಳಿರಿಸಿಕೊಂಡು ಸ್ವರ್ಗಕ್ಕೆ ಒಯ್ಯುವ ದೃಶ್ಯವಿದೆ. ವಿಮಾನವು ಎರಡು ಅರೆಗಂಬ, ದ್ರಾವಿಡ ಶೈಲಿಯ ಶಿಖರವನ್ನು ಹೊಂದಿದೆ. ಅಪ್ಸರೆಯರು ಒಂದು ಕೈಯಲ್ಲಿ ವಿಮಾನವನ್ನು ಮತ್ತೊಂದು ಕೈಯಲ್ಲಿ ಚಾಮರವನ್ನು ಹಿಡಿದಿದ್ದಾರೆ. ತಲೆಗೆ ತುರುಬನ್ನು ಕಟ್ಟಿಕೊಂಡಿದ್ದು ಅಲಂಕಾರಯುತ ಆಭರಣಗಳನ್ನು ಹಾಕಿ ಮೊಣಕಾಲವರೆಗೆ ನೆರಿಗೆಯುಳ್ಳ ಸೀರೆಯನ್ನು ಉಟ್ಟಿದ್ದಾರೆ.

ಮೂರನೆಯ ಪಟ್ಟಿಕೆಯಲ್ಲಿ ವೀರನು ಪೀಠದ ಮೇಲೆ ಆಸೀನನಾಗಿದ್ದಾನೆ. ಯತಿಯು ಎಡಗೈಯಲ್ಲಿ ಗಂಟೆ ಬಲಗೈಯಲ್ಲಿ ಧೂಪವನ್ನು ಹಿಡಿದು ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿದ್ದಾನೆ. ಶಿವಲಿಂಗದ ಬ್ರಹ್ಮ ಭಾಗದಲ್ಲಿ ಕಿರೀಟವಿದೆ. ಲಿಂಗದ ಎದುರಿಗೆ ನಂದಿಯಿದೆ. ಅದರ ಮೇಲೆ ಸೂರ್ಯ ಚಂದ್ರರನ್ನು ಕಂಡರಿಸಲಾಗಿದೆ.

ಎರಡನೆಯ ಪಟ್ಟಿಕೆಯಲ್ಲಿ ಈ ಶಿಲ್ಪದ ಕುರಿತು ಅಪ್ರಕಟಿತ ಶಾಸನವಿದ್ದು ಅದರ ಅಕ್ಷರಗಳು ಭಗ್ನಗೊಂಡಿರುವುದರಿಂದ ಸ್ಪಷ್ಟವಾಗಿ ತಿಳಿಯುತ್ತಿಲ್ಲ.

ಬಳಪದ ಶಿಲೆಯಲ್ಲಿ ಇರುವ ಇದು ಕಾಲಭೈರವ ದೇವಾಲಯದ ಮುಂಭಾಗದಲ್ಲಿದ್ದು ಮೂರು ಪಟ್ಟಿಕೆಗಳನ್ನು ಒಳಗೊಂಡಿದೆ. ಮೊದಲ ಪಟ್ಟಿಕೆಯಲ್ಲಿ ಮೂರು ಗೋವುಗಳು ಇದ್ದು ಎಡಗಡೆ ಒಬ್ಬ ವೀರ ಬಿಲ್ಲು ಬಾಣಗಳನ್ನು ಹಿಡಿದಿದ್ದಾನೆ. ಅವರ ಎದುರಿಗೆ ಕುದುರೆಯ ಮೇಲೆ ಒಬ್ಬ ಖಡ್ಗವನ್ನು ಹಿಡಿದು ದಾಳಿ ಮಾಡುವಂತಿದೆ. ಕುದುರೆ ಹಿಂದೆ ಮತ್ತೊಬ್ಬ ಕಳ್ಳ ಬಿಲ್ಲು ಬಾಣಗಳನ್ನು ಹಿಡಿದು ದಾಳಿ ಮಾಡುವಂತಿದ್ದಾನೆ. ಇಲ್ಲಿ ವೀರನನ್ನು ದೊಡ್ಡದಾಗಿ ಚಿತ್ರಿಸಲಾಗಿದೆ. ವೀರರ ಕಡೆ ಒಂದು ಗೋವು ಕಳ್ಳರ ಕಡೆ ಎರಡು ಗೋವುಗಳು ಇವೆ.

ಎರಡನೆ ಪಟ್ಟಿಕೆಯಲ್ಲಿ ಚಾಮರಧಾರೆ ಅಪ್ಸರೆಯರು ಒಂದು ಕೈಯಲ್ಲಿ ವಿಮಾನ ಮತ್ತೊಂದು ಕೈಯಲ್ಲಿ ಚಾಮರ ಹಿಡಿದಿರುವರು. ವೀರನು ವಿಮಾನದಲ್ಲಿ ಕೈಮುಗಿದು ಆಸೀನನಾಗಿರುವನು. ಎರಡನೆಯ ಪಟ್ಟಿಕೆಯಲ್ಲಿ ಶಾಸನವಿದ್ದು ಸ್ಪಷ್ಟವಾಗಿ ಕಾಣುವುದಿಲ್ಲ.

ಮೂರನೇ ಪಟ್ಟಿಕೆಯಲ್ಲಿ ವೀರನು ಪೀಠದ ಮೇಲೆ ಕೈಮುಗಿದು ಆಸೀನನಾಗಿರುವನು ಯತಿಯು ಎಡಗೈಯಲ್ಲಿ ಘಂಟೆ ಬಲಗೈಯಲ್ಲಿ ಧೂಪವನ್ನು ಹಿಡಿದು ಪೂಜಿಸುತ್ತಿರುವನು ಶಿವಲಿಂಗವು ವಿಶೇಷವಾಗಿದ್ದು ಬ್ರಹ್ಮಭಾಗದಲ್ಲಿ ಕೀರಿಟ ರೀತಿಯ ರುದ್ರಕ್ಷಿ ಮಣಿಯನ್ನು ಹಾಕಿದೆ. ಈ ರೀತಿಯ ಲಿಂಗವು ಜಗಲೂರು ತಾಲ್ಲೂಕು ಅಸಗೋಡು ಗ್ರಾಮದ ಕಡಲೇ ಬಸಪ್ಪ ದೇವಾಲಯದ ಮುಂದಿನ ವೀರಗಲ್ಲಿನಲ್ಲಿದೆ. ಲಿಂಗದ ಎದುರಿಗೆ ಹಸುವು ಕರುವಿಗೆ ಹಾಲುಣಿಸುವಂತಿದೆ. ಅದರ ಮೇಲೆ ಸೂರ್ಯ, ಚಂದ್ರರರನ್ನು ಕಂಡರಿಸಲಾಗಿದೆ. ವೀರಗಲ್ಲಿನ ಸುತ್ತಲು ಸಾಧ ಪ್ರಭಾವಳಿ ಇದೆ. ಈ ವೀರಗಲ್ಲು ಎರಡು ತುಂಡಾಗಿದ್ದು ಪಕ್ಕದಲ್ಲಿ ಇಟ್ಟಿದ್ದಾರೆ.

ಪಿರೇಕೆರೆಯ ಹಿಂದಿರುವ ಈ ಶಿಲ್ಪಕ್ಕೆ ಒಂದು ಚಿಕ್ಕ ಗುಡಿಯನ್ನು ಇತ್ತೀಚಿಗೆ ಕಟ್ಟಿಸಿ ಪೂಜಿಸುತ್ತಿದ್ದಾರೆ. ಒಂದು ಪಟ್ಟಿಕೆಯಲ್ಲಿರುವ ಶಿಲ್ಪವು ಕುದುರೆಯ ಮೇಲೆ ವೀರನು ಹೋಗುತ್ತಿದ್ದಾನೆ ಕುದುರೆಯನ್ನು ದೊಡ್ಡದಾಗಿ ಚಿತ್ರಸಲಾಗಿದೆ. ವೀರನು ಅದರ ಲಾಳವನ್ನು ಹಿಡಿದಿದ್ದಾನೆ. ಇದೇ ರೀತಿಯ ಮತ್ತೊಂದು ಶಿಲ್ಪವು ಒಂದು ಪಟ್ಟಿಕೆಯಲ್ಲಿದ್ದು ಇದರಲ್ಲಿ ಕುದುರೆ ಏರಿ ವೀರನು ಹೋಗುವಂತಿದೆ. ಭಕ್ತರು ಈ ಎರಡೂ ಕಲ್ಲುಗಳಿಗೆ ಪೂಜಿಸುತ್ತಾರೆ.

ರಂಗನಾಥಸ್ವಾಮಿ ದೇವಾಲಯದ ಮುಂದಿರುವ ವೀರಗಲ್ಲು ಒಂದು ಪಟ್ಟಿಕೆಯಲ್ಲಿದೆ. ಕಪ್ಪು ಶಿಲೆಯಲ್ಲಿರುವ ಶಿಲ್ಪವು ಉಬ್ಬು ಕೆತ್ತನೆಯಲ್ಲಿದ್ದು ವೀರನು ಕೈಮುಗಿದು ನಿಂತಿದ್ದಾನೆ. ತಲೆಗೆ ಒಂದು ದೊಡ್ಡ ತುರುಬು ಇದ್ದು, ಕೊರಳಹಾರ, ಕಿವಿಯೊಲೆ, ತೋಳಬಂದಿ, ಕೈಕಡಗಗಳನ್ನು ಧರಿಸಿರುವನು, ಸೊಂಟಪಟ್ಟಿ ಹಾಕಿ ಸಿಪಾಯಿಯಂತಿದ್ದಾನೆ, ವೀರನ ಪಕ್ಕದಲ್ಲಿ ಒಂದು ಖಡ್ಗವನ್ನು ಚಿತ್ರಸಲಾಗಿದೆ. ಖಡ್ಗದ ಹಿಡಿಯಲ್ಲಿ ದಾರದ ಗುಚ್ಚವನ್ನು ಕಟ್ಟಲಾಗಿದೆ. ಶಿಲ್ಪದ ಸುತ್ತಲೂ ಪ್ರಭಾವಳಿಯಿದೆ. ಯಾವುದೋ ಕಾಳಗದಲ್ಲಿ ಹೋರಾಡಿ ಮಡಿದ ನೆನಪಿಗಾಗಿ ಈ ಶಿಲ್ಪವನ್ನು ಪ್ರತಿಷ್ಠಾಪಿಸಿರಬಹುದು. ಇದರ ಕಾಲಮಾನ ಕ್ರಿ.ಶ. ಸುಮಾರು ೧೩–೧೪ನೇ ಶತಮಾನ.

ಶಂಕರಲಿಂಗ ದೇವಾಲಯದ ಮುಖಮಂಟಪದಲ್ಲಿರುವ ಇದು ಎರಡು ಅಡಿ ಎತ್ತರವಿದ್ದು ಮರಳುಗಲ್ಲಿನಲ್ಲಿದೆ. ಒಂದು ಪಟ್ಟಿಕೆಯಲ್ಲಿರುವ ಇದರಲ್ಲಿ ವೀರನು ಕೈಮುಗಿದು ನಿಂತಿದ್ದಾನೆ. ವೀರನು ತಲೆಗೆ ತುರುಬನ್ನು ಕಟ್ಟಿಕೊಂಡಿದ್ದು ಕಿವಿಯೋಲೆ ತೊಳಬಂದಿ, ಕೈಕಡಗ ಕಾಲುಕಡಗಗಳನ್ನು ಧರಿಸಿರುವನು. ಕೊರಳ, ಸೊಂಟಪಟ್ಟಿ ಧರಿಸಿದ್ದಾನೆ ಹಸುಗಳು ಕರುವಿಗೆ ಹಾಲುಣಿಸುವಂತಿದೆ. ವೀರನ ಬಲಗಡೆಯಲ್ಲಿ ಕಮಲದೊದಿಗೆ ಉಬ್ಬು ಕೆತ್ತನೆಯಿದೆ. ತಲೆಯ ಎರಡೂ ಬದಿಯಲ್ಲಿ ಗೀಳಿಗಳನ್ನು ಕಂಡರಿಸಲಾಗಿದೆ. ಶಿಲ್ಪದ ಸುತ್ತಲೂ ಅಲಂಕಾರಯುತ ಪ್ರಭಾವಳಿಯಿತ್ತು ಅದರ ಮೇಲೆ ಎರಡು ಗಿಳಿಗಳು ಎದುರು ಬದುರಾಗಿ ಕುಳಿತಿವೆ. ವೀರನು ನಿಂತಿರುವ ಪೀಠಭಾಗದಲ್ಲಿ ಹೂವಿನ ಅಲಂಕರಣೆಯಿದೆ. ಈ ಶಿಲ್ಪವನ್ನು ಒಬ್ಬ ವೀರನು ಹಂಸಗಳನ್ನು ಸಂರಕ್ಷಿಸಿದರ ನೆನಪಿಗಾಗಿ ಹಾಕಿಸಿರಬಹುದು.

ಕೊಪ್ಪದಮ್ಮ ದೇವಾಲಯದಲ್ಲಿರುವ ಶಿಲ್ಪಗಳು ವೀರಗಲ್ಲು. ಗರ್ಭಗೃಹದ ಭಿತ್ತಿಯಲ್ಲಿರುವ ಶಿಲ್ಪಗಳು ಒಂದು ವೀರನು ಕೈಮುಗಿದು ನಿಂತಿದ್ದಾನೆ ತಲೆಗೆ ಪೇಠ ಸುತ್ತಿಕೊಂಡು ತೋಳಬಂದಿ, ಕೈಕಡಗ, ಕಾಲುಕಡಗ ಹಾಕಿ ಮೊಳಕಾಲವರೆಗೆ ಪಂಚೆಯನ್ನು ಧರಿಸಿರುವನು. ವೀರನ ಅಕ್ಕ ಪಕ್ಕ ಸ್ತ್ರೀಯರು ನಿಂತಿರುವ ವೀರನ ಕೈ ಹಿಡಿದಿದ್ದಳೆ. ಬಲಗಡೆಯ ಸ್ತ್ರೀಯು ಕೈಮುಗಿದು ನಿಂತಿದ್ದಾಳೆ. ಸ್ತ್ರೀಯರು ತಲೆಗೆ ತುರುಬುಗಳನ್ನು ಕಟ್ಟಿಕೊಂಡಿದ್ದು ವಿವಿಧ ರೀತಿಯ ವಸ್ತ್ರಾಭರಣಗಳನ್ನು ಧರಿಸಿರುವರು. ಯಾವುದೊ ಹೋರಾಟಕ್ಕೆ ವೀರನನ್ನು ಒಳಪಡುವ ರೀತಿಯಲ್ಲಿ ಈ ಶಿಲ್ಪವಿದೆ.

ಮತ್ತೊಂದು ಶಿಲ್ಪವು ಒಂದು ಪಟ್ಟಿಕೆಯಲ್ಲಿದ್ದು ವೀರನು ಬಲಗೈಯಲ್ಲಿ ಖಡ್ಗ ಎಡಗೈಯಲ್ಲಿ ಗಧಾ ರೀತಿಯ ವಸ್ತುವನ್ನಿಡಿದಿರುವನು. ತಲೆಗೆ ಕೀರಿಟ, ಕಿವಿಯೋಲೆ, ಯಜ್ಞಾಪವೀತಗಳನ್ನು ಧರಿಸಿರುವನು. ವೀರನು ಪಕ್ಕದಲ್ಲಿ ಇಬ್ಬರು ಸ್ತ್ರಿಯರಿದ್ದ ಎಡಗಡೆ ಸ್ತ್ರಿಯ ಬಲಗೈಯನ್ನು ಬಲಗಡೆ ಸ್ತ್ರಿಯ ಎಡಗೈಯನ್ನು ಮೇಲೆಕ್ಕೆತ್ತಿರುವನು. ಸ್ತ್ರೀ ಮೂರು ವಿವಿಧ ರೀತಿಯ ವಸ್ತ್ರಾಪರಣಗಳನ್ನು ಹಾಕಿ ಒಂದೊಂದು ಕೈಯನ್ನು ಕೆಳಗೆ ಇಳಿಬಿಟ್ಟರುವರು. ವೀರನ ಎಡಗಡೆ ಶಿವಲಿಂಗದ ಚಿತ್ರವಿದೆ, ಕಾಲಕೆಳಗೆ ಮೂರು ಚಿಕ್ಕ ಗುಂಡುಗಳಿವೆ. ಈ ಶಿಲ್ಪವು ವೀರನನ್ನು ಯಾವುದೋ ಹೋರಾಟಕ್ಕೆ ಸ್ತ್ರೀಯರು ಕಳುಹಿಸಿ ಕೊಡುವಂತಿದೆ.

೫.೩.೨. ಮಹಾಸತಿ ಶಿಲ್ಪಗಳು

ಪತಿಯ ಮರಣದ ನಂತರ ಸತಿಹೋದ ಪತ್ನಿಯ ನೆನಪಿಗಾಗಿ ನಿರ್ಮಿಸಿದ ಶಿಲ್ಪವು ಮಹಾಸತಿ ಶಿಲ್ಪವಾಗಿವೆ. ಈ ಮಾಸ್ತಿಕಲ್ಲುಗಳ ಉದ್ದೇಶ ಮುಖ್ಯವಾಗಿ ಸತಿ ಹೋದುದನ್ನು ಮಾತ್ರ ಪ್ರಕಟಪಡಿಸುವುದಾಗಿದೆ. ಮಹಾಸತಿ ಶಿಲ್ಪದ ಲಕ್ಷಣಗಳು ಈ ಕೆಳಗಿನಂತಿದೆ.

೧. ಕಂಬದಿಂದ ಹೊರಟ ಬಲಗೈ ಎತ್ತಿದ ಶಿಲ್ಪ.

೨. ಕಂಬದಿಂದ ಹೊರಟ ಬಲಗೈ ಎತ್ತಿದ ಶಿಲ್ಪದೊಂದಿಗೆ ಪತಿ–ಸತಿ ಕುಳಿತ ಶಿಲ್ಪ.

೩. ಸತಿಯನ್ನು ಮಾತ್ರ ಒಳಗೊಂಡ ಶಿಲ್ಪ.

೪. ಸತಿ ಪತಿಯರನ್ನು ಒಳಗೊಂಡ ವಿವಿಧ ದೃಶ್ಯಾವಳಿಗಳುಳ್ಳ ಶಿಲ್ಪ.[೨೩]

ಗ್ರಾಮದ ಹೊಳಲಮ್ಮ ದೇವಾಲಯದಲ್ಲಿರುವ ಶಿಲ್ಪವು ಮರಳುಕಲ್ಲಿನಲ್ಲಿದ್ದು ಒಂದು ಮಹಾಸತಿಗಲ್ಲಾಗಿದ್ದು ಮೂರು ಹಂತದಲ್ಲಿದೆ. ಮೊದಲಹಂತದಲ್ಲಿ ಹೊರಾಡುತ್ತಿರುವ ದೃಶ್ಯವಿದೆ. ಮೂವರು ವ್ಯಕ್ತಿಗಳ ಚಿತ್ರವಿದೆ. ಕೈಯಲ್ಲಿ ಖಡ್ಗ, ಗುರಾಣಿಗಳನ್ನು ಹಿಡಿದಿರುವರು ಎರಡನೇಯ ಹಂತದಲ್ಲಿ ಸ್ತ್ರಿಯ ಶಿಲ್ಪವಷ್ಟೇ ಕಾಣಿಸುತ್ತದೆ. ಮೂರನೇಯ ಹಂತದಲ್ಲಿ ಚಾಮರಧಾರೆಯರು ಅಪ್ಸರೆಯರು ಸತಿಯನ್ನು ವಿಮಾನದಲ್ಲಿ ಕೊರಿಸಿಕೊಂಡು ಸ್ವರ್ಗಕ್ಕೆ ವಿಮಾನ ಮತ್ತೊಂದು ಕೈಯಲ್ಲಿ ಚಾಮರವನ್ನು ಹಿಡಿದಿರುವರು. ಶಿಲ್ಪವು ಹಾಳಾಗಿರುವುದರಿಂದ ಸ್ಪಷ್ಟವಾಗಿ ಕಾಣುವುದು. ಶಿಲ್ಪದ ಕಾಲಮಾನ ಕ್ರಿ.ಶ. ಸುಮಾರು ೧೫–೧೬ನೆಯ ಶತಮಾನ.

ಬಳಪದ ಕಲ್ಲಿನಲ್ಲಿ ಇರುವ ಶಿಲ್ಪವು ಕಾಲಭೈರವ ದೇವಸ್ಥಾನದ ಮುಂದೆ ಶಿಲ್ಪವು ಧ್ಯಾನಾಸಕ್ತ ಭಂಗಿಯಲ್ಲಿದೆ. ಎತ್ತರದ ಶಿಲ್ಪದಲ್ಲಿ ಒಂದುವರೆ ಅಡಿ ಕಿವಿಗಳನ್ನು ಅಗಲವಾ ತೋರಿಸಲಾಗಿದೆ. ಕೊರಳಹಾರ, ಕಂಠಸರ, ಭುಜಬಂದಿ, ತೋಳಬಂದಿ ಕೈ ಕಡಗಗಳನ್ನು ಧರಿಸಿದ್ದಾಳೆ. ಕೈಗಳನ್ನು ಸ್ಪಷ್ಟವಾಗಿ ಕೆತ್ತಿರುವುದಿಲ್ಲ ಕಾಲಕಡಗಗಳನ್ನು ಕಂಡರಿಸಲಾಗಿದೆ.

ಪುರುಷ ಶಿಲ್ಪ

ಬಳಪದ ಕಲ್ಲಿನಲ್ಲಿ ಇರುವ ಈ ಶಿಲ್ಪವು ಕಾಲಭೈರವ ದೇವಸ್ಥಾನದ ಮುಂದೆ ಧ್ಯಾನಸಕ್ತ ಭಂಗಿಯಲ್ಲಿ ಆಸೀನವಾಗಿದೆ. ಎರಡು ಅಡಿ ಎತ್ತರವಿರುವ ಶಿಲ್ಪವು ಕಿವಿಯೋಲೆ,

ಕೊರಳಲ್ಲಿ ಕಂಠಹಾರ, ಕೈಗಳಲ್ಲಿ ಕಡಗ, ತೋಳಬಂದಿ, ಸೊಂಟಪಟ್ಟಿ, ಕಾಲುಕಡಗಳನ್ನು ಧರಿಸಿದ್ದಾನೆ. ಮೇಲೆ ಸೂರ್ಯ ಚಂದ್ರರನ್ನು ಕಂಡರಿಸಲಾಗಿದೆ.

ವೇಣುಗೋಪಾಲ ಸ್ವಾಮಿದೇವಾಲಯದ ಪಕ್ಕದಲ್ಲಿರುವ ಶಿಲ್ಪವು ಸರಳವಾಗಿದ್ದು ಒಂದು ಅಡಿಯಿದ್ದು ಬಳಪದ ಶಿಲೆಯಲ್ಲಿದೆ. ಭಕ್ತನು ಸ್ಥಾನಿಕ ಭಂಗಿಯಲ್ಲಿ ಇಷ್ಟ ಲಿಂಗವನ್ನು ಹಿಡಿದಿರುವ ರೀತಿಯಲ್ಲಿದೆ. ಈ ದೇವಸ್ಥಾನದ ಕಂಬದಲ್ಲಿ ಇದೇ ರೀತಿಯ ಶಿಲ್ಪವನ್ನು ಕಂಡರಿಸಲಾಗಿದೆ ಶಿಲ್ಪದಲ್ಲಿ ಎಡಗೈಯಲ್ಲಿ ಲಿಂಗವಿದೆ. ಕಾಲಮಾನ ಕ್ರಿ.ಶ. ೧೬-೧೭ನೇ ಶತಮಾನ.

ವೇಣುಗೋಪಾಲ ಸ್ವಾಮಿ ದೇವಸ್ಥಾನದ ಆವರಣ ಮತ್ತು ಕೊತ್ತಲ ಆಂಜನೆಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ನವಗ್ರಹ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ.

ಶಂಕರಲಿಂಗ ದೇವಾಲಯದ ಆವರಣದಲ್ಲಿ ಹಾಲಸ್ವಾಮಿ ಗದ್ದಿಗೆ ಮಠದಲ್ಲಿ ಕಂಚಿನ ನಾಗಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಪೀಠದ ಮೇಲಿರುವ ಇದು ಇತ್ತೀಚಿಗೆ ನಿರ್ಮಾಣಗೊಂಡಿದೆ.

ಕಾಲಭೈರವ ದೇವಸ್ಥಾನದ ಮುಖಮಂಟಪದ ಎಡಭಿತ್ತಿಯಲ್ಲಿ ಮೂವರು ಸ್ತ್ರೀಯರು ಮೂವರು ಪುರಷ ಭಕ್ತರ ಶಿಲ್ಪಗಳನ್ನು ಉಬ್ಬು ಕೆತ್ತನೆಯಲ್ಲಿ ಕಂಡರಿಸಲಾಗಿದೆ. ಮೂರುಜನ ದಂಪತಿಗಳಂತಿದ್ದಾರೆ. ಒಬ್ಬಬ್ಬರಿಗೆ ಹಿಂಭಾಗದಲ್ಲಿ ಪ್ರಭಾವಳಿ ಇದ್ದು, ಇವರು ಕೈಮುಗಿದು ಸ್ಥಾನಿಕ ಭಂಗಿಯಲ್ಲಿದ್ದಾರೆ.

ಹಿರೇಕೆರೆಯ ತೂಬಿನಲ್ಲಿರುವ ಶಿಲ್ಪವು ಮುಂದಿನ ಭಾಗವನ್ನು ಹೊಂದಿದೆ. ಕೈಮುಗಿದು ನಿಂತಿರುವ ಶಿಲ್ಪದಲ್ಲಿ ವ್ಯಕ್ತಿಯು ತೊಳಬಂದಿ, ಕೈಕಡಗ, ಕಾಲುಕಡಗಗಳನ್ನು ಧರಿಸಿದ್ದಾನೆ. ಮೊಳಕಾಲದವರೆಗೆ ಪಂಚೆಯನ್ನುಟ್ಟು ಕೊರಳಲ್ಲಿ ವಿವಿಧ ರೀತಿಯ ಆಭರಣಗಳನ್ನು ಹಾಕಿದ್ದಾನೆ ಈ ಶಿಲ್ಪವು ಕೆರೆಯನ್ನು ಕಟ್ಟಿಸಿದ ವ್ಯಕ್ತಿಯ ಶಿಲ್ಪವಾಗಿರಬಹುದು.

iv. ಜೈನ ಶಿಲ್ಪಗಳು

ಪ್ರಾಚೀನ ಕರ್ನಾಟಕದಲ್ಲಿ ಸಮಾಧಿ ಮರಣವು ಬಹುಜನ ಜೈನರು ಹಾರೈಸುತ್ತಿದ್ದ ಆದರ್ಶ ಮರಣವಾಗಿತ್ತು. ಸಮಾಧಿ ಮರಣ ಅಥವಾ ಸಲ್ಲೇಖನ ವ್ರತವನ್ನು ಕುರಿತು ರತ್ನಕರಂಡದಲ್ಲಿ ಹೀಗೆ ಹೇಳಲಾಗಿದೆ. ಕ್ಷಾಮಕಾಲದಲ್ಲಿ ಮುಪ್ಪಿನಲ್ಲಿ ವಾಸಿಯಾಗದ ರೋಗ ಬಂದಾಗ ಅವುಗಳಿಗೆ ಇನ್ನು ಪರಿಹಾರವಿಲ್ಲವೆಂದು ಖಚಿತವಾದರೆ ಧಾರ್ಮಿಕ ವಿಧಿಗಳಿಗನುಗುಣವಾಗಿ ಸಾಯುವುದಕ್ಕೆ ಸಲ್ಲೇಖನ ಅಥವಾ ಸಮಾಧಿ ಮರಣ ಎನ್ನುವರು. ಸಮಾಧಿ ಮರಣ ವ್ರತವನ್ನು ಅಂಗೀಕರಿಸಿದವರು ಅನ್ನಪಾನಾದಿಗಳನ್ನು ಎಲ್ಲಾ ರೀತಿಯ ಸ್ನೇಹ, ವೈರಿಸಂಗಗಳನ್ನು ತ್ಯಜಿಸಿ, ತನ್ನ ಕರ್ಮಗಳ ಕುರಿತು ಯೋಚಿಸಿ ಪಶ್ಚಾತ್ತಾಪ ಪಡುತ್ತಾ ಪಂಚ ಪರಮೇಷ್ಠಿಗಳನ್ನು ಧ್ಯಾನಿಸುತ್ತಾ ತನಗೆ ಉತ್ತಮಗತಿ ದೊರೆಯಲೆಂದು ಹಾರೈಸುತ್ತಾ ಪ್ರಾಣತ್ಯಾಗ ಮಾಡಬೇಕು."[38]

ಭಾರತದ ಮೂರ್ತಿ ಶಿಲ್ಪಗಳ ಕೆತ್ತನೆಯು ಪ್ರಾಚೀನಕಾಲದಿಂದಲೂ ನಿರಂತರವಾಗಿದೆ. ಜೈನಧರ್ಮದ ಆಗಮಗಳಲ್ಲಿ ಇಪ್ಪತ್ತು ನಾಲ್ಕು ಜನ ತೀರ್ಥಂಕರರು ಕಾಣುತ್ತಾರೆ. ಶಿಲ್ಪದ ದೃಷ್ಟಿಯಿಂದ ಜೈನ ತೀರ್ಥಂಕರ ಮೂರ್ತಿಗಳಲ್ಲಿ ವೈವಿಧ್ಯತೆ ಕಡಿಮೆ. ಶಿಲ್ಪಗಳಲ್ಲಿ ಹೆಚ್ಚಿನ ಅಲಂಕಾರ ಕುಸುರಿ ಕೆಲಸ ಕಾಣುವುದಿಲ್ಲ. ತೀರ್ಥಂಕರ ಮೂರ್ತಿಗಳು ಎರಡು ಆಸನಗಳಲ್ಲಿರುತ್ತವೆ. ಒಂದನೆಯದು ಕಾರ್ಯತ್ಸರ್ಗ ಅಥವಾ ಖಡ್ಗಾಸನ ಎರಡನೆಯದು ಪದ್ಮಾಸನ, ಈ ಎರಡೂ ಆಸನಗಳ ಮೂರ್ತಿಗಳು ನಗ್ನ ಮೂರ್ತಿಗಳು. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಜೈನ ಬಸದಿಯಿದ್ದು ಅಲ್ಲಿನ ಜೈನ ಶಿಲ್ಪಗಳು ಈ ರೀತಿ ನೊಡಬಹುದು.

ಬಸದಿಯಲ್ಲಿ ಕ್ಷೇತ್ರಪಾಲನ ಶಿಲ್ಪವಿದೆ ಈತನನ್ನು ಬ್ರಹ್ಮಯಕ್ಷ, ಕ್ಷೇತ್ರರಕ್ಷನೆಂತಲೂ ಕರೆಯಲಾಗಿದೆ. ಈತ ಅಶ್ವಾರೂಢನಾಗಿದ್ದು ದ್ವಿಭುಜಧಾರಿಯಾಗಿದ್ದಾನೆ. ಕೈಯಲ್ಲಿ ಖಡ್ಗ, ಕುದುರೆಯ ಲಗಾಮನ್ನು ಹಿಡಿದಿದ್ದಾನೆ. ಈ ರೀತಿಯ ಶಿಲ್ಪಗಳು ಅಪರೂಪ.

ಪ್ರಸ್ತುತ ಅಧ್ಯಯನ ಪ್ರದೇಶದ ಬಸದಿಯಲ್ಲಿ ಆದಿನಾಥನ ಶಿಲ್ಪವಿದೆ. ಪದ್ಮಪೀಠದ ಮೇಲೆ ಕಾಯೋತ್ಸರ್ಗ ಭಂಗಿಯಲ್ಲಿದ್ದಾನೆ. ಭುಜಗಳು ಅಗಲವಾಗಿದ್ದು ತೋಳುಗಳೂ ದಪ್ಪವಾಗಿವೆ. ಕುತ್ತಿಗೆ ಮತ್ತು ಹೊಟ್ಟೆಯ ಬಳಿ ಅರ್ಧವೃತ್ತಾಕಾರದ ಗೆರೆಗಳಿವೆ. ಮುಂಗೈಯನ್ನು ಸ್ವಲ್ಪ ಅಗಲವಾಗಿ ಹಿಡಿಯಲಾಗಿದೆ. ತಲೆಯ ಹಿಂಭಾಗ ಪ್ರಭಾಮಂಡಲವಿದೆ. ಪ್ರಭಮಂಡಲದ ಬದಿಯಲ್ಲಿ ಚಾಲಗಳಿವೆ. ಪ್ರಭಮಂಡಲದ ಮೇಲ್ಭಾಗದಲ್ಲಿ ಅಲಂಕಾರಿಕ ಮುಕ್ಕೊಡೆಯಿದೆ. ಶಿಲ್ಪದ ಇಕ್ಕೆಲಗಳಲ್ಲಿ ಯಕ್ಷ-ಯಕ್ಷಿಣಿಯರಿದ್ದಾರೆ. ಇವರು ಕೈಗಳಲ್ಲಿ ಆಯುಧಗಳನ್ನಿಡಿದು ಆಭರಣ ಭೂಷಿತಾರಿದ್ದಾರೆ. ಶಿಲ್ಪದ ಸುತ್ತಲೂ ಸ್ತಂಭ ಮಕರ ತೋರಣವಿದೆ. ಆದಿನಾಥನ ಕಾಲುಗಳ ಬಳಿ ಕುಳಿತ ಪಾರ್ಶ್ವನಾಥ, ಸುಪಾರ್ಶ್ವನಾಥರ ಕಿರು ಶಿಲ್ಪಗಳಿವೆ.

ಪಾರ್ಶ್ವನಾಥನ ಮತ್ತೊಂದು ಶಿಲ್ಪ ಬಸದಿಯಲ್ಲಿದ್ದ ಪೀಠದ ಮೇಲೆ ಕಾಯೋತ್ಸರ್ಗ ಭಂಗಿಯಲ್ಲಿದ್ದಾನೆ. ಬಿಳಿಗ್ರಾನೈಟ್ ಕಲ್ಲಿನಲ್ಲಿರುವ ಇದು ಸಂಪೂರ್ಣ ನಗ್ನವಾಗಿರುವ ಈತ ನಿರಾಭರಣನಾಗಿದ್ದಾನೆ. ಭುಜಗಳು ಅಗಲವಾಗಿದ್ದು ತೋಳುಗಳು ದಪ್ಪವಾಗಿವೆ. ಕುತ್ತಿಗೆ ಮತ್ತು ಹೊಟ್ಟೆಯ ಬಳಿ ಗೆರೆಗಳಿವೆ. ಈತನ ದೇಹದ ಹಿಂಭಾಗದಲ್ಲಿ ನಾಗ ಸುರುಳಿಯಾಗಿ ಸುತ್ತಿಕೊಂಡು ತಲೆಯ ಮೇಲೆ ತನ್ನ ಏಳು ಏಡೆಗಳನ್ನು ಬಿಚ್ಚಿಕೊಂಡಿದೆ. ಈ ನಾಗನ ಮೇಲೆ ಅಲಂಕಾರಿಕ ಕೊಡೆಯಿದೆ. ಪಾರ್ಶ್ವನಾಥನ ಇಕ್ಕೆಲಗಳಲ್ಲಿ ಯಕ್ಷ, ಯಕ್ಷಿಯರಿದ್ದಾರೆ. ಇವರು ಚತುರ್ಭುಜಧಾರಿಗಳಾಗಿದ್ದು ಸುಖಾಸನದಲ್ಲಿ ಕುಳಿತಿದ್ದಾರೆ. ಕೈಗಳೂ, ಆಯುಧಗಳನ್ನಿಡಿದಿದ್ದಾರೆ. ಶಿಲ್ಪದ ಸುತ್ತಲು ಸ್ತಂಭ ಮಕರ ತೋರಣವಿದೆ. ಸ್ಥಂಭದಲ್ಲಿ ಎಂಟು ಜನ ತೀರ್ಥಂಕರರನ್ನು ತೋರಿಸಲಾಗಿದೆ.

ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಒಂದು ನಿಷಧಿಗಲ್ಲಿದ್ದು ಜೈನ ಬಸದಿಯ ಹಿಂಭಾಗದಲ್ಲಿದೆ ಇದು ಎರಡು ಹಂತದಲ್ಲಿದೆ. ಮೊದಲ ಪಟ್ಟಿಕೆಯಲ್ಲಿ ಇಬ್ಬರು ಭಕ್ತರ ಧ್ಯಾನಸಕ್ತ ಭಂಗಿಯಲ್ಲಿ ಪೀಠದ ಮೇಲೆ ಕುಳಿತಿದ್ದಾರೆ. ಎರಡನೇ ಪಟ್ಟಿಕೆಯಲ್ಲಿ ಜಿನನು ಸ್ಥಾನಿಕ ಭಂಗಿಯಲ್ಲಿ

ನಿಂತಿದ್ದಾನೆ. ಈ ನಿಷಧಿಗಲ್ಲು ಶಾಸನೋಕ್ತವಾಗಿದ್ದು ಯಾರು ಸಲ್ಲೇಖನ ವ್ರತ ಕೈಗೊಂಡು ಮರಣ ಹೊಂದಿದ್ದಾರೆ ಎಂಬುದರ ವಿವರವಿದೆ. ಆದರೆ ಶಾಸನವು ಭಗ್ನ ಗೊಂಡಿರುವುದರಿಂದ ಇಲ್ಲಿಯ ವಿವರ ಅಪೂರ್ಣವಾಗಿದೆ.

ಅಡಿ ಟಿಪ್ಪಣಿ

೧. ಪ್ರತಿಮಾ ಎಂದರೆ ಹೋಲುವಂಥದ್ದು, ಅನುಸರಿಸಿದ್ದು, ಪ್ರತಿಕೃತಿ–ಪ್ರತಿಕೃತಿ ಅಂದರೆ ಒಂದಕ್ಕೆ ಪ್ರತಿಯಾಗಿ ಮತ್ತೊಂದು ಮಾಡಿದ್ದು, ವಿಗ್ರಹ–ವಿ–ಗ್ರಹ ಅಂದರೆ ಪ್ರತ್ಯೇಕಿಸಿದ ಆಕಾರ ಎಂಬ ಅರ್ಥವನ್ನು ನೀಡುತ್ತದೆ.

೨. ರಾಜಾರಾಂ ಹೆಗಡೆ, ೧೯೯೨, **ಭಾರತೀಯ ಮೂರ್ತಿಶಾಸ್ತ್ರ, ಧರ್ಮ ದೇವತಾರಾಧನೆ ಹಾಗೂ ಸಾಂಸ್ಕೃತಿಕ ರಾಜಕೀಯದ ಐತಿಹಾಸಿಕ ವಿಶ್ಲೇಷಣೆ, ಅರಿವು ಬರಹ,** (ಸಂ)–೩, ಭಾಗ–೧ ಪು–೩೫–೩೬.

೩. ಫಣೇಂದ್ರನಾಥಭೋಸ್, ೧೯೭೮, **ಪ್ರಿನ್ಸಿಪಲ್ ಆಫ್ ಇಂಡಿಯನ್ ಶಿಲ್ಪಶಾಸ್ತ್ರ,** ಪು–೮.

೪. ರಾಮಯ್ಯಂಗಾರ್, ಹೆಚ್.ಕೆ, ಕೆಲವು **ಧಾರ್ಮಿಕ ಕರ್ತವ್ಯಗಳು,** ಪು–೮೦.

೫. ಅದೇ, ಪು–೭೭.

೬. ಅಪರ್ಣ ಕೂ.ಸ., ೧೯೯೯, **ದೇವಾಲಯ ವಾಸ್ತುಶಿಲ್ಪ ಪರಿಚಯ,** ಪು–೧

೭. ಚಿದಾನಂದಮೂರ್ತಿ ಎಂ, ೨೦೦೨, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಪು–೧೯೭

೮. ಸತೀಶ ಕೆ, ೨೦೦೪, **ವಿಜಯನಗರ ಕಾಲದ ಶೈವದೇವಾಲಯಗಳು,** (ಅಪ್ರಕಟಿತ ಪಿ.ಎಚ್.ಡಿ ಪ್ರಬಂದ) ಪು–೮೦.

೯. ಗೋಪಾಲ, ಬಾ.ರಾ, ೧೯೯೩, **ಕರ್ನಾಟಕದ ಕಲೆಗಳು, (ಸಂ)–೪,** ಪು–೨೧.

೧೦. ಪುಟ್ಟಣ್ಣ ಎಂ ಎಸ್, ೧೯೨೪, **ಚಿತ್ರದುರ್ಗದ ಪಾಳೆಯಗಾರರು,** ಪು–೫.

೧೧. ರಂಗಸ್ವಾಮಿ ಡಿ ಟಿ, ೨೦೦೨, **ಹೊಳಲ್ಕೆರೆ ತಾಲೂಕಿನ ಪ್ರಸಿದ್ಧ ದೇವಾಲಯಗಳ ಒಂದು ಸಾಂಸ್ಕೃತಿಕ ಅಧ್ಯಯನ,** ಪು–೨೭.

೧೨. ಪ್ರಭಾಕರ್.ಎಂ.ಎನ್,೧೯೯೯, **ದೇವಾಲಯಗಳ ವಾಸ್ತು ಚಂದ್ರಿಕೆ,** ಪು–೪.

೧೩. ಫಣೇಂದ್ರನಾಥಭೋಸ್, ಪೂರ್ವೋಕ್ತ, ಪು–೮–೯.

೧೪. ಪ್ರಭಾಕರ್.ಎಂಎನ್, ಪೂರ್ವೋಕ್ತ, ಪು–೩.

೧೫. ಕರ್ನಾಟಕ ಚರಿತ್ರೆ, ಸಂಪುಟ–೧, ಪು–೩೧೩.

೧೬. ರಾಮಚಂದ್ರ ರಾವ್.ಎಸ್.ಕೆ, **ಮೂರ್ತಿಶಿಲ್ಪ ನೆಲೆ–ಹಿನ್ನೆಲೆ,** ಪು–೧೨೬.

೧೭. ಗೋಪಿನಾಥ ರಾವ್.ಟಿ.ಎ, **ಎಲ್ಮೆಟ್ಸ್ ಆಫ್ ಹಿಂದೂ ಐಕೊನೊಗ್ರಾಫಿ. ಸಂಪುಟ–೨,** ಭಾಗ–೧, ಪು–೧೭೭.

೧೮. ರಾಮಚಂದ್ರರಾವ್.ಎಸ್.ಕೆ, ಪೂರ್ವೋಕ್ತ, ಪು–೧೦೬

೧೯. ಜಯಮ್ಮ. ಬಿ, **ಧಾರವಾಡ ಜಿಲ್ಲೆ ಪುರಾತತ್ವ,** ಪು–೨೦೪.

೨೦. ಕರ್ನಾಟಕ ಚರಿತ್ರೆ, ಸಂಪುಟ–೧, ಪು–೩೧೪.

೨೧. ರಾಮಚಂದ್ರರಾವ್.ಎಸ್.ಕೆ, ಪೂರ್ವೋಕ್ತ, ಪು–೧೨೦–೨೧.

೨೨. ಸುರೇಶ್.ನಿ., ೨೦೦೯, **ಚಿತ್ರದುರ್ಗ ದಾವಣಗೆರೆ ಜಿಲ್ಲೆಗಳ ದೇವಾಲಯ,** ಪು–೨೩೦.

೨೩. ಶೇಠ.ಬಿ.ಎಸ್, **ಕರ್ನಾಟಕದಲ್ಲಿ ಸತಿಪದ್ಧತಿ,** ಪು–೨೯೭.

೨೪. ಚಿದಾನಂದ ಮೂರ್ತಿ.ಎಂ, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಪು–೯೩೭.

ಅಧ್ಯಾಯ–೬

ಕೆರೆ–ಕಟ್ಟೆ ಬಾವಿಗಳು

ಮಾನವನ ಉಗಮ ಮತ್ತು ವಿಕಾಸದ ಸುದೀರ್ಘ ಇತಿಹಾಸವನ್ನು ಗಮನಿಸಿದಾಗ ತಿಳಿಯುವ ವಿಷಯವೇನೆಂದರೆ ಮಾನವನು ಆನಾದಿ ಕಾಲದಿಂದಲೂ ಭೌತಿಕವಾಗಿ ಹಾಗೂ ಮಾನಸಿಕವಾಗಿ ವಿಕಾಸ ಹೊಂದುವುದರೊಂದಿಗೆ ಪರಿಸರದಲ್ಲಿ ಆಗುತ್ತಿರುವ ಕಠಿಣ ಸಮಸ್ಯೆಗಳನ್ನು ಸಹ ಎದುರಿಸುತ್ತಾ ಬಂದಿದ್ದಾನೆ. ಮನುಷ್ಯನು ಭೂಮಿಯ ಮೇಲೆ ಕಾಣಿಸಿಕೊಂಡಾಗಿನಿಂದಲೂ ನೀರಿನ ಆಸರೆಗಳಲ್ಲೇ ಜೀವಿಸಿರುವುದಕ್ಕೆ ಆ ಭಾಗದಲ್ಲಿ ದೊರೆತಿರುವ ಆದಿಮಾನವನ ನೆಲೆಯ ಕುರುಹುಗಳೇ ಸಾಕ್ಷಿಗಳಾಗಿವೆ. ಶಿಲಾಯುಗದ ಮಾನವನು ಮಳೆಯ ನೀರನ್ನು ದೈನಂದಿನ ಮತ್ತು ಕೃಷಿ ಬಳಕೆಗಾಗಿ ಕೆಲವೊಂದು ಮಾರ್ಗೋಪಾಯಗಳನ್ನು ಕಂಡುಕೊಂಡನು.[೧] ಪ್ರಮುಖವಾಗಿ ಮಾನವನು ಮೊದಲಿಗೆ ವ್ಯವಸಾಯವನ್ನು ಪ್ರಾರಂಭಿಸಿದಾಗ ಅವನು ಮಳೆಯನ್ನೆ ನಂಬಿದ್ದ. ಹಾಗಾಗಿ ವಿಪುಲವಾದ ನೀರು ಸಿಗುವ ಜಾಗವಾಗಿದ್ದ ನದಿದಂಡೆಗಳಲ್ಲಿ ಆಶ್ರಯಿಸಿದ್ದನು. ತಾಮ್ರಯುಗ ಹಾಗೂ ಬೃಹತ್ ಶಿಲಾಯುಗದಲ್ಲಿ ಪ್ರಾಕೃತಿಕವಾಗಿ ಬೆಟ್ಟಗುಡ್ಡಗಳಿಂದ ಬರುವ ಮಳೆಯ ನೀರಿಗೆ ಕೆಳಭಾಗದಲ್ಲಿ ಅಡ್ಡಕಟ್ಟೆ ಹಾಕಿ ನೀರನ್ನು ಸಂಗ್ರಹಿಸಿ ನಿತ್ಯ ಬಳಕೆಗೆ ಹಾಗೂ ವ್ಯವಸಾಯಕ್ಕೆ ಬಳಸಿರುವ ಹಲವಾರು ಉದಾಹರಣೆಗಳು ದಕ್ಷಿಣ ಭಾರತದಲ್ಲಿ ಉತ್ಖನನಗೊಂಡ ಬೃಹತ್ ಶಿಲಾಯುಗದ ನೆಲೆಗಳಲ್ಲಿ ಪತ್ತೆಯಾಗಿದೆ.

ಭಾರತದ ಪ್ರಾಚೀನ ನಾಗರಿಕತೆಯಾದ ಹರಪ್ಪ ಸಂಸ್ಕೃತಿಯ ಅನೇಕ ನೆಲೆಗಳಲ್ಲಿ ನಡೆಸಿದ ಉತ್ಖನನದಿಂದ ಪ್ರಾಚೀನ ನೀರಾವರಿ ವ್ಯವಸ್ಥೆಯ ಪುರಾವೆಗಳೂ ದೊರೆತಿವೆ.[೨] ಮೌರ್ಯರ ಕಾಲದಲ್ಲಿ ನೀರಾವರಿ ಕುರುಹುಗಳನ್ನು ಅರಿಯಲು ಕ್ರಿ.ಶ. ೧೫೦ರ ರುದ್ರಧಾಮನ ಗಿರ್‌ನಾರ್ ಶಾಸನವು ಸಹಕಾರಿಯಾಗಿದ್ದು ಇದು ಸೌರಾಷ್ಟ್ರದ ಜುನಾಘಡದ 'ಸುದರ್ಶನ ಸರೋವರ'ದ ಬಗ್ಗೆ ಮಾಹಿತಿ ನೀಡುತ್ತದೆ.[೩] ಮಳೆಯ ನೀರನ್ನು ಸಂಗ್ರಹಿಸಿ ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರ ಪೂರೈಕೆಯಲ್ಲಿ ಹೆಚ್ಚುವರಿ ಭೂಭಾಗಗಳನ್ನು ವ್ಯವಸಾಯಕ್ಕೆ ಒಳಪಡಿಸಿಕೊಂಡು ಹೆಚ್ಚು ವ್ಯವಸಾಯ ಕ್ಷೇತ್ರಕ್ಕೆ ನೀರನ್ನು ಕೃತಕ ಮೂಲವಾದ ಕೆರೆಗಳಿಂದ ಪೂರೈಸಿಕೊಳ್ಳುತ್ತಿದ್ದನು.

ಕೆರೆಗಳು ಪ್ರಾಚೀನ ಕರ್ನಾಟಕದ ನೀರಾವರಿ ಸಾಧನಗಳಲ್ಲಿ ಅತ್ಯಂತ ಪ್ರಮುಖವಾದವು. ಕನ್ನಡ ನಾಡಿನಲ್ಲಿ ಕೆರೆ ನಿರ್ಮಾಣದ ಇತಿಹಾಸ ಕದಂಬ ಪೂರ್ವದಲ್ಲೇ ಇತ್ತೆಂಬುದು ತಿಳಿದುಬರುವುದು. ಬನವಾಸಿ ನಗರದಲ್ಲಿ ಕ್ರಿ.ಶ. ಆರಂಭದ ಶತಮಾನದಲ್ಲೇ ಶಿವಸ್ಕಂದ ನಾಗಶ್ರೀಯ ಕಾಲದಲ್ಲಿ ಅತೀ

ಪ್ರಾಚೀನ ನೀರಾವರಿ ಯೋಜನೆ ಇದ್ದಿತ್ತೆಂದು ಶಿಲಾಶಾಸನಗಳಿಂದ ತಿಳಿದುಬರುತ್ತದೆ. ಅದರೊಂದಿಗೆ ಕರ್ನಾಟಕದ ಪ್ರಾಚೀನ ಕೆರೆಗಳಲ್ಲಿ ಬಹುಮುಖ್ಯವಾದ ಚಂದ್ರವಳ್ಳಿ ಕೆರೆಯನ್ನು ಮಯೂರವರ್ಮನು ಬಲಪಡಿಸಿದನೆಂದು, ಆ ಕೆರೆಯ ಬಳಿಯ ಶಾಸನದಿಂದ ತಿಳಿದುಬರುವುದು.[೪] ವಿಶೇಷವಾಗಿ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಅಸಂಖ್ಯಾತ ಕೆರೆಗಳೂ ನಿರ್ಮಾಣಗೊಂಡಿದ್ದು, ಇವರ ಕಾಲವನ್ನು ವಿದ್ವಾಂಸರು ಕೆರೆಗಳ ಸುವರ್ಣಯುಗವೆಂದು ಕರೆದಿದ್ದಾರೆ.[೫] ವಿಜಯನಗರ ಕಾಲದಲ್ಲಿ ಕೆರೆ ಮತ್ತು ಕಟ್ಟೆಗಳನ್ನು ಕಟ್ಟಿಸಿರುವುದು ಕಂಡುಬರುತ್ತದೆ. ವಿಜಯನಗರ ಕಾಲದ ಕ್ರಿ.ಶ. ೧೪೧೧ರ ಶಾಸನದ.[೬]

ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸು!
ಜ್ಜೆಳಿಯೆಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಂದು ನಂಬಿದ!
ಗ್ರ್ಗಳೆವೆಟ್ಟಾಗಿರು ಶಿಷ್ಟರು ಪೊರೆಯೆನ್ನುತ್ತಿಯೆಂ ತೆಲ್ಲವಂ ಪಿಂದೆ ತಾ!
ಯೆಳೆದಳ್ವಾಲೆಳೆ ವಂದು ತೊಟ್ಟು ಕಿವಿಯೊಳ್ಂ ಲಕ್ಷ್ಮೀಧಾರಾಮಾತ್ಯನಾ!

ಎಂಬುದಾಗಿ ಉಲ್ಲೇಖಿಸಿದ್ದು ವಿಜಯನಗರದ ಅರಸು ಪ್ರೌಢಪ್ರತಾಪ ದೇವರಾಯನ ಮಂತ್ರಿ ಲಕ್ಷ್ಮೀಧರನು ಕೂಸಾಗಿದ್ದಾಗ ಅವನ ತಾಯಿ ಹಾಡಿ ಹಾಲೆರೆಯುತ್ತಿದ್ದಳೆಂದು ಈ ಶಾಸನದಿಂದ ತಿಳಿದು ಬರುವುದು. ಇದರಿಂದ ವಿಜಯನಗರ ಕಾಲದಲ್ಲಿ ನೀರಾವರಿ ವ್ಯವಸ್ಥೆ ಕೆರೆಯನ್ನು ಕಟ್ಟಿಸುವುದು ಮತ್ತು ಬಾವಿಗಳನ್ನು ತೋಡಿಸುವುದು ಅತಿಮುಖ್ಯವಾದ ಕೆಲಸವಾಗಿತ್ತೆಂದು ಇದರಿಂದ ತಿಳಿದು ಬರುತ್ತದೆ.

ಕೆರೆ ಕಟ್ಟೆಗಳ ನಿರ್ಮಾಣ

ಸಾರ್ವಜನಿಕ ಕೆಲಸ ಕಾರ್ಯಗಳಲ್ಲಿ ಕೆರೆಯ ನಿರ್ಮಾಣ ಬಹಳ ಮಹತ್ವದ ಸ್ಥಾನ ಪಡೆದಿದೆ. ಹಿಂದಿನ ಕಾಲದಲ್ಲಿ ತಾಯಿಯಾದವಳು ತನ್ನ ಮಗುವಿಗೆ ತೊಡೆಯ ಮೇಲಿರಿಸಿಕೊಂಡು ಹಾಲುಣಿಸುವಾಗ ಕಿವಿಯಲ್ಲಿ ಕೆರೆಯನ್ನು ಕಟ್ಟಿಸು ಬಾವಿಯನ್ನು ತೋಡಿಸು ಎಂದು ಸಾರ್ವಜನಿಕವಾಗಿ ಧರ್ಮ ಕಾರ್ಯಗಳನ್ನು ಮಾಡುವಂತೆ ಪ್ರಚೋದಿಸುತ್ತಿದ್ದುದು ತಿಳಿದುಬರುತ್ತದೆ. ಕೆರೆಯನ್ನು, ಬಾವಿಯನ್ನು ನಿರ್ಮಾಣ ಮಾಡುವುದು ಸುಲಭದ ಕೆಲಸವೇನೂ ಆಗಿರಲಿಲ್ಲ. ಹಾಗಾಗಿ ರಾಜ ಅಥವಾ ಅವನ ಕೈ ಕೆಳಗಿನ ಅಧಿಕಾರಿಗಳು, ಶ್ರೀಮಂತರು ಹಾಗೂ ಊರಿನ ಅಥವಾ ಗ್ರಾಮದ ಜನರೆಲ್ಲೂ ಒಟ್ಟಾಗಿ ಸೇರಿ ಇಂತಹ ಕೆಲಸ ಮಾಡುತ್ತಿದ್ದರು.

ಭಾರತದಂತಹ ರಾಷ್ಟ್ರಗಳಲ್ಲಾಗುವ ಅತಿವೃಷ್ಠಿ, ಅನಾವೃಷ್ಠಿಯಂತಹ ಮಳೆಯನ್ನು ಆಧಾರಿಸಿ ವ್ಯವಸಾಯ ಮಾಡುವುದು ಕಷ್ಟಸಾಧ್ಯವೆ ಸರಿ. ಹಾಗಾಗಿ ಮಳೆಯ ನೀರನ್ನು ಶೇಖರಿಸಿ, ಕಾಲಾಂತರದಲ್ಲಿ ಕೆರೆಗಳು ಮಾನವನಿಗೆ ರಾಜಕೀಯ, ಆರ್ಥಿಕ ಸಾಮಾಜಿಕ, ಧಾರ್ಮಿಕವಾಗಿ ಬಹುಮಹತ್ವದ ಪಾತ್ರವಹಿಸಿರುವುದು ಕಂಡುಬರುತ್ತದೆ. ಅಲ್ಲದೆ ರಾಜ್ಯದ ಆರ್ಥಿಕ ಪರಿಸ್ಥಿತಿಯ ಸುಧಾರಣೆಗಾಗಿ ಪ್ರಮುಖ ಪಾತ್ರವಹಿಸುತ್ತಿದ್ದರಿಂದ ರಾಜನ ಬೊಕ್ಕಸ ತುಂಬುತ್ತಿತ್ತು. ಆಗಾಗಿ ಕೆರೆಗಳ ನಿರ್ಮಾಣಕ್ಕೆ

ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿತ್ತು ಕೆರೆಗಳ ನಿರ್ಮಾಣವಾದ ನಂತರ ನೀರಾವರಿಯಿಂದ ಬರಬಹುದಾದ ಉತ್ಪತ್ತಿಯ ಕೆಲ ಅಂಶವನ್ನು ಕೆರೆ ಕಟ್ಟಿಸಿದವನಿಗೆ ರಾಜನು ಕೊಡುಗೆಯಾಗಿ ನೀಡುತ್ತಿದ್ದನು. ಜೊತೆಗೆ ಕೆರೆಗಳನ್ನು ಕಟ್ಟಿಸುವುದಲ್ಲದೆ. ಕೆರೆಗಳು ಹೂಳು ತುಂಬಿ ಮುಚ್ಚಿಹೋಗದಂತೆ ವ್ಯವಸ್ಥೆ ಮಾಡುವುದು ಒಡೆದು ಹೋದ ಕೆರೆಯನ್ನು ಜೀರ್ಣೋದ್ಧಾರ ಕೈಗೊಳ್ಳಲು ಕಠಿಣ ಕ್ರಮ ಕೈಗೊಳ್ಳುತ್ತಿದ್ದನು. ಹೀಗೆ ಕೆರೆಗಳ ರಚನೆ ಅವುಗಳ ನಿರ್ವಹಣೆ ಮತ್ತು ಜೀರ್ಣೋದ್ಧಾರ ಕಾರ್ಯಗಳಿಗೆ ಲೋಪವಾಗದಂತೆ ಹಿಂದಿನ ಆಳರಸರು ವ್ಯವಸ್ಥೆಗೆ ಗಮನ ಕೊಡುತ್ತಿದ್ದರೆಂಬುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ. ಹೊಳಲ್ಕೆರೆಯಲ್ಲಿ ಮೂರು ಕೆರೆಗಳಿದ್ದು ಅವುಗಳನ್ನು ಕೆಳಗಿನಂತೆ ವಿಶ್ಲೇಷಿಸಲಾಗಿದೆ.

೧. ಹಿರೇಕೆರೆ

ಹೊಳಲ್ಕೆರೆಯಲ್ಲಿ ಹಿರೇಕೆರೆಯು ಪ್ರಮುಖವಾಗಿದೆ. ಇದು ಶಿವಮೊಗ್ಗ ಹೆದ್ದಾರಿಯ ರಸ್ತೆಯಲ್ಲಿ ಚಿಕ್ಕಜಾಜೂರಿಗೆ ಹೋಗುವ ಮಾರ್ಗದಲ್ಲಿದೆ. ಇದರಲ್ಲಿ ಮೂರು ತೂಬುಗಳಿವೆ. ಎರಡು ತೂಬುಗಳು ಎರಡು ಕಲ್ಲುಗಳನ್ನು ನೆಟ್ಟು ಮಧ್ಯೆ ಒಂದು ಕಲ್ಲು ಇಟ್ಟು ಅದರಲ್ಲಿ ತೂಬು ಅಳವಡಿಸಲಾಗಿದೆ. ಇದರ ಆಚರಣೆ ನಂಬಿಕೆ ಎಂದರೆ ಹೊಳಲ್ಕೆರೆ ಪಟ್ಟಣದ ಲಿಂಗಾಯತ ಮನೆತನದ ಹೆಣ್ಣು ಮಗಳಾದ ಹೊಳಲಮ್ಮನ ನೆನಪಿಗಾಗಿ ಈ ಕೆರೆಯನ್ನು ಕಟ್ಟಿಸಲಾಗಿದೆ. ಮಳೆ ಬಾರದೆ ಇರುವಾಗ ಈ ಕೆರೆಯ ನೀರನ್ನು ಪ್ರಸನ್ನ ಗಣಪತಿಗೆ ೧೦೧ ಕೊಡವನ್ನು ಹಾಕಿ ಅಭಿಷೇಕ ಮಾಡಿದರೆ ಮಳೆ ಬರುತ್ತದೆ ಎನ್ನುವ ನಂಬಿಕೆ ಇದೆ. ಇದರ ವಿಸ್ತೀರ್ಣ ಪಹಣಿಯಲ್ಲಿ ೨೪೪ ಎಕರೆ ೧೩ ಗುಂಟೆ ಹೊಂದಿದೆ. ಇಂದು ಒತ್ತುವರಿಯಾಗಿದ್ದು ಸುಮಾರು ೧೦೦ ಎಕರೆ ಮಾತ್ರ ಉಳಿದುಕೊಂಡಿದೆ. ಈ ಕೆರೆಯ ತೂಬು ಏರಿಯಿಂದ ೧೦-೧೫ ಮಿ.ಮಿ. ದೂರವಿದೆ. ತೂಬಿಗೆ ನಾಲ್ಕು ಕಲ್ಲು ಕಂಬ ನೆಟ್ಟು ಅದರ ಮೇಲೆ ಒಂದು ಕಲ್ಲು ಚಪ್ಪಡಿ ಹಾಸಿರುವುದನ್ನು ಕಾಣುತ್ತೇವೆ. ಮತ್ತೊಂದು ತೂಬಿನಲ್ಲಿ ಒಬ್ಬ ವ್ಯಕ್ತಿಯ ಶಿಲ್ಪವಿದೆ. ಆದರೆ ಅವನ ತಲೆಯು ಕಂಡುಬರುವುದಿಲ್ಲ ಅವನು ಕೈಮುಗಿದು ನಿಂತಿರುವ ರೀತಿ ಇದೆ. ಕೆರೆಯ ಏರಿಯು ಕಲ್ಲು, ಮಣ್ಣುಗಳಿಂದ ಕಟ್ಟಲ್ಪಟ್ಟಿದೆ. ಪ್ರಸ್ತುತ ಕೆರೆಯಲ್ಲಿ ಜಾಲಿ ಮರಗಳು ತುಂಬ ಬೆಳೆದಿವೆ, ಏರಿಯ ಮೇಲೆ ನಾಗಶಿಲ್ಪವನ್ನು ಗಾರೆ(ಸಿಮೆಂಟ್)ಯಿಂದ ಮಾಡಿಸಿಟ್ಟಿರುವುದು ಕಂಡು ಬಂದಿದೆ. ಇದು ಪಟ್ಟಣದಲ್ಲಿ ಮೊದಲ ಕೆರೆ ಮತ್ತು ದೊಡ್ಡ ಕೆರೆ ಆಗಿದೆ. ಈ ಕೆರೆಗೆ ಊರಿನ ಶ್ಯಾನಭೋಗರು ಹಿಂದೆ ಜಮೀನನ್ನು ದಾನವಾಗಿ ಕೊಟ್ಟಿರುವುದು ಕಂಡುಬರುತ್ತದೆ ಶಾಸನದಲ್ಲಿ ದಾನದತ್ತಿ ಬಿಟ್ಟಿರುವುದು ಕೆರೆಯ ಬಗ್ಗೆ ಉಲ್ಲೇಖವಿದೆ.

೨. ಹೊನ್ನೆಕೆರೆ

ಹೊಳಲ್ಕೆರೆ ಪಟ್ಟಣದಲ್ಲಿನ ಮತ್ತೊಂದು ಕೆರೆ ಹೊನ್ನೆಕೆರೆಯಾಗಿದೆ. ಇದು ಊರಿನ ಕೋಟೆಗೆ ಹೊಂದಿಕೊಂಡು ಕೊತ್ತಲ ಆಂಜನೇಯನ ದೇವಾಸ್ಥಾನದ ಪಕ್ಕದಲ್ಲಿದೆ. ಇದು ಒಂದು ತೂಬು ಒಂದು ಬಾವಿಯನ್ನು ಒಳಗೊಂಡಿದೆ. ಈ ಕೆರೆಯ ಹಿಂದೆ ಕಾಲಭೈರವನ ದೇವಾಲಯವಿದೆ. ಪಕ್ಕದಲ್ಲಿ ಒಂದು ಪುಷ್ಕರಣಿಯಿದ್ದು ಇದಕ್ಕೆ ಈ ಕೆರೆಯ ನೀರು ಬರುತ್ತದೆ. ಈ ಪುಷ್ಕರಣಿಯ ನೀರು ತುಂಬಾ

ಪವಿತ್ರ ಇದರ ನೀರನ್ನು ಗಂಗಪೂಜೆಗೆ, ಮನೆಕಟ್ಟಲು ಪ್ರತಿಯೊಂದು ಕಾರ್ಯಕ್ಕೆ ಪಟ್ಟಣದ ಜನಗಳು ಬಳಸುವರು. ಇವು ಸಿಹಿ ನೀರಾಗಿದ್ದು ಪವಿತ್ರ ಎನ್ನುತ್ತಾರೆ. ಊರಿನ ಲಿಂಗಾಯತ ಕುಟುಂಬದ ಮಹಿಳೆ ಹೊಳಲಮ್ಮನ ನೆನಪಿಗಾಗಿ ಕಟ್ಟಿಸಲಾಗಿದೆ. ಇದರ ವಿಸ್ತೀರ್ಣವು ಪಹಣೆಯಲ್ಲಿ ೬೩ ಎಕರೆ ೩ ಗುಂಟೆ ಇದೆ. ಈಗ ಸುಮಾರು ೪೦ ಎಕರೆ ಇರಬಹುದು. ಕೆರೆಗೆ ಹೊಂದಿಕೊಂಡು ಬಾವಿ ಇದೆ.

ಈ ಕೆರೆಯ ನೀರಿನ ಬಗ್ಗೆ ಸ್ಥಳೀಯರು ಅಂಗೈ ನೀರು ತುಂಬಿದರೆ ಹೊನ್ನೆಕೆರೆಗೆ ಹೋಗುವುದು ಎನ್ನುತ್ತಾರೆ. ಈ ಕೆರೆಯ ಏರಿಯು ಕಲ್ಲು-ಮಣ್ಣುಗಳಿಂದ ಮಾಡಲಾಗಿದ್ದು ಇದರ ಏರಿಯ ಮೇಲೆ ವಾಹನಗಳು ಸಂಚರಿಸಬಹುದು. ಪ್ರಸ್ತುತ ಕೆರೆಯಲ್ಲಿ ಹೂಳು ತುಂಬಿದ್ದು ನಿರ್ವಹಣೆಯಿಲ್ಲದೆ ಹಾಳಾಗಿದೆ. ಕೆರೆಯ ತುಂಬಾ ಜಾಲಿ ಮರಗಳು ಬೆಳೆದಿದ್ದು ಇದರ ಅನುಕೂಲವನ್ನು ಪಡೆಯುತ್ತಿಲ್ಲ.

೩. ಕೆಸರುಕಟ್ಟೆ

ಹೊಸದುರ್ಗಕ್ಕೆ ಹೋಗುವ ಮಾರ್ಗದಲ್ಲಿ ರಸ್ತೆಗೆ ಹೊಂದಿಕೊಂಡಂತಿದೆ. ಇದಕ್ಕೆ ಮೊದಲು ಊರಿನ ಕೊಳೆನೀರು ಬಂದು ಇಲ್ಲಿ ನಿಲ್ಲುತ್ತಿತ್ತು ಅದಕ್ಕೆ ಸುತ್ತಾ ಕಟ್ಟೆಯನ್ನು ಕಟ್ಟಿದ್ದಾರೆ ಈಗ ತುಂಬಾ ಹಾಳಾಗಿದೆ. ಕೆರೆಯಲ್ಲಿ ಜಾಲಿಯ ಮರಗಳು ಬೆಳೆದಿವೆ ಹಾಗೂ ಊರಿನ ಕಾಲುವೆ ನೀರು ಇಲ್ಲಿಗೆ ಬಂದು ಸೇರುತ್ತದೆ ಅದಕ್ಕೆ ಕೆಸರು ಕಟ್ಟೆ ಎನ್ನುವರು. ಇದರ ಊಳು ತೆಗೆಯುವ ಕೆಲಸವೇ ನಡೆದಿಲ್ಲ ನಿರ್ವಹಣೆಯು ಹೆಚ್ಚಿಗೆ ಮಾಡುತ್ತಿಲ್ಲ ಇದಕ್ಕೆ ಎದುರಿಗೆ ಒಂದು ಚೌಡಮ್ಮ ದೇವಿಯ ಚಿಕ್ಕ ಗುಡಿ ಇದೆ. ಇದಕ್ಕೆ ಹೊಂದಿಕೊಂಡು ಎಡಕ್ಕೆ ಒಂದು ಅಡಿಕೆ ತೋಟವಿದೆ. ಉತ್ತರಕ್ಕೆ ಮಸಿದಿಯಿದೆ ಕಟ್ಟೆಯ ದಕ್ಷಿಣ ಕಡೆ ಖಾಸಗಿ ಬಸ್ಸು ನಿಲ್ದಾಣವಿದೆ, ಇದರ ವಿಸ್ತೀರ್ಣ ಪಹಣಿಯಲ್ಲಿ ೫೨ ಎಕರೆ ೪ ಗುಂಟೆ ಇದೆ ಆದರೆ ಈಗ ೧೫ ರಿಂದ ೨೦ ಎಕರೆಯಿದೆ.

ಕಲ್ಯಾಣಿ-ಬಾವಿ

ಕಾಲಭೈರವ ದೇವಸ್ಥಾನದ ಪಕ್ಕದಲ್ಲಿ ಇರುವ ಕಲ್ಯಾಣಿಯು ಈ ಪಟ್ಟಣದಲ್ಲಿ ತುಂಬಾ ಪ್ರಸಿದ್ಧವಾಗಿದೆ. ಇದನ್ನು ಸೀಹಿ ನೀರಿನ ಹೊಂಡ ಎಂದು ಸ್ಥಳೀಯವಾಗಿ ಕರೆಯುತ್ತಾರೆ. ಇದರಿಂದ ಗ್ರಾಮದ ಎಲ್ಲಾ ಶುಭ ಕಾರ್ಯಗಳಿಗೆ ಬಳಸುತ್ತಾರೆ. ಹೊಸದಾಗಿ ಮನೆ ಕಟ್ಟಬೇಕಾದರೆ ಪಾಯತೋಡಲು, ವಧು-ವರರಿಗೆ ನೀರು ಹಾಕಲು, ಮಕ್ಕಳ ಕೂದಲು ತೆಗಿಸಲು ಹೀಗೆ ಹಲವಾರು ಕೇಲಸಗಳಿಗೆ ಬಳಸುತ್ತಾರೆ. ಇದರ ಸುತ್ತಲೂ ಕಲ್ಲಿನಿಂದ ಮಾಡಿದ ಮೆಟ್ಟಿಲುಗಳಿದ್ದು ಈಗ ಆಳಾಗಿವೆ. ಇದರ ಪಕ್ಕದಲ್ಲಿಯೇ ಹೋನ್ನೆಕೆರೆಯಿದ್ದು ಇದು ತುಂಬಿದರೆ ಕಲ್ಯಾಣಿಗೆ ನೀರು ಬರುತ್ತದೆ ಎಂದು ಸ್ಥಳೀಯರು ಹೇಳುತ್ತಾರೆ. ಕಾಲಭೈರವ ದೇವಸ್ಥಾನದ ಪಕ್ಕದಲ್ಲಿ ಒಂದು ಕಲ್ಯಾಣಿಯಿದ್ದು ಸುಸ್ಥಿತಿಯಲ್ಲಿದೆ.

ಒಂಟಿ ಕಂಬ ಮಠದ ಎಡಬದಿಯಲ್ಲೇ ಅದರೆ ಪಶ್ಚಿಕ್ಕೆ, ಅಪೂರ್ವ ಕಲೆಗಾರಿಕೆಯ ಒಂದು ಸುಂದಾರ ಕಲ್ಯಾಣಿ ಇದೆ. ಇದು ಸಾಕಷ್ಟು ಸುಸ್ಥಿತಿಯಲ್ಲಿದ್ದು ಇದಕ್ಕೆ ಮೂರು ಪಾರ್ಶ್ವಗಳಲ್ಲಿ ಇಳಿದು ಹತ್ತಲು ಮೆಟ್ಟಿಲುಗಳನ್ನೂ ಪ್ರವೇಶಗಳನ್ನು ಕಲ್ಪಿಸಲಾಗಿದೆ. ಒಂದು ಕಡೆ (ಪಶ್ಚಿಮದಲ್ಲಿ) ಭೂಮಿಗೆ

ನೀರು ಹಾಯಿಸಲು ಕಪಿಲೆ ಕಟ್ಟೆಯೊಂದನ್ನು ಅಳವಡಿಸಿದೆ. ಇದರಿಂದ ಹಿಂದೆ ತೋಟವೊಂದನ್ನು ಮಾಡಿದ್ದಿರಬೇಕು. ಕಲ್ಯಾಣಿಯ ಒಳಗೋಡೆಯಲ್ಲಿ ಸುತ್ತಲೂ ಅನೇಕ ಚಂದದ ಉಬ್ಬು ಶಿಲ್ಪಗಳು ಕಲಾಪ್ರಿಯರ ಕಣ್ಮನಗಳನ್ನು ಸೆಳೆಯುತ್ತದೆ. ಆನೆ, ಸಿಂಹ, ಹುಲಿ, ಮೊಸಳೆ, ಲಿಂಗ, ಹೂವು, ಸರ್ಪ, ಪುರುಷಾಮೃಗ, ರತಿಚಿತ್ರ, ಹಾವಾಡಿಗ ಮುಂತಾದ ಸಾಧಾರಣ ಬಿಡಿ ಚಿತ್ರಗಳ ಜೊತೆಯಲ್ಲೇ ಕೆಲವು ವಿಶಿಷ್ಟ ಚಿತ್ರರೂಪಕಗಳೂ ಗಮನ ಸೆಳೆಯುತ್ತವೆ. ಶಿವನಿಗೆ ತನ್ನ ಕಣ್ಣನ್ನು ಕಿತ್ತುಕೊಡುತ್ತಿರುವ ಭಕ್ತ ಬೇಡರ ಕಣ್ಣಪ್ಪ, ಬಾಣ ನಾಟಿ ಬಿದ್ದಿರುವ ಹಂದಿಗಾಗಿ ಕಾಳಗದಲ್ಲಿ ತೊಡಗಿರುವ ಕಿರಾತವೇಷಿ ಶಿವ ಮತ್ತು ಅರ್ಜುನ, ನಗ್ನಳಾಗಿ ನಿಂತಿರುವ ಸುಂದರಿಯನ್ನು ಕಂಡು ತಪಸ್ಸನ್ನೇ ಮರೆತು ಮೋಹಿತರಾದ ಕೆಲವರು ಋಷಿಗಳು, ಅಲ್ಲೇ ಸಂಯಮ ಕಾಪಾಡಿಕೊಂಡಿರುವ ಇನ್ನೂ ಕೆಲವು ಮುನಿಗಳು, ಈ ಮುಂತಾದ ಚಿತ್ರಗಳೂ ನೋಡುಗರ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುತ್ತವೆ.

ಪಟ್ಟಣದಲ್ಲಿ ಕೇರಿಗೆ ಒಂದರಂತೆ ಬಾವಿಗಳಿದ್ದವು ಎಂದು ಸ್ಥಳೀಯರು ತಿಳಿಸುತ್ತಾರೆ. ಪ್ರಸ್ತುತ ನಾಲ್ಕು ಬಾವಿಗಳು ಸುಸ್ಥಿತಿಯಲ್ಲಿವೆ. ಹೀಗೆ ಹೊಳಲ್ಕೆರೆಯಲ್ಲಿನ ಕೆರೆ, ಕಲ್ಯಾಣಿ, ಬಾವಿಗಳನ್ನು ಅಧ್ಯಯನ ಮಾಡಲಾಗಿದೆ.

ಅಡಿ ಟಿಪ್ಪಣಿ

೧. ಕೊಟ್ರಯ್ಯ ಸಿ.ಟಿ.ಎಂ., ೨೦೦೧, **ವಿಜಯನಗರ ಸಾಮ್ರಜ್ಯದ ನೀರಾವರಿ ವ್ಯವಸ್ಥೆ,** ಪುಟ–೨.

೨. ವಾಸುದೇವನ್ ಸಿ.ಎಸ್., ೨೦೦೧, **ಹಂಪಿ ಪರಿಸರದ ಕೆರೆಗಳು,** ಪುಟ–೬.

೩. ದೀಕ್ಷಿತ್ ಜಿ.ಎಸ್., ಕುಪ್ಪಸ್ವಾಮಿ ಜಿ.ಆರ್., ಮೋಹನ್ ಎಸ್.ಕೆ., (ಮೂಲ), ನೀಲತ್ತಹಳ್ಳಿ ಕಸ್ತೂರಿ (ಅನು), ೨೦೦೦, **ಕರ್ನಾಟಕದಲ್ಲಿ ಕೆರೆ ನೀರಾವರಿ,** ಪುಟ–೨೭.

೪. ರಾಜಶೇಖರಪ್ಪ ಬಿ., ೨೦೦೨, **ಚಿತ್ರದುರ್ಗ ಪ್ರದೇಶದ ಕೆರೆಗಳು: ನಿರ್ವಹಣೆಯ ಐತಿಹಾಸಿಕ ಅವಲೋಕನ ಕೆರೆ ನಿರಾವರಿ ನಿರ್ವಹಣೆ: ಚಾರಿತ್ರಿಕ ಅಧ್ಯಯನ,** ರಾಜರಾಮ್ ಹೆಗಡೆ (ಸಂ), ಪುಟ–೧೦೮.

೫. ದ್ಯಾಮನಗೌಡ್ರ ವಿ.ಕೆ., ೨೦೦೮, **ಕೆರೆ–ಕಟ್ಟೆ, ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ–೨,** ಹಾನಗಲ್ಲು ವಾಸುದೇವ ಬಡಿಗೇರ (ಸಂ), ಪು–೮೦.

೬. ದೇವರ ಕೊಂಡಾರೆಡ್ಡಿ ಮತ್ತು ಇತರರು (ಸಂ), ೨೦೦೦, **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ–೩, ಹಂಪಿ ಶಾಸನಗಳು,** ಸಂಖ್ಯೆ–೬೯.

ಅಧ್ಯಾಯ ಏಳು

ನಂಬಿಕೆ ಮತ್ತು ಆಚರಣೆ

ಮಾನವನು ಅನಾದಿಕಾಲದಿಂದಲೂ ನಂಬಿಕೆ ಮತ್ತು ತತ್ಸಂಬಂಧವಾದ ಆಚರಣೆಗಳನ್ನು ನಡೆಸಿಕೊಂಡು ಬಂದಿರುವುದನ್ನು ಮನಗಾಣುತ್ತೇವೆ. ಇವೆಲ್ಲವೂ ಅವನ ಮಾನಸಿಕ ನೆಮ್ಮದಿಗಾಗಿ ಮಾಡಿಕೊಂಡಿರುವ ಚಿಕಿತ್ಸಕ ಸ್ವರೂಪದ ಸಾಧನೆಗಳೆನ್ನಬಹುದು. ನಂಬಿಕೆಯ ಭೌತಿಕ ರೂಪವೆ ಆಚರಣೆ. ಮಾನವನ ನಾಗರಿಕತೆಯ ಬೆಳವಣಿಗೆಯಲ್ಲಿ ಕೃಷಿ ಆಧಾರಿತ ಬದುಕು ಬಹುಮಹತ್ವದ್ದು. ಈ ಹಂತದಲ್ಲಿ ಅವನು ತನ್ನ ನಂಬಿಕೆ ಮತ್ತು ಆಚರಣೆಗಳನ್ನು ಇಮ್ಮಡಿಗೊಳಿಸಿ ಕೊಂಡಂತೆ ಕಂಡು ಬರುತ್ತದೆ. ಇಂದಿಗೂ ಇತರ ವೃತ್ತಿಯವರಿಗಿಂತ ಕೃಷಿಕ ಸಮುದಾಯ ಹೊಂದಿರುವ ನಂಬಿಕೆ ಮತ್ತು ಆಚರಣೆಗಳು ಅರ್ಥಪೂರ್ಣವಾಗಿರುತ್ತವೆ. ಪ್ರಸ್ತುತ ಅಧ್ಯಯನದಲ್ಲಿ ರೂಢಿಯಲ್ಲಿರುವ ನಂಬಿಕೆ ಮತ್ತು ಆಚರಣೆಗಳನ್ನು ಇಡಿಯಾಗಿ ನೋಡುವ ಪ್ರಯತ್ನ ಮಾಡಲಾಗಿದೆ.

ಹೊಳಲ್ಕೆರೆ ಎಂಬ ಪಟ್ಟಣದ ಉಲ್ಲೇಖ ನಮಗೆ ಹಲವಾರು ಶಾಸನಗಳಲ್ಲಿ ಸಿಗುತ್ತದೆ. ಹೊಳಲ್ ಎಂಬ ಶಬ್ದವು ಪೊಳಲ್ ದಿಂದ ಬಂದಿದೆ. ಹೊಳಲ್ ಅಂದರೆ ಪಟ್ಟಣ, ನಗರ, ಊರು, ಗ್ರಾಮ ಎಂದು ನಿರ್ದಿಷ್ಟವಾಗಿ ಹೇಳಬಹುದು. ಹೊಳಲ್ ಎಂಬುದು ವ್ಯಕ್ತಿ ವಾಚಕ, ಒಬ್ಬ ವ್ಯಕ್ತಿಯ ನಾಮದಿಂದ ಪೊಳಲ್>ಹೊಳಲ್>ಹೊಳಲ್ಕೆರೆಯಾಗಿದೆ.

ಹೊಳಲ್ಕೆರೆಯಲ್ಲಿ ವಿವಿಧ ಜನಸಮುದಾಯಗಳು ವಾಸಿಸುತ್ತಿವೆ. ಅವರಲ್ಲಿ ಒಕ್ಕಲಿಗ, ಲಿಂಗಾಯಿತ, ನಾಯಕ, ಕರುಬ, ಬ್ರಾಹ್ಮಣ, ಮುಸಲ್ಮಾನ ಮೊದಲಾದ ಸಮುದಾಯದವರು ಸೇರಿದ್ದಾರೆ. ಈ ಎಲ್ಲ ಸಮುದಾಯಗಳು ಅವರದೆ ಆದ ಸಮನಾದ ನಂಬಿಕೆ ಮತ್ತು ಆಚರಣೆಗಳ ನೆಲೆಯಲ್ಲಿ ಬದುಕುತ್ತಿದ್ದಾರೆ. ಈ ಎಲ್ಲ ಸಮುದಾಯಗಳು ಹೆಚ್ಚು ಕೃಷಿ ಮತ್ತು ಅರ್ಚಕ ಚಟುವಟಿಕೆಯಲ್ಲಿ ತೊಡಗಿರುವುದು ಗಮನಾರ್ಹ. ಹಾಗಾಗಿ ಇವರ ನಂಬಿಕೆ ಮತ್ತು ಆಚರಣೆಗಳು ಸಹ ಏಕರೂಪದವು. ಮುಂಗಾರು ಮಳೆಬಿದ್ದ ನಂತರ ಕೃಷಿ ಚಟುವಟಿಕೆಗಳು ಆರಂಭಗೊಳ್ಳುತ್ತವೆ. ಕೃಷಿಕರು ನೇಗಿಲು ಹೂಡುವ ಹೊಲದಲ್ಲಿ ಪೂಜೆಮಾಡುತ್ತಾರೆ. ಬಿತ್ತನೆ ಮಾಡುವಾಗಲೂ ಪೂಜಿಸಿ ಬಿತ್ತನೆ ಆರಂಭಿಸುತ್ತಾರೆ.

ಹೊಳಲ್ಕೆರೆಯು ಪ್ರಸ್ತುತ ಪಟ್ಟಣ ಪಂಚಾಯಿತಿಯಾಗಿದ್ದು ಇಲ್ಲಿ ಹಲವು ಆಚರಣೆ ಮತ್ತು ನಂಬಿಕೆಗಳಿವೆ. ಗಣಪತಿಯು ಇಲ್ಲಿ ಪ್ರಸಿದ್ಧ ದೇವರಾಗಿದ್ದು ಇದನ್ನು ಸ್ಥಳೀಯವಾಗಿ ಬಯಲು ಗಣಪತಿ, ಜಡೆಗಣಪತಿ ಎಂಬಿತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಬಯಲು ಗಣಪತಿ ಎಂದು ಕರೆಯಲು ಕಾರಣ ಇದು

ಮೊದಲು ಬಯಲಿನಲ್ಲಿತ್ತು. ದೇವರನ್ನು ಬಯಲಿನಲ್ಲಿ ನಿಲ್ಲಿಸಿದರೆ ಮಳೆ, ಬೆಳೆ, ಆರೋಗ್ಯ ಚೆನ್ನಾಗಿ ಆಗುತ್ತದೆ. ಯಾವುದೇ ರೋಗರುಜಿನೆಗಳು ಬರುವುದಿಲ್ಲವೆಂಬ ನಂಬಿಕೆ ಇಲ್ಲಿನ ಜನರಲ್ಲಿದೆ. ಕಾಲಾನಂತರ ಇದಕ್ಕೆ ಒಂದು ದೇವಸ್ಥಾನವನ್ನು ಕಟ್ಟಿಸಿದರು. ಈಗ ಇದರ ಉಸ್ತುವಾರಿ ನೋಡಿಕೊಳ್ಳಲು ಒಂದು ಟ್ರಸ್ಟ್ ಸ್ಥಾಪನೆಯಾಗಿದೆ.

ವಿಗ್ರಹದ ಹಿಂದೆ ಜಡೆ ಇರುವುದು ಅದಕ್ಕೆ ಜಡೆಗಣಪ ಎನ್ನುವರು. ಭಕ್ತರು ಇದಕ್ಕೆ ಬೆಣ್ಣೆ, ತುಪ್ಪ ಮತ್ತು ಎಣ್ಣೆಯ ನೈವೇದ್ಯ ಮಾಡುತ್ತಾರೆ. ಪ್ರಸ್ತುತ ಹೆಣ್ಣು ಮಕ್ಕಳು ವಿಗ್ರಹದ ಸುತ್ತ ಪ್ರದಕ್ಷಿಣೆ ಹಾಕಿ ತಮ್ಮ ತಲೆಯ ಕೂದಲು ಉದುರಬಾರದು, ಉದ್ದ ಬೆಳೆಯ ಬೇಕು ಎಂದು ಜಡೆಗೆ ಹಚ್ಚಿದ ಬೆಣ್ಣೆ, ಎಣ್ಣೆ, ತುಪ್ಪವನ್ನು ತಲೆಗೆ ಹಚ್ಚಿ ಕೊಳ್ಳುತ್ತಾರೆ.

ಈ ವಿಗ್ರಹಕ್ಕೆ ತಿಂಗಳಿಗೊಮ್ಮೆ ಸಂಕಷ್ಟ ಚತುರ್ತಿಯಂದು ವಿಶೇಷ ಪೂಜೆ ನಡೆಯುತ್ತದೆ. ಈ ಸಮಯದಲ್ಲಿ ಸುಮಾರು ಮೂವತ್ತು ಸಾವಿರ ಭಕ್ತರು ಸೇರುತ್ತಾರೆ. ಸ್ಥಳೀಯ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಉತ್ತೀರ್ಣವಾಗಲೆಂದು, ೧೦೧ ತೆಂಗಿನಕಾಯಿ ಒಡೆಯುವ ಸಂಪ್ರದಾಯವಿದೆ. ಊರಲ್ಲಿ ಮಳೆ, ಬೆಳೆ ಕಾಲಕ್ಕೆ ಸರಿಯಾಗಿ ಆಗದಿದ್ದರೆ ಹಿರೇಕೆರೆಯ ೧೦೧ ಕೊಡ ನೀರನ್ನು ತಂದು ಅಭಿಷೇಕ ಮಾಡಿದರೆ ಮಳೆ ಬೆಳೆ ಆಗುತ್ತದೆ ಎಂಬ ನಂಬಿಕೆಯಿದೆ. ಇಲ್ಲಿಗೆ ಬೆಂಗಳೂರು, ಧಾರವಾಡ, ಹಾಸನ ಚಿತ್ರದುರ್ಗ ಮೊಳಕಾಲ್ಮರು, ದಾವಣಗೆರೆ, ಇತ್ಯಾದಿ ಕಡೆಗಳಿಂದ ಬಂದು ಹರಕೆ ಮತ್ತು ಪೂಜೆ ಸಲ್ಲಿಸುವರು. ಮೊದಲು ಗಣಪತಿ ಬಯಲಲ್ಲಿ ಇತ್ತು ಈಗ ದೇವಸ್ಥಾನ ಕಟ್ಟಿಸಿರುವುದರಿಂದ ಮಳೆ ಬೆಳೆ ಕಡಿಮೆ ಆಗಿದೆ ಎಂದು ಪಟ್ಟಣದ ಹಿರಿಯರು ಹೇಳುತ್ತಾರೆ.

ಕುಕ್ಕಾವಾಡೇಶ್ವರಿ ದೇವಾಲಯದ ನಂಬಿಕೆ ಮತ್ತು ಆಚರಣೆ

ಈ ದೇವಾಲಯವು ಹೊಳಲ್ಕೆರೆ ಪಟ್ಟಣದ ಪಶ್ಚಿಮಕ್ಕೆ ಶಿವಮೊಗ್ಗ ಹೊಳಲ್ಕೆರೆ ರಸ್ತೆಯ ಪಕ್ಕದಲ್ಲಿದೆ. ಇದಕ್ಕೆ ಎಲ್ಲಾ ಸಮುದಾಯಗಳ ಭಕ್ತರಿದ್ದಾರೆ. ದೇವಾಲಯದ ಪಕ್ಕದಲ್ಲಿ ಒಂದು ಭನ್ನಿಮರವಿದೆ ಮೊದಲು ದೇವಿಯ ಶಿಲ್ಪ ಇಲ್ಲಿತ್ತು. ಇತ್ತೀಚಿನ ದಿನಗಳಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸಿ ಮರದ ಹತ್ತಿರ ಇದ್ದ ಶಿಲ್ಪವನ್ನು ಒಳಗೆ ಇಟ್ಟಿದ್ದಾರೆ. ಈ ಮರಕ್ಕೆ ಭಕ್ತರು ಬಳೆ, ತೊಟ್ಟಲು, ಬಟ್ಟೆಗಳನ್ನು ಕಟ್ಟುವುದನ್ನು ಕಾಣುತ್ತೇವೆ. ಪ್ರತಿ ವರ್ಷ ಜನವರಿ ತಿಂಗಳಲ್ಲಿ ಜಾತ್ರೆ ಆಚರಿಸುತ್ತಾರೆ. ಮಂಗಳವಾರ, ಶುಕ್ರವಾರ ವಿಶೇಷ ಪೂಜೆ ನಡೆಯುತ್ತದೆ. ಜಾತ್ರೆಯ ದಿನ ಪಟ್ಟಣದ ಜನಗಳು ಇಲ್ಲಿಗೆ ಹೊರಬಿಡು ಬಂದು ಕುರಿ, ಕೋಳಿಗಳನ್ನು ಬಲಿಕೊಡುತ್ತಾರೆ. ಬೇರೆ ಊರುಗಳಿಂದ ಭಕ್ತರು ಬಂದು ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಅಲ್ಲಿ ಮಾಡಿದ ಅಡುಗೆಯನ್ನು ಯಾರು ಮನೆಗೆ ಒಯ್ಯುವಂತಿಲ್ಲ ಇತ್ತೀಚಿಗೆ ಪಟ್ಟಣದ ಜನಗಳು ಇಲ್ಲಿ ಪೂಜೆ ಮಾಡಿಸಿಕೊಂಡು ಮನೆಯಲ್ಲಿ ಅಡುಗೆ ಮಾಡುತ್ತಾರೆ. ಭಕ್ತರು ಈ ದೇವತೆಯ ಬಗ್ಗೆ ವಿಶೇಷವಾದ ನಂಬಿಕೆ ಇಟ್ಟಕೊಂಡಿದ್ದಾರೆ. ತಾವು ಅಂದು ಕೊಂಡ ಕಾರ್ಯ ಆಗಲಿ ಎಂದು ಹರಸಿ ಕೊಂಡಿರುತ್ತಾರೆ. ಈ ದೇವತೆಗೆ ಹರಕೆ ಹೊತ್ತರೆ ಇದು ನೇರವೇರುವುದು ಎಂಬ ನಂಬಿಕೆ ಸ್ಥಳೀಯ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಲ್ಲಿ ಬೇರೂರಿದೆ.

ವೇಣುಗೋಪಾಲಸ್ವಾಮಿ ಆಚರಣೆ ಮತ್ತು ನಂಬಿಕೆ

ಪಟ್ಟಣದ ಮತ್ತೊಂದು ಪ್ರಮುಖ ವೈಷ್ಣವ ದೇವಸ್ಥಾನ ವೇಣುಗೋಪಾಲ ಸ್ವಾಮಿಯದು. ಇದು ರಾಜಬೀದಿಯ ಊರಿನ ಮಧ್ಯದಲ್ಲಿ ಪೂರ್ವಭಿಮುಖವಾಗಿದೆ. ಈ ದೇವಾಲಯದ ಒಂದು ವಿಶೇಷತೆ ಎಂದರೆ ಗರ್ಭಗೃಹದಲ್ಲಿರುವ ಹೂವು ಎಂಟು ದಿನಗಳವರೆಗೆ ಒಣಗದಿರುವುದು. ಇಲ್ಲಿನ ಗರ್ಭಗೃಹ ಬೇಸಿಗೆಯಲ್ಲಿ ತಂಪಾಗಿ ಮಳೆಗಾಲದಲ್ಲಿ ಬಿಸಿಯಾಗಿರುತ್ತದೆ. ಪ್ರತಿವರ್ಷ ಪಾಲ್ಗುಣ ಹುಣ್ಣಿಮೆಯಂದು ರಥೋತ್ಸವ ನಡೆಯುತ್ತದೆ. ಕಾರ್ತೀಕ ಮಾಸದಲ್ಲಿ ಗ್ರಾಮದ ಪ್ರತಿಯೋಬ್ಬರು ಒಂದೊಂದು ದಿನ ಪೂಜೆಸಲ್ಲಿಸಿ ದೇವರ ಸೇವೆ ಮಾಡುವರು. ಮುಖಮಂಟಪದಲ್ಲಿ ದಕ್ಷಿಣಾಭಿಮುಖವಾಗಿ ಭಿತ್ತಿಯಲ್ಲಿ ಒಂದು ಆಂಜನೇಯನ ಶಿಲ್ಪವಿದೆ, ಪಟ್ಟಣದ ಜನರು ಈ ಆಂಜನೇಯ ಬಗ್ಗೆ ವಿಶೇಷ ನಂಬಿಕೆಯಿಂದ ಆಚರಣೆಯನ್ನು ಮಾಡುವರು. ಹಸುಗೂಸು ತಾಯಿಯ ಎದೆಹಾಲು ಕುಡಿಯದಿದ್ದರೆ ತುಂಬಾ ಹಟ ಮಾಡಿದರೆ ಇದಕ್ಕೆ ಗುಗ್ಗರಿ ಸೇವೆ ಮಾಡುವರು. ದೇವಾಲಯದಲ್ಲಿ ಗುಗ್ಗರಿ ಬೇಯಿಸಿ ಭಕ್ತರಿಗೆ ಹಂಚುವರು ಮನೆಗೆ ಕೊಂಡೊಯ್ಯುವಂತಿಲ್ಲ. ಚಿಕ್ಕ ಮಕ್ಕಳಿಗೆ ದಢಾರ, ಸೀತಾಳ, ಅಮ್ಮ ಈ ರೀತಿಯಾದರೆ ಈ ದೇವರಿಗೆ ಗುಗ್ಗರಿ ಹರಕೆ ತೀರಿಸುತ್ತಾರೆ. ಹಾಗಾಗಿ ಇದಕ್ಕೆ ಗುಗ್ಗರಿ ಆಂಜನೇಯ ಎಂದು ಕರೆಯುವರು. ಇಂದಿಗೂ ಈ ಆಚರಣೆ ನಡೆಯುತ್ತಲಿದೆ.

ವೀರಭದ್ರ ದೇವಾಲಯದ ನಂಬಿಕೆ ಮತ್ತು ಆಚರಣೆ

ಪಟ್ಟಣದ ರಾಜಬೀದಿಯಲ್ಲಿ ಉತ್ತರ ದಿಕ್ಕಿನಲ್ಲಿರುವ ವೀರಭದ್ರ ದೇವಾಲಯ ತ್ರಿಕೂಟ ದೇವಾಲಯವಾಗಿದೆ. ಇದರ ಮುಖಮಂಟಪದಲ್ಲಿರುವ ಕಂಬದಲ್ಲಿ ಚೌಡೇಶ್ವರಿ ದೇವರ ಒಂದು ಶಿಲ್ಪವಿದೆ. ಇದಕ್ಕೆ ಸ್ಥಳೀಯ ಮಹಿಳೆಯರು ನಿತ್ಯವು ಬಂದು ಪೂಜೆಯನ್ನು ಮಾಡುತ್ತಾರೆ. ಮಹಿಳೆಯರು ಅಂದುಕೊಂಡಿರುವುದು ಎಲ್ಲ ನೆರವೇರುತ್ತದೆ ಎನ್ನುವ ನಂಬಿಕ್ಕೆ ಇದೆ. ದೇವಾಲಯದ ಮುಂದೆ ಕೆಂಡವನ್ನು ತುಳಿಯಲು ಹೊಂಡ ಮಾಡಿದ್ದಾರೆ. ಬಸವ ಜಯಂತಿಯ ದಿನ ದೇವರನ್ನು ಹೊರಡಿಸಿ ಪಲ್ಲಕ್ಕಿಯಲ್ಲಿ ಮೇರವಣೆಗೆ ಮಾಡಿಕೊಂಡು ನಂದಿಕೋಲನ್ನು ಕುಣಿಸುವರು. ವಾದ್ಯಗಳೊಂದಿಗೆ ದೇವರನ್ನು ಶೃಂಗರಿಸಿಕೊಂಡು ಹೋಗುವುದು, ಕೆಂಡ ತುಳಿಯುವುದು ಒಂದು ರೀತಿಯ ಆಚರಣೆಯಾಗಿದೆ. ಹಳ್ಳದ ವೀರಭದ್ರ ದೇವಸ್ಥಾನದ ಹತ್ತಿರ ವರ್ಷಕ್ಕೆ ಒಮ್ಮೆ ಅನ್ನಸಂತರ್ಪಣೆಯು ನಡೆಯುತ್ತದೆ. ಈ ದೇವರ ಜಾತ್ರೆಯು ಪ್ರತಿ ವರ್ಷ ನಡೆಯುತ್ತದೆ. ಅಂದು ಕೆಂಡದ ಅರ್ಚನೆಯನ್ನು ಮಾಡುತ್ತಾರೆ. ಪಟ್ಟಣದ ಜನರು ಈ ದೇವರ ಬಗ್ಗೆ ತುಂಬಾ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ.

ಕಾಲಭೈರವ ದೇವಾಲಯದ ನಂಬಿಕೆ ಮತ್ತು ಆಚರಣೆ

ಪೂರ್ವಭಿಮುಖವಾಗಿರುವ ಕಾಲಭೈರವ ದೇವಾಸ್ಥಾನಕ್ಕೆ ಹೊಂದಿಕೊಂಡು ಒಂದು ಪುರಾತನ ಹೊಂಡವಿದೆ. ಇದಕ್ಕೆ ಹೊಸ್ನೆ ಕೆರೆಯ ನೀರು ಬರುತ್ತದೆ ಎಂಬ ನಂಬಿಕೆಯಿದೆ. ಇದರ ಹಿಂದೆ ಕೆರೆಯಿದೆ ಈ ಹೊಂಡದ ನೀರು ಸಿಹಿ ಇರುತ್ತದೆ ಅದಕ್ಕೆ ಇದನ್ನು ಸಿಹಿನೀರಿನ ಹೊಂಡ ಎಂದು ಕರೆಯುತ್ತಾರೆ. ಇದು ತುಂಬ ಪ್ರವಿತ್ರ ಇದರ ನೀರನ್ನು ಪ್ರತಿಯೊಬ್ಬರು ಮನೆಕಟ್ಟಲು, ವಧು-ವರರಿಗೆ

ನೀರು ಹಾಕಲು, ಗಂಗೆ ಪೂಜೆಗೆ ಬಳಸುವರು. ಕಾಲಭೈರವನ ದೇವಾಲಯದ ಒಳಗೆ (ಮುಡಿ) ಮಕ್ಕಳ ಕೂದಲು ತೆಗೆಯುವುದು, ವಧು-ವರರ ಪೂಜೆ, ಪ್ರತಿ ಭಾನುವಾರ ವಿಶೇಷ ಪೂಜೆ ನಡೆಯುತ್ತದೆ. ಈ ದೇವರಿಗೆ ಎಲ್ಲಾ ಸಮುದಾಯದವರು ನಡೆದುಕೊಳ್ಳುವರು. ಪ್ರತಿ ವರ್ಷ ಏಪ್ರಿಲ್ ೧೫ಕ್ಕೆ ಜಾತ್ರೆ ನಡೆಯುತ್ತದೆ. ಹೋನ್ನೆಕೆರೆ ತುಂಬಿದರೆ ಕಲ್ಯಾಣಿಗೆ ನೀರು ಬರುತ್ತದೆ ಎಂಬ ನಂಬಿಕೆಯಿದೆ. ಗ್ರಾಮದ ಲೀಂಗಾಯಿತರ ಹೇಣ್ಣು ಮಗಳಾದ ಹೋಳಲಮ್ಮನ ಹೆಸರಲ್ಲಿ ಕೆರೆಯನ್ನು ಕಟ್ಟಿಸಿದ್ದಾರೆ ಆದಕ್ಕೆ ಹೋನ್ನೆಕೆರೆ ಎನ್ನುವರು

ಬಂಡಿ ಚಿಕ್ಕಮ್ಮನ ನಂಬಿಕೆ ಮತ್ತು ಆಚರಣೆ

ಪೂರ್ವಭಿಮುಖವಾಗಿರುವ ಈ ದೇವಾಲಯವು ಊರಿನ ಗ್ರಾಮದೇವತೆ ಎಂದು ಪ್ರಸಿದ್ಧಿ ಪಡೆದಿದೆ. ಹಿಂದೆ ಮಲೆಗುಡ್ಡಕ್ಕೆ ಹೋಗಿ ಬರುವಾಗ ಗಾಡಿಯ ಕೀಲು ಇಲ್ಲದೆ ಗಾಡಿಯನ್ನು ಓಡಿಸಿಕೊಂಡು ಅದರಲ್ಲಿ ಬಂಡಿ ಚಿಕ್ಕಮ್ಮನ ಮೂರ್ತಿಯನ್ನಿಟ್ಟುಕೊಂಡು ಬಂದಿದ್ದಾರೆ. ಹಾಗಾಗಿ ಬಂಡಿ ಚಿಕ್ಕಮ್ಮ ಎನ್ನುವರು. ಈ ದೇವತೆ ಗಾಡಿಯಲ್ಲಿ ಇದ್ದುದರಿಂದ ಜನರಿಗೆ ಯಾವುದೇ ರೀತಿಯ ತೊಂದರೆ ಆಗದೆ ಸುರಕ್ಷಿತವಾಗಿ ಊರಿಗೆ ಬಂದು ಸೇರಿರುವುದರಿಂದ ದೇವತೆಗೆ ಜನರನ್ನು ರಕ್ಷಿಸುವ ಶಕ್ತಿ ಇದೆ ಎಂದು ನಂಬಿದ್ದಾರೆ. ಅಂದಿನಿಂದ ಈ ದೇವತೆಯನ್ನು ಊರ ದ್ವಾರದ ಬಳಿಯಿಟ್ಟು ಪೂಜಿಸುವರು. ಪಟ್ಟಣದ ಮಕ್ಕಳಿಗೆ ಅಂಟು ರೋಗಗಳು ಬಾರದಿರಲಿ ಎಂದು ಪ್ರತಿ ವರ್ಷ ಜಾತ್ರೆ ಆಚರಿಸುವರು. ಬಸವ ಜಯಂತಿ ಆಗಿ ಒಂಬತ್ತು ದಿವಸದ ನಂತರ ಸಿಡಿ ಆಚರಿಸಲಾಗುವುದು.

ಶಾಂತಿನಾಥ ಬಸದಿಯ ನಂಬಿಕೆ ಮತ್ತು ಆಚರಣೆ

ಬಸದಿಯಲ್ಲಿ ಶ್ರೀಬ್ರಹ್ಮದೇವ ಮತ್ತು ಮಹಾಮಾತೆ ಪದ್ಮಾವತಿ ಯಕ್ಷಿ ಬಿಂಬಗಳು ಪುರಾತನದವುಗಳಾಗಿವೆ. ಹಾಗಾಗಿ ಮಹಿಮಾ ಕ್ಷೇತ್ರವೆನಿಸಕೊಳ್ಳಲು ಕಾರಣವಾಗಿದೆ. ಇಲ್ಲಿ ಜೈನರು ಮೊದಲಿನಿಂಲೂ ಅಪಾರ ಸಂಖ್ಯೆಯಲ್ಲಿ ಶ್ರದ್ಧಾಭಕ್ತಿಗಳಿಂದ ಪೂಜೆ ಸಲ್ಲಿಸುತ್ತಾ ಬಂದಿದ್ದಾರೆ. ಶ್ರೀ ಬ್ರಹ್ಮದೇವ ಮಹಿಮೆಯನ್ನು ಕುರಿತು ಅನೇಕ ಅಥೆಗಳು ಜನಜನಿತವಾಗಿದೆ. 'ಗುಂಡು ಬ್ರಹ್ಮದೇವರು' ಎಂದು ಕರೆಯಲ್ಪಡುವ ಈ ಬ್ರಹ್ಮದೇವ ಯಕ್ಷರನ್ನು ಸಂತೆಗೆ ಹೋಗುವವರು ದರ್ಶನ ಮಾಡಿಕೊಂಡುಹೋದರೆ ವ್ಯಾಪಾರದಲ್ಲಿ ಲಾಭ ಇತರ ಕಾರ್ಯಗಳಲ್ಲಿ ಯಶಸ್ಸು ಉಂಟಾಗುತ್ತದೆ ಎಂಬುದು ದೃಢನಂಬಿಕೆಯಾಗಿದೆ. ಆದ್ದರಿಂದ ಶ್ರದ್ಧಾಭಕ್ತಿಗಳಿಂದ ಈ ಜನರೆಲ್ಲರೂ ತಮ್ಮ ತಮ್ಮ ಕಾರ್ಯಗಳಿಗೆ ತೆರಳುವ ಮುನ್ನ ಕಾಣಿಕೆ ಸಲ್ಲಿಸಿ ಪೂಜೆ ಮಾಡಿಸಿಕೊಂಡು ಹೋಗುವರು. ಮಹಾಮಾತೆ ಪದ್ಮಾವತಿ ಅಮ್ಮನವರ ಈ ಕ್ಷೇತ್ರದಲ್ಲಿ ಪ್ರಾಚೀನ ಕಾಲದಿಂದಲೂ ಪದ್ಮಾವತಿ ಅಮ್ಮನವರು ನೆಲೆಸಿದ್ಧಾರೆ ಬಹಳ ಹಿಂದಿನ ಕಾಲದಿಂದ ಬೆಳೆದು ಬಂದ ಮರವಿದೆ. ಧರ್ಮದಲ್ಲಿ ಅತೀವ ಶ್ರದ್ಧಾಭಕ್ತಿಗಳನ್ನು ಹೊಂದಿ ಶಾಸ್ತ್ರೋಕವಾಗಿ ದೇವಿಯನ್ನು ಪೂಜಿಸಿ ಇಷ್ಟಾರ್ಥ ಸಿದ್ಧಿಗಾಗಿ ವರಕೇಳುವವರಿಗೆ ಇಲ್ಲಿ ಪ್ರಸಾದ ಪ್ರಾಪ್ತಿ ಆಗುತ್ತದೆ. ಭಕ್ತಾದಿಗಳು ಇಲ್ಲಿಯ ದೇವಿಯನ್ನು ಹೊಂಬುಜದ ಪದ್ಮಾವತಿ ದೇವಿಯೆಂದು ಬಾವಿಸಿ ಭಕ್ತಿಯಿಂದ ಆರಾಧಿಸುತ್ತಾರೆ.

ಹೊನ್ನಮ್ಮ ಮತ್ತು ಹೊಳಲಮ್ಮ

ಪಟ್ಟಣದ ದ್ವಾರಬಾಗಿಲಲ್ಲಿ ಉತ್ತರಕ್ಕೆ ಹೊಳಲಮ್ಮ ದಕ್ಷಿಣಕ್ಕೆ ಹೊನ್ನಮ್ಮನ ಗುಡಿಗಳು ಇವೆ. ಇವರು ಲಿಂಗಾಯತ ಸಮುದಾಯದ ಬೆಳಾಲರು ಕುಲದ ಹೆಣ್ಣು ಮಕ್ಕಳು. ಒಂದು ದಿನ ಹೊನ್ನಮ್ಮ ಬಟ್ಟೆತೊಳೆಯಲು ಕೆರೆಗೆ ಹೋದಾಗ ತನ್ನ ಸೀರೆಯನ್ನು ತೊಳೆದು ಒಣಗಿ ಹಾಕಿರುತ್ತಾಳೆ ಅದರ ಮೇಲೆ ಒಂದು ಬಸವಣ್ಣ (ಹೋರಿ) ಬಂದು ಕಾಲಿನಿಂದ ತುಳಿದು ಗ್ವಾತ (ಗಂಜು) ಹೋಯಿದು ಹೋಗುತ್ತದೆ. ಅವಳು ಸೀರೆಯನ್ನು ಕಂಡು ಇದು ಗಲಿಜು ಆಗಿದೆ ಮತ್ತೆ ತೊಳೆಯ ಬೇಕು ಎಂದಳು, ಅದರೆ ಸ್ಥಳೀಯ ಜನರು ಬಸವಣ್ಣ ಬಂದು ಹಾಗೆ ಮಾಡಿದೆ ಒಳ್ಳೆಯದು ಹಾಗೆ ತೊಟ್ಟುಕೊ ಏನು ಆಗುವುದಿಲ್ಲ ಎಂದರಂತೆ ಅವಳು ಆ ಸೀರೆಯನ್ನು ಹಾಗೆ ಉಟ್ಟು ಕೊಂಡಳು ನಂತರದ ದಿನಗಳಲ್ಲಿ ಅವಳು ಗರ್ಭಿಣಿ ಆದಳಂತೆ. ಅವರ ಅಣ್ಣಂದಿರು ಏಳು ಜನ ಇವರು ಊರಿನಲ್ಲಿ ತುಂಬ ಗೌರವದಿಂದ ಬದುಕುತ್ತಿದ್ದರು. ನಮ್ಮ ಮನೆಯ ಹೆಣ್ಣುಮಗಳೂ ಗರ್ಭಧರಿಸಲು ಯಾರುಕಾರಣ? ಎಂದು ಕೇಳಿದಾಗ ಅವಳು ನಡೆದ ಘಟನೆ ವಿವರಿಸಿದಳು. ಅದನ್ನು ನಂಬದೆ ಅವಳ ಹೊಟ್ಟೆಯ ಮೇಲೆ ನೆಗಿಲನ್ನು ಇಟ್ಟು ಹೊಡೆದು ನೋಡಬೇಕು ಎಂದು ಹೇಳುತ್ತಾರೆ ಅವಳು ಒಪ್ಪಿದಳು. ಊರಿನ ಬಾಗಿಲಲ್ಲಿ ಅವಳನ್ನು ಮಲಗಿಸಿ ಹೊಟ್ಟೆಯ ಮೇಲೆ ನೇಗಿಲನ್ನು ಇಟ್ಟು ಹೊಡೆದರು ಹೊಟ್ಟೆಯಿಂದ ಆಕಳಕರು ಹೋರ ಬಂದಿತು ಅವಳು ಸಾಯುತ್ತಾಳೆ. ನೆನಪಿಗಾಗಿ ಅವಳ ಸಂಬಂಧಿಕರು ಅವಳ ಹೆಸರಲ್ಲಿ ಒಂದು ಚಿಕ್ಕಗುಡಿಯನ್ನು ಕಟ್ಟಿಸಿ, ಅವಳ ವಿಗ್ರಹ ಪ್ರತಿಷ್ಠಾಪಿಸಿದರು. ಲಿಂಗಾಯತರು ಮಾತ್ರ ಈ ದೇವರವನ್ನು ಪೂಜೆ ಮಾಡುವರು. ಇಂದಿಗೂ ಅವರ ಬೆಳಾಲ ಕುಲದವರು ಮಾತ್ರ ಇದರ ಪೂಜೆ ಆಚರಣೆ ಮಾಡುವರು. ಇವಳ ಹೆಸರಲ್ಲಿ ಹೊನ್ನೆಕೆರೆಯನ್ನು ನಿರ್ಮಿಸಿದ್ದಾರೆ ಎಂದು ಸ್ಥಳೀಯರು ಹೇಳುತ್ತಾರೆ. ಇವಳು ಹಿರಿಯ ಮಗಳು ಆಗಿದ್ದರಿಂದ ಹೀರೆಕೆರೆಯನ್ನು ಇವಳ ಹೆಸರಲ್ಲಿ ಕಟ್ಟಿಸುತ್ತಾರೆ ಎಂಬ ಐತಿಹ್ಯವಿದೆ.

ಹೊಳಲಮ್ಮ

ದಕ್ಷಿಣ ದಿಕ್ಕಿನಲ್ಲಿರುವ ಹೊಳಲಮ್ಮನ ಗುಡಿಯ ಐತಿಹ್ಯದಂತೆ ಇವಳು ಬೆಳಾಲರ ಕುಲದ ಹಿರಿಯಳು. ಇವರು ಮೋದಲು ಚೆನ್ನಗಿರಿಯಲ್ಲಿ ಇದ್ದರಂತೆ. ಹೊಳಲಮ್ಮ ಅವರ ಕನಸಿನಲ್ಲಿ ಹೋಗಿ ನಾನು ಹೊಳಲ್ಕೆರೆಯ ಊರಬಾಗಿಲಿನಲ್ಲಿ ದಕ್ಷಿಣಕ್ಕೆ ಇಷ್ಟು ಅಡಿ ಉದ್ದ, ದೂರ ಇದೇನೆ ನನ್ನನ್ನು ಅಲ್ಲಿಯೇ ಪ್ರತಿಷ್ಠಾಪನೆ ಮಾಡಿ ಎಂದು ಹೇಳಿದಳಂತೆ. ಅವರು ಬಂದು ಅದೇ ಸ್ಥಳವನ್ನು ಅಗೆದರಂತೆ ಯಾವುದೇ ರೀತಿಯ ಮುಕ್ಕು ಆಗದ ಶಿಲ್ಪ ಸಿಕ್ಕಿದೆ ಅದನ್ನು ಅಲ್ಲಿ ಪ್ರತಿಷ್ಠಾಪನೆ ಮಾಡಿ ಗುಡಿಯನ್ನು ಕಟ್ಟಿಸಿದ್ದಾರೆ. ಇವಳ ನೆನಪಿಗಾಗಿ ಹೋನ್ನೆಕೆರೆಯನ್ನು ಕೊತ್ತಲ ಆಂಜನೇಯ ದೇವಸ್ಥಾನದ ಹಿಂದೆ ಕಟ್ಟಿಸಿದ್ದಾರೆ. ಆದಕ್ಕೆ ಒಂದು ತೂಬು, ಬಾವಿಯನ್ನು ತೊಡಿಸಿದ್ದಾರೆ. ಹಿರೇಕೆರೆಯ ನೀರನ್ನು ಅಂಗ್ಯೆ ಎಂದು ಹೊನ್ನೆಕೆರೆ ತುಂಬಿದರೆ ಹಿರೇಕೆರೆಗೆ ನೀರು ಹೋಗುವುದು ಎಂದು ಜನಗಳ ನಂಬಿಕೆ. ಹೊಳಲ್ಕೆರೆಯಿಂದ ೧-೨ ಕಿ.ಮಿ. ದೂರದಲ್ಲಿ ಅವನೇರಪ್ಪ ಎಂಬ ದೇವಸ್ಥಾನವಿದೆ ಜನರು ಮಳೆ ಬಾರದೆ ಹೋನ್ನೆಕೆರೆಗೆ

ನೀರು ಬಾರದೆ ಇದ್ದರೆ ಅವನೇರಪ್ಪ ದೇವಸ್ಥಾನಕ್ಕೆ ಮತ್ತು ಪ್ರಸನ್ನ ಗಣಪತಿಗೆ ನೀರಿನ ಅಭಿಷೇಕ, ದಾಸೋಹ ಮಾಡಿದರೆ ಮಳೆ ಬರುತ್ತದೆ ಎಂಬ ನಂಬಿಕೆಯಿದೆ. ಇವಳ ನೆನಪಿಗಾಗಿ ಹೋನ್ನೆಕೆರೆಯನ್ನು ಹೊಸದುರ್ಗಕ್ಕೆ ಹೊಗುವ ಹವಳೇಹಟ್ಟಿ ಮಾರ್ಗದಲ್ಲಿ ಗುಂಡಾಲಮ್ಮ, ಬೂತಪ್ಪನ ಗುಡಿ, ಕೊಪ್ಪದಮ್ಮ ದೇವರುಗಳಿಗೆ ಇತ್ತೀಚಿಗೆ ನಿರ್ಮಿಸಿದ ಚಿಕ್ಕ ಗುಡಿಗಳಿವೆ. ಇವುಗಳಿಗೆ ಪ್ರತಿ ವರ್ಷ ಜಾತ್ರೆ, ದಾಸೋಹ, ವಿಶೇಷ ಪೂಜೆಯಂತಹ ಕಾರ್ಯಕ್ರಮಗಳು ನಡೆಯುತ್ತವೆ. ಕೊಪ್ಪದಮ್ಮನನ್ನು ಗ್ರಾಮದೇವತೆ ಎಂದು ಪೂಜಿಸುವರು.

ಹೊಳಲ್ಕೆರೆ ಪಟ್ಟಣದ ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸಿದರೆ ವಿಶೇಷ ಆಚರಣೆ, ಸಂಪ್ರದಾಯಗಳಿರುವುದು ಕಂಡುಬರುತ್ತದೆ. ಇಂದಿಗೂ ಇಲ್ಲಿನ ಜನಗಳು ನಂಬಿಕೆ, ಆಚರಣೆ, ಜಾತ್ರೆ, ಉತ್ಸವಗಳಂತಹ ಕಾರ್ಯಕ್ರಮಗಳ ಮೂಲಕ ನಂಬಿಕೆ ಮತ್ತು ಆಚರಣೆಗಳನ್ನು ಮುಂದುವರೆಸಿಕೊಂಡು ಹೊಗುತ್ತಿದ್ದಾರೆ.

ಅಡಿಟಿಪ್ಪಣಿ

ಕ್ಷೇತ್ರ ಕಾರ್ಯದಲ್ಲಿ ಹೇಳಿದ ಮಾಹಿತಿ

ಅಧ್ಯಾಯ–೮

ಸಮರೋಪ

ಒಂದು ನಾಡಿನ ಇತಿಹಾಸ ಮತ್ತು ಸಂಸ್ಕೃತಿಯನ್ನು ಪುನಃರಚಿಸಲು ಆಕರ ಸಾಮಗ್ರಿಗಳು ಅವಶ್ಯಕ. ಈ ಅಧ್ಯಯನಕ್ಕೆ ಬೇಕಾದ ಆಕರಗಳಾದ ಶಾಸನ, ಶಿಲ್ಪ, ಸ್ಮಾರಕ, ಕೋಟೆ, ಕೊತ್ತಲ, ಕೆರೆ, ಬಾವಿಗಳನ್ನು ಕ್ಷೇತ್ರಕಾರ್ಯ ಕೈಗೊಳ್ಳುವುದರ ಮೂಲಕ ಅಧ್ಯಯನ ಮಾಡಲಾಗಿದೆ. ಹೊಳಲ್ಕೆರೆ ಪಟ್ಟಣ ಐತಿಹಾಸಿಕ ದೃಷ್ಟಿಯಿಂದ ಮಹತ್ವದ್ದಾಗಿದ್ದು ಪ್ರಾಗೈತಿಹಾಸಿಕ ಕಾಲದಿಂದ ಇತಿಹಾಸ ರಚನೆಯ ಕಾಲದವರೆಗೂ ತನ್ನ ಚರಿತ್ರೆಯನ್ನು ಹೊಂದಿದೆ. ಈ ಪ್ರದೇಶದ ಪ್ರಾಚೀನ ಸಂಸ್ಕೃತಿಯ ಬೆಳವಣಿಗೆಯ ರೂಪುರೇಷೆಗಳನ್ನು ತೋರಿಸುವುದಾಗಿದೆ. ಇತಿಹಾಸ ಪೂರ್ವಕಾಲದಿಂದ ೨೦ನೇ ಶತಮಾನದ ಅಂಚಿನವರೆಗೆ ಇತಿಹಾಸವನ್ನು ಪುನಃ ರಚಿಸಿದ್ದನ್ನು ಕಾಣಬಹುದು. ಅನೇಕ ವೈವಿಧ್ಯಮಯ ಸಂಗತಿಗಳು, ಕಲೆ, ಮತ್ತು ವಾಸ್ತು ಶಿಲ್ಪ ಮತ್ತು ಸಾಂಸ್ಕೃತಿಕ ಚರಿತ್ರೆಯ ಪುನರ್ರಚನೆಗೆ ತಮ್ಮದೆ ಆದ ವಿಶಿಷ್ಟ ಕೊಡುಗೆ ನೀಡಿದ್ದು ಅಂತಹ ನಿದರ್ಶನಗಳನ್ನು ಸೋದಾಹರಣವಾಗಿ ಪ್ರಸ್ತುತ ಪಡಿಸಲಾಗಿದೆ.

ಹೊಳಲ್ಕೆರೆ ಪಟ್ಟಣದ ಚಾರಿತ್ರಿಕ ಅಧ್ಯಯನದಿಂದ ಮುಖ್ಯವಾದ ನಿರ್ಣಯಗಳನ್ನು ಮತ್ತು ಕೊಡುಗೆಗಳನ್ನು ನಿರೂಪಿಸಲಾಗಿದೆ. ಹೊಳಲ್ಕೆರೆ ಪಟ್ಟಣದಲ್ಲಿ ಹೊಯ್ಸಳರ ಕಾಲದಿಂದ ಹಿಡಿದು ಮೈಸೂರು ಒಡೆಯರ ವರಗೂ ವಿವಿಧ ಅರಸ ಮನೆತನಗಳ ಆಳ್ವಿಕೆಗೆ ಒಳಪಟ್ಟಿದ್ದು ನಮಗೆ ಶಾಸನ, ಶಿಲ್ಪಗಳಿಂದ ಧೃಡಪಡುತ್ತದೆ. ವಿವಿಧ ರಾಜಮನೆತನದ ಚಕ್ರವರ್ತಿಗಳು ತಮ್ಮ ಸಾಮಾರ್ಥ್ಯದ ಆಧಾರದ ಮೇಲೆ ಪಟ್ಟಣದ ಭಾಗಗಳನ್ನು ವಶಪಡಿಸಿಕೊಂಡು ಆಳ್ವಿಕೆ ನಡೆಸಿರುವುದನ್ನು ಗಮನಿಸಬಹುದು. ಕೆಲವೊಮ್ಮೆ ಅಂದಿನ ದಂಡನಾಯಕರು ಇಲ್ಲಿ ಆಳ್ವಿಕೆ ನಡೆಸಿ ಈ ಪ್ರದೇಶಕ್ಕೆ ತಮ್ಮದೇ ಕೊಡುಗೆಯನ್ನು ನೀಡಿದ್ದಾರೆ. ಅವರಲ್ಲಿ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಪಾಂಡ್ಯ, ಸೇವುಣ, ಹೊಯ್ಸಳ, ಕಂಪಿಲರಾಯ, ವಿಜಯನಗರ, ಸಂತೆಬೆನ್ನೂರ ನಾಯಕರು, ಪಾಳೆಯಗಾರ, ಮೈಸುರು ಅರಸರು, ಬಿಜಾಪುರ ಹಾಗೂ ಮೊಗಲರ ಕಾಲದವರೆಗೂ ನೋಡುತ್ತೇವೆ.

ಪ್ರಮುಖವಾಗಿ ಈ ಪಟ್ಟಣ ಹೊಯ್ಸಳ, ವಿಜಯನಗರ, ಪಾಳೆಯಗಾರ ಅರಸರುಗಳ ಮತ್ತು ದಂಡನಾಯಕರ ಆಳ್ವಿಕೆಗೆ ಒಳಪಟ್ಟಿತ್ತು. ಇವರ ಕಾಲದಲ್ಲಿ ಈ ಪ್ರದೇಶ ವಿಸ್ತೀರ್ಣಗೊಂಡು ರಾಜಕೀಯ ಮಾನ್ಯತೆಯನ್ನು ಪಡೆದಿತ್ತು. ಇವರುಗಳ ಸಂಕ್ಷಿಪ್ತ ರಾಜಕೀಯ ಇತಿಹಾಸವನ್ನು ಅವಲೋಕನ ಮಾಡಲಾಗಿದೆ.

ದೇವಾಲಯಗಳಿಗೆ ಸಂಬಂಧಿಸಿದಂತೆ ಅವುಗಳ ಉಗಮ ಮತ್ತು ವಿಕಾಸವನ್ನು ಸಂಕ್ಷಿಪವಾಗಿ ಹೇಳಿ ಪ್ರಸ್ತುತ ವ್ಯಾಪ್ತಿಯ ಒಳಗೆ ದೇವಾಲಯ ವಿಜಯನಗರ, ಪಾಳೆಯಗಾರರ ದೇವಾಲಯಗಳನ್ನು ಪ್ರಮುಖವೆನಿಸಿವೆ. ಅಲಂಕಾರಿಕವಾಗಿ ವಾಸ್ತು ಶೈಲಿಯ ದೃಷ್ಟಿಯಿಂದ ಒರಟಾಗಿ ಕಂಡರೂ ವೈಶಾಲ್ಯತೆಯ ದೃಷ್ಟಿಯಿಂದ ಪ್ರಾಮುಖ್ಯತೆ ಪಡೆದಿವೆ. ಗ್ರಾನೈಟ್ ಶಿಲೆಯನ್ನು ಬಳಸಿ ಇವರ ವಾಸ್ತುಕೃತಿಗಳ ನಿರ್ಮಾಣಗೊಂಡಿರುವುದರಿಂದ ಹೆಚ್ಚಿನ ಅಲಂಕಾರಿಕ ಅಂಶಗಳು ಕಂಡು ಬರುವುದಿಲ್ಲ. ದೇವಾಲಯಗಳ ಕಂಬಗಳಲ್ಲಿ ಉಬ್ಬು ಶಿಲ್ಪಗಳ ಕೆತ್ತನೆಯು ಪ್ರಮುಖವಾಗಿ ಕಾಣುತ್ತದೆ.

ಶೈವ, ವೈಷ್ಣವ, ಜೈನ, ಶಾಕ್ತ ದೇವಾಲಯ ಮತ್ತು ಶಿಲ್ಪಗಳು ಗೋಚರಿಸುತ್ತವೆ. ಶಿಲ್ಪಗಳಲ್ಲಿ ಈಶಾನ್ಯಮುಖ ಆಂಜನೇಯ ವಿಶೇಷವೆನಿಸುತ್ತದೆ. ಹಂಪಿಯಲ್ಲಿನ ಕಡಲೆಕಾಳು ಗಣಪತಿಯನ್ನು ಹೋಲುವ ಬಯಲು ಗಣಪತಿ ತಾಲೂಕಿನಲ್ಲೇ ದೊಡ್ಡ ಮೂರ್ತಿಯಾಗಿದೆ. ಈ ಪಟ್ಟಣವು ವೈಷ್ಣವ ಧರ್ಮದ ಧಾರ್ಮಿಕ ಕೇಂದ್ರವಾಗಿರಬೇಕೆಂದು ಇಲ್ಲಿನ ಪಂಚಲಿಂಗಗಳಿಂದ ವೇದ್ಯವಾಗುತ್ತದೆ. ಇವುಗಳಲ್ಲದೆ ಇನ್ನು ಹಲವು ಲಿಂಗಗಳಿವೆ. ಚಾರಿತ್ರಿಕ ಅಧ್ಯಯನ ಸಂದರ್ಭದಲ್ಲಿ ಶಾಸನ, ಸ್ಥಳನಾಮ, ಸ್ಥಳಪುರಾಣ, ಆಚಾರ-ವಿಚಾರಗಳು ಆಕರ ಸಾಮಗ್ರಿಗಳಾಗಿವೆ.

ಮಾನವನ ಸಂಸ್ಕೃತಿಯ ವಿಕಾಸದಲ್ಲಿ ನೀರಿನ ಪಾತ್ರ ಪ್ರಧಾನವಾಗಿದೆ. ಈ ಪಟ್ಟಣದಲ್ಲಿ ಪ್ರಮುಖವಾಗಿ ಮೂರು ಕೆರೆಗಳಿದ್ದು ಅವುಗಳ ದಂಡೆಗಳ ಮೇಲೆಯೇ ನಮಗೆ ಪ್ರಾಚೀನತೆಯ ಇತಿಹಾಸ ದೊರೆಯುತ್ತದೆ. ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ಅರಸರ, ಮಾಂಡಲಿಕರು, ಸ್ಥಳೀಯ ಅಧಿಕಾರಿಗಳು, ವ್ಯಾಪಾರಿಗಳು ಕೆರೆ, ನೀರಾವರಿ, ನಿರ್ವಹಣೆಗೆ ಪ್ರಾಮುಖ್ಯತೆ ನೀಡಿದ್ದು ಕಾಣುತ್ತೆವೆ.

ವೀರಗಲ್ಲು, ಮಹಾಸತಿಗಲ್ಲುಗಳು ತ್ಯಾಗ ಮತ್ತು ಬಲಿದಾನದ ಪ್ರತೀಕವಾಗಿವೆ. ಪ್ರಸ್ತುತ ಪ್ರದೇಶದಲ್ಲಿ ಈ ಶಿಲ್ಪಗಳಲ್ಲಿ ವೀರರ ತ್ಯಾಗ, ಸತಿಗಳ ಬಲಿದಾನವಾಗಿರುವುದು ಗೋಚರಿಸುತ್ತದೆ. ಪಟ್ಟಣದ ಕಾಲಭೈರವನ ದೇವಾಲಯದ ಮುಂದೆ ಇರುವ ಶಿಲ್ಪಗಳು, ಇತರ ದೇವಾಲಯಗಳಲ್ಲಿ, ಅವುಗಳ ಮುಂದೆ ಇರುವ ಶಿಲ್ಪಗಳಿಂದ ಹೊಳಲ್ಕೆರೆ ಪಟ್ಟಣ ಗತಕಾಲದ ಮಾನವನ ಚಾರಿತ್ರಿಕ ಬದುಕಿನ ವಿಭಿನ್ನ ಆಯಾಮಗಳ ಕೈಗನ್ನಡಿಗಳೆನ್ನಬಹುದು.

ಇಲ್ಲಿನ ದೇವಾಲಯಗಳನ್ನು ಶೈವ, ವೈಷ್ಣವ, ಜೈನ ಎಂದು ವಿಂಗಡಿಸಿ ಅವುಗಳ ಅಂಗಗಳಾಗಿ ಗರ್ಭಗೃಹ, ಲಲಾಟ, ವಿತಾನ, ಕಂಬ, ಭುವನೇಶ್ವರಿ, ಗೋಪುರಗಳಲ್ಲಿ ಅನೇಕ ರೀತಿಯ ಶಿಲ್ಪಗಳನ್ನು ಗಮನಿಸಲಾಗಿದೆ.

ಹೊಳಲ್ಕೆರೆ ಪಟ್ಟಣ ವರ್ಣಪದ್ಧತಿಯ ಆಧಾರದ ಮೇಲೆಯೆ ರೂಪುಗೊಂಡಿದ್ದಿತು. ಸಮಾಜದಲ್ಲಿ ಬ್ರಾಹ್ಮಣರು ಮುಖ್ಯವಾಗಿ ಗುರುತಿಸಿಕೊಂಡಿದ್ದರು. ಇಲ್ಲಿ ಇವರಿಗೆ ಪ್ರತ್ಯೇಕ ಕೇರಿಗಳಿರುವುದು ಕಾಣುತ್ತೆವೆ. ಇವರ ಮುಖ್ಯ ವೃತ್ತಿ ಪೌರೋಹಿತ್ಯವಾಗಿದ್ದರೂ ಇದರೊಂದಿಗೆ ದಂಡನಾಯಕರಾಗಿ, ಊರೊಡೆಯರಾಗಿ ರಾಜ್ಯ ರಕ್ಷಣೆಯಲ್ಲಿ ತೊಡಗುತ್ತಿದ್ದರು. ಇವರು ಸಮಾಜದಲ್ಲಿ ದೇವರಿಗೆ ದತ್ತಿ ನೀಡಿದವರು, ಸ್ವೀಕರಿಸಿದವರು

ಆಗಿದ್ದಾರೆ. ಇವರಲ್ಲದೆ ಎಲ್ಲಾ ಸಮುದಾಯಗಳು ಪಟ್ಟಣದಲ್ಲಿ ವಾಸವಾಗಿದ್ದರ ಕುರುಹುಗಳಾಗಿ ಪ್ರತ್ಯೇಕ ಕೇರಿಗಳಿಂದ ತಿಳಿಯುತ್ತದೆ.

ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಹಿಂದಿನಿಂದ ನಡೆದು ಕೊಂಡು ಬಂದ ಅನೇಕ ನಂಬಿಕೆ, ಆಚರಣೆ, ಐತಿಹ್ಯ, ಜಾತ್ರೆ, ಉತ್ಸವಗಳಂತ ಕಾರ್ಯಕ್ರಮಗಳು ಈಗಲೂ ಮುಂದುವರೆಸಿ ಕೊಂಡು ಬಂದಿದ್ದಾರೆ, ಇಲ್ಲಿ ಹೊಳಲಮ್ಮನ ಐತಿಹ್ಯಗಳಿವೆ. ಸಿಡಿ, ಉತ್ಸವಗಳನ್ನು ಮಾರಕ ರೋಗಗಳು ಬಾರದಿರಲಿ ಎಂದು ಆಚರಿಸುತ್ತಾರೆ.

ಹೊಳಲ್ಕೆರೆಯ ಪ್ರಾಚೀನ ದೇವಾಲಯವೆಂದು ಜೈನ ಕ್ರಿ.ಶ. ೧೧೫೪ರ ಜೈನ ಬಸದಿಯನ್ನು ಗುರುತಿಸಬಹುದು. ಪ್ರಾಚೀನ ಶಾಸನ ಎಂದು ೧೧೫೪ ರ ಹೊಯ್ಸಳರ ವೀರಬಲ್ಲಾಳನ ಕಾಲದ ಶಾಸನ ಶಾಂತಿನಾಥ ಬಸದಿ ಜೀರ್ಣೋದ್ಧಾರ ಮಾಡಿದ್ದರ ವಿವರವಿದೆ. ಶಿಲ್ಪಗಳ ದೃಷ್ಟಿಯಿಂದ ಲಿಂಗಗಳು ಪ್ರಾಚೀನವಾಗಿವೆ. ಪಟ್ಟಣದ ಪ್ರಾಚೀನ ಶಾಸನವು ಕೋಟೆ ಬಾಗಿಲ ಎಡಭಾಗದಲ್ಲಿರುವ ಶಾಸನವಾಗಿದೆ.

ಈ ಪ್ರಬಂಧವು ಕ್ಷೇತ್ರಕಾರ್ಯವನ್ನು ಒಳಗೊಂಡು ರಚಿತವಾದ್ದುದಾಗಿದೆ. ಹೊಳಲ್ಕೆರೆ ಪಟ್ಟಣದ ಚಾರಿತ್ರಿಕ ಅಧ್ಯಯನ, ರಾಜಕೀಯ, ಆಡಳಿತ ವ್ಯವಸ್ಥೆ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ವಾಸ್ತುಶಿಲ್ಪ, ಮೂರ್ತಿಶಿಲ್ಪ, ಸ್ಮಾರಕಶಿಲ್ಪಗಳು ಕೋಟೆ, ಬಾವಿ, ಶಾಸನ ಇವುಗಳ ಮಾಹಿತಿಯನ್ನು ಪ್ರಥಮ ಬಾರಿಗೆ ಒಂದೆಡೆ ತರುವ ಪ್ರಯತ್ನ ಮಾಡಲಾಗಿದೆ, ಇದೊಂದು ಸಂಶೋಧನಾ ವಿಷಯವಾಗಿರುವುದರಿಂದ ವಿಷಯ ಸಮರ್ಥನೆಗಾಗಿ ಸಾಧ್ಯವಾದಷ್ಟು ಪ್ರಯತ್ನಿಸಲಾಗಿದೆ. ಹಾಗೂ ಶಿಲ್ಪ, ದೇವಾಲಯ, ಕೆರೆ, ಕಟ್ಟೆ, ಬಾವಿಗಳ ಸಮಗ್ರ ಚಿತ್ರಣವನ್ನು ನೀಡಲಾಗಿದೆ. ಪ್ರಬಂಧದಲ್ಲಿ ಚರ್ಚಿಸಿರುವ ಕೆಲವು ದೇವಾಲಯವನ್ನು, ಹಲವಾರು ಗ್ರಂಥಗಳ ರಚನೆಗೆ ಬೇಕಾಗಿರುವ ವಿಪುಲ ಶ್ರೀಮಂತಿಕೆಯನ್ನು ಹೊಂದಿವೆ. ಪ್ರಸ್ತುತ ಪಟ್ಟಣದ ಸಮಗ್ರ ಚಿತ್ರಣ ನೀಡಲು ಒಂದು ಕಿರು ಪ್ರಯತ್ನ ಮಾಡಲಾಗಿದೆ.

ಈ ಪ್ರಬಂಧದಲ್ಲಿ ಉಲ್ಲೇಖಿಸಿರುವ ಪಟ್ಟಣಕ್ಕೆ ಹಲವು ಬಾರಿ ಭೇಟಿ ನೀಡಿ ಸ್ಥಳದಲ್ಲಿಯೇ ಅಧ್ಯಯನ ಕೈಗೊಂಡು ಪೂರಕವಾಗಿ ಸ್ವಂತ ಅಭಿಪ್ರಾಯವನ್ನು ನೀಡುತ್ತಾ ಪ್ರಬಂಧವನ್ನು ರಚಿಸಲಾಗಿದೆ.

ಈ ಪ್ರಬಂಧಕ್ಕೆ ಪೂರಕವಾದಂತಹ ನಕಾಶೆ. ವಕ್ತೃ ವಿವರ, ದೇವಾಲಯಗಳ ತಲವಿನ್ಯಾಸ, ಛಾಯಚಿತ್ರ ಹಾಗೂ ಆಕರ ಗ್ರಂಥಗಳ ಪಟ್ಟಿಯನ್ನು ಒದಗಿಸಲಾಗಿದೆ.

ಅನುಬಂಧಗಳು

ಶಾಸನಗಳ ಕೋಷ್ಟಕ

ಕ್ರಮ ಸಂಖ್ಯೆ	ಪಟ್ಟಣ	ಶಾಸನ ದೊರೆತ ಸ್ಥಳ	ಮನೆತನ	ಅರಸ	ಕಾಲಮಾನ	ಸಾರಾಂಶ
೧	ಹೊಳಲ್ಕೆರೆ	ಜೈನ ಬಸದಿ	ಕಲ್ಯಾಣ ಚಾಲುಕ್ಯ	ಡಾಕರಸ	ಕ್ರಿ.ಶ.೧೧೫೪	ಹೊಳಲ್ಕೆರೆ ಬಸದಿಗೆ ತಿಂಗಳಿಗೆ ೧೧ ಹಣ ಸುಂಕಬಿಟ್ಟ ವಿವರ
೨	ಹೊಳಲ್ಕೆರೆ	ಶಾಂತಿನಾಥ ಬಸದಿ	ಹೊಯ್ಸಳ	ವೀರಬಲ್ಲಾಳ	ಕ್ರಿ.ಶ.೧೧೫೪	ಜೈನ ಧಾರ್ಮಿಕ ಸಾಮರಸ್ಯ, ಜಿನಾಲಯ ಜೀರ್ಣೋದ್ಧಾರ
೩.	ಹೊಳಲ್ಕೆರೆ	ಕೋಟೆಬಾಗಿಲು	ತ್ರಿಭುವನ ಮಲ್ಲ	–		ಪೊಳಲಕೆರೆ ಎಂದು ಸಂಭೊಧಿತ
೪.	ಹೊಳಲ್ಕೆರೆ	ಶಂಕರಲಿಂಗ ದೇವಾಲಯ	ಹೊಯ್ಸಳ	ವೀರಬಲ್ಲಾಳ /ನರಸಿಂಹ	ಕ್ರಿ.ಶ.೧೨೧೭	ಸ್ವಯಂಭೂಕಲಿದೇವರಿಗೆ ಕೊಡಿಹಳ್ಳಿ ದಾನಕೊಟ್ಟದ್ದು
೫.	ಹೊಳಲ್ಕೆರೆ	ಗೋಪಾಲಕೃಷ್ಣ ದೇವಾಲಯದ ರಂಗಮಂಟಪ ಕೈಸಾಲೆ	ವಿಜಯನಗರ	ಸದಾಶಿವರಾಯ	ಕ್ರಿ.ಶ.೧೪೮೭	ಮದಕರಿ ನಾಯಕನ ಮೈದುನ ಗುಲ್ಲಪ್ಪನಾಯಕನಿಗೆ ಹೊಳಲ್ಕೆರೆ ಸೀಮೆ, ಉಂಬಳಿ ಕೊಟ್ಟ ವಿವರ

೬.	ಹೊಳಲ್ಕೆರೆ	ಗೋಪಾಲ ದೇವಾಲಯದ ತಾಮ್ರ ಶಾಸನ (ನಕಲು)	ಪಾಳೆಯಗಾರರು		ಕ್ರಿ.ಶ.೧೫೬೮ ಹೊಳಲ್ಕೆರೆ ತಾಲೂಕಿಗೆ ದಾನಕೊಟ್ಟ ವಿವರ
೭.	ಹೊಳಲ್ಕೆರೆ	ಗೋಪಾಲ ದೇವಾಲಯದ ಪ್ರಕಾರದಲ್ಲಿ ಬಿದ್ದಿರುವ ಕಲ್ಲು	–	–	ಕ್ರಿ.ಶ. ೧೨೫೦ (೧೨ನೆಯ ಜೈನರ ನಿಷಧಿ ಶತಮಾನ) ಶಾಸನ
೮.	ಹೊಳಲ್ಕೆರೆ	ಗಣಪತಿ ದೇವಸ್ಥಾನದ ಬಲಗಡೆ ಕಲ್ಲು	ರಾಯರು		– ಶಾಲಿವಾಹನ ಸಕ ಸಂವತ್ಸರ ಬಗ್ಗೆ
೯.	ಹೊಳಲ್ಕೆರೆ	ಗಣಪತಿ ದೇವಸ್ಥಾನ ಎಡಗಡೆ ೧ನೇಯ ಕಲ್ಲು	ವಿಜಯನಗರ	ಸದಾಶಿವರಾಯ	ಕ್ರಿ.ಶ.೧೫೨೨ ನಾಯಕರಿಗೆ ತೆರಿಗೆಯಲ್ಲಿ ವಿಶೇಷ ವಿನಾಯಿತಿ
೧೦.	ಹೊಳಲ್ಕೆರೆ	ಗಣಪತಿ ದೇವಸ್ಥಾನದ ೨ನೆಯ ಕಲ್ಲು	ವಿಜಯನಗರ	ಸದಾಶಿವರಾಯ	ಕ್ರಿ.ಶ.೧೪೬೮ ನಾಯಕರಿಗೆ ತೆರಿಗೆಯಲ್ಲಿ ವಿಶೇಷ ವಿನಾಯಿತಿ
		೩ನೇಯ ಕಲ್ಲು	ಪಾಳೆಯಗಾರರು	ನರಸಪ್ಪ ನಾಯಕ	ಗಣಪತಿದೇವಾಲಯದ ತೆರಿಗೆಯಲ್ಲಿ ವಿನಾಯಿತಿ

೧೧.	ಕೃಷ್ಣಪ್ಪನ ತೋಟದಲ್ಲಿ	ಹೊಯ್ಸಳ	ವೀರಬಲ್ಲಾಳ	--	ಶಂಕರ ದೇವರು, ನಾರಾಯಣ ದೇವರ ಕಾರ್ಯದ ಬಗ್ಗೆ
೧೨.	ಕೃಷ್ಣಪ್ಪನ ತೋಟದಲ್ಲಿ ೨ನೆಯ ಕಲ್ಲು	ಹೊಯ್ಸಳ	ವೀರಬಲ್ಲಾಳ	ಕ್ರಿ.ಶ.೧೧೧೧	ಕರಸಂವತ್ಸರ, ಶುದ್ಧಸಂವಸ್ಸರ ಬಹುಳ ಬಗ್ಗೆ ಮತ್ತೆ ದಾನದತ್ತಿ

ವಕ್ತೃ ವಿವರ

ಕ್ರ.ಸಂ	ವ್ಯಕ್ತಿಯ ಹೆಸರು	ವಯಸ್ಸು	ವೃತ್ತಿ	ಜಾತಿ
೧	ಸಿ.ಚಂದ್ರಪ್ಪ	೪೫	ಮುಖ್ಯಧಿಕಾರಿ (ಪಟ್ಟಣ ಪಂಚಾಯಿತಿ)	–
೨	ಕೆ.ಸಿದ್ಧಪ್ಪ	೭೦	ರೈತ	–
೩	ನಾಗರಾಜು	೬೮	ನಿವೃತ್ತಶಿಕ್ಷಕ	ಬ್ರಾಹ್ಮಣ
೪	ಶಶಿಕಾಲ	೪೦	ಶಿಕ್ಷಿ	ಲಿಂಗಾಯತ
೫	ರುದ್ರಪ್ಪ	೮೫	ನಿವೃತ್ತ ಶಿಕ್ಷಕರು	ಲಿಂಗಾಯತ
೬	ಕೊದಂಡರಾಮಯ್ಯ	೮೦	ನಿವೃತ್ತ ಶಿಕ್ಷಕರು	ಲಿಂಗಾಯತ
೭	ಹಿಂದುಧಾರಮೂರ್ತಿ	೫೫	ರೈತ	–
೮	ಶಿವಮೂರ್ತಿ	೪೨	ರೈತ	–
೯	ಕೆಂಚಮ್ಮ	೬೦	ಪೂಜಾರಿ	ಮಡಿವಾಳ
೧೦	ಧಾರಣೆದಾರ	೪೦	ಪೂಜಾರಿ	–
೧೧	ರುದ್ರಪ್ಪ	೫೦	ದೇವಾಲಯದ ಅಧ್ಯಕ್ಷರು	–
೧೨	ಸೈಯದ್ ಅನ್ವರು	೭೦	ಮಸಿದಿಯಲ್ಲಿ ಕೆಲಸ	ಮುಸ್ಲಿಂ
೧೩	ವೇಕಂಟೇಶ್	೫೪	ರೈತ	ಕುರುಬರು
೧೪	ಲೊಕೇಶ್	೨೮	ವೆಡ್ಡಿಂಗ್ ಕೆಲಸ	ವಾಲ್ಮೀಕಿ
೧೫	ಬಸವರಾಜು	೩೦	ವೆಡ್ಡಿಂಗ್ ಕೆಲಸ	ವಾಲ್ಮೀಕಿ
೧೬	ಜಮಧಾಗ್ನಿ	೬೭	ಪೂರೋಹಿತ	ಶಾನುಬೋಗ
೧೭	ವೀಣಾ	೩೦	ಮನೆಕೆಲಸ	ಲಿಂಗಾಯತ

೧೮	ರಾಘವೇಂದ್ರ	३೫	ದೇವಾಲಯ ಟ್ರಸ್ಟಿ	ವಾಲ್ಮೀಕಿ
೧೯	ಜಗಧೀಶ್‌ನಾಡಿಗ	೫೦	ಮಾಜಿಪುರಸಭಾ ಅಧ್ಯಕ್ಷ	ಲಿಂಗಾಯತ
೨೦	ಸನ್ನತ್ ಕುಮಾರ	೪೮	ಪುರೋಹಿತ	ಬ್ರಾಹ್ಮಣ
೨೧	ರುದ್ರೇಶ್	೪೫	ಕನ್ನಡಪ್ರಭ ವರದಿಗಾರ	–

ಆಧಾರ ಗ್ರಂಥಗಳು

ಕನ್ನಡ ಗ್ರಂಥಗಳು

ಅಪರ್ಣ ಕೂ.ಸ., ೧೯೯೯; **ದೇವಾಲಯ ವಾಸ್ತುಶಿಲ್ಪ ಪರಿಚಯ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅರವಿಂದ ಮಾಲಗತ್ತಿ (ಪ್ರ.ಸಂ)., ೨೦೦೫; **ಕನ್ನಡ ವಿಷಯ ವಿಶ್ವಕೋಶ – ಕರ್ನಾಟಕ, ಸಂಪುಟ–೧,** ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಕರವೀರ ಪ್ರಭು ಕ್ಯಾಲಕೊಂಡ., ೧೯೯೭; **ಚಾಲುಕ್ಯ ವಾಸ್ತುಶಿಲ್ಪ ವೈಭವ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕಲಬುರ್ಗಿ ಎಂ.ಎಂ., ೧೯೯೪; **ಕರ್ನಾಟಕದ ಕೈಫಿಯತ್ತುಗಳು,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕಲಬುರ್ಗಿ ಎಂ.ಎಂ., ೧೯೯೯; **ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಸಂಪುಟ–೧,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕಲಬುರ್ಗಿ ಎಂ.ಎಂ., ೨೦೧೦; **ಮಾರ್ಗ, ಸಂಪುಟ–೪,** ಸಪ್ನ ಬುಕ್ ಹೌಸ್, ಬೆಂಗಳೂರು.

ಕೆಮ್ತೂರು ರಘುಪತಿಭಟ್ಟ., ೧೯೭೯; **ತುಳುನಾಡಿನ ಸ್ಥಳನಾಮಗಳು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಗಿರಜ. ಟಿ., ೧೯೯೧; **ಚಿತ್ರದುರ್ಗ ಜಿಲ್ಲಾ ದರ್ಶನಿ,** ರೇಖಾ ಪ್ರಕಾಶನ, ದಾವಣಗೆರೆ.

ಗೋಪಾಲ್ ಆರ್. (ಸಂ)., ೨೦೦೬; **ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.

ಚನ್ನಬಸಪ್ಪ ಎಸ್. ಪಾಟೀಲ., ೨೦೦೦; **ಕರ್ನಾಟಕ ಕೋಟೆಗಳು, ಸಂಪುಟ–೧,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಿದಾನಂದ ಮೂರ್ತಿ ಎಂ., ೨೦೦೨; **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಸಪ್ನ ಬುಕ್ ಹೌಸ್, ಬೆಂಗಳೂರು.

ಚಿದಾನಂದಮೂರ್ತಿ ಎಂ., ೨೦೧೦; **ಹೊಸತು ಹೊಸತು,** ಸಪ್ನ ಬುಕ್ ಹೌಸ್, ಬೆಂಗಳೂರು.

ಚಿನ್ನಸ್ವಾಮಿ ಸೋಸಲೆ ಎನ್., ೨೦೦೪; **ಸಾಮ್ರಾಜ್ಯ ಮತ್ತು ಸಂಸ್ಥಾನ (ವಿಜಯನಗರ, ಮೈಸೂರು, ಇಕ್ಕೇರಿ)**, ಕನ್ನಡ ವಿಶ್ವವಿದ್ಯಲಯ, ಹಂಪಿ.

ತಿಪ್ಪೇರುದ್ರಸ್ವಾಮಿ ಎಚ್., ೨೦೦೩; **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು.

ಪರಮಶಿಮೂರ್ತಿ ಡಿ.ವಿ., ೧೯೯೯; **ಕನ್ನಡ ಶಾಸನಶಿಲ್ಪ**, ಕನ್ನಡ ವಿಶ್ವವಿದ್ಯಲಯ, ಹಂಪಿ.

ಪರಮಶಿವಮೂರ್ತಿ ಡಿ.ವಿ., ೨೦೧೦; **ಪಣ್ಬುಯ್ಯಲು**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪರಮಶಿವಮೂತಿ ಡಿ.ವಿ., ೨೦೧೧; **ತುರುಗೋಳ್ ಸಂಕಥನ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪುಟ್ಟಣ್ಣ ಎಂ.ಎಸ್., ೧೯೯೭; **ಚಿತ್ರದುರ್ಗ ಪಾಳೆಯಗಾರರು**, ಮದಕರಿ ಪ್ರಕಾಶನ, ಚಿತ್ರದುರ್ಗ.

ಬಾಗೂರು ಆರ್. ನಾಗರಾಜಪ್ಪ, ೧೯೮೪; **ಹೊಸದುರ್ಗದ ಸುತ್ತ**, ಅಭಿವ್ಯಕ್ತಿ ವೇದಿಕೆ, ಹೊಸದುರ್ಗ.

ಬಾಗುರು ಆರ್. ನಾಗರಾಜಪ್ಪ, ಬಸವರಾಜ ಶಿವಪುರ (ಸಂ)., ೧೯೯೯; **ಕಲ್ಪಾದ್ರಿ** (ಸ್ಮರಣಸಂಚಿಕೆ) ತಾಲೂಕು ಕನ್ನಡ ಸಾಹಿತ್ಯ ಪರಿಷತ್, ಹೊಸದುರ್ಗ.

ಬಾಗೂರು ಆರ್. ನಾಗರಾಜಪ್ಪ, ೨೦೦೪; **ಹೊಸದುರ್ಗ ಸೀಮೆ ಜಾನಪದ**, ಸಿ.ವಿ.ಜಿ. ಪಬ್ಲಿಕೇಷನ್, ಬೆಂಗಳೂರು.

ಮಹಂತೇಶ ಎನ್.ಎಸ್., ೨೦೦೮; **ಚಿತ್ರದುರ್ಗ ಕೋಟೆ ಪರಿಸರದ ದೇವಾಲಯಗಳು: ಒಂದು ಸಾಂಸ್ಕೃತಿಕ ಅಧ್ಯಯನ**, ರೇಣುಕ ಪ್ರಕಾಶನ, ಚಿತ್ರದುರ್ಗ.

ರಹಮತ್ ತರೀಕೆರೆ., ೨೦೦೬; **ಕರ್ನಾಟಕದ ನಾಥಪಂಥ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಹಮತ್ ತರೀಕೆರೆ., ೨೦೦೮; **ಸಾಂಸ್ಕೃತಿಕ ಅಧ್ಯಯನ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ರಾಜಶೇಖರಪ್ಪ ಬಿ., ೨೦೦೧; **ದುರ್ಗಶೋಧನ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ರಾಜಶೇಖರಪ್ಪ ಬಿ., ೨೦೦೧; **ಇತಿಹಾಸ ಕಥನ**, ಸಿ.ವಿ.ಜಿ. ಪಬ್ಲಿಕೇಷನ್ಸ, ಬೆಂಗಳೂರು.

ರಾಜಶೇಖರಪ್ಪ ಬಿ., ೨೦೦೬; **ದುರ್ಗಸಿರಿ (ಚಿತ್ರದುರ್ಗ ಜಿಲ್ಲಾ ಉತ್ಸವ ೨೦೦೬ರ ಸ್ಮರಣ ಸಂಚಿಕೆ)**, ಚಿತ್ರದುರ್ಗ ಜಿಲ್ಲಾ ಉತ್ಸವ ಸಮಿತಿ, ಚಿತ್ರದುರ್ಗ.

ರಾಜಶೇಖರಪ್ಪ ಬಿ., ೨೦೦೭; **ಚಿತ್ರದುರ್ಗ ಪಾಳೆಯಗಾರರ ದಾಖಲೆಗಳು**, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು.

ರಾಮಚಂದ್ರರಾವ್. ಎಸ್.ಕೆ., ೧೯೭೫; **ಮೂರ್ತಿಶಿಲ್ಪ ನೆಲೆ–ಹಿನ್ನೆಲೆ**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ರಾಮಚಂದ್ರರಾವ್ ಎಸ್.ಕೆ., ೧೯೮೦; **ಭಾರತದ ದೇವಾಲಯ ನೆಲೆ : ಹಿನ್ನೆಲೆ,** ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ರಾಮದಾಸರಡ್ಡಿ ಎಸ್.ಜಿ., ೨೦೦೬; **ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ ಅಧ್ಯಯನ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ್ ಎಂ.ವಿ.(ಸಂ)., ೧೯೭೬; **ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು,** ಹುಲ್ಲೂರು ಶ್ರೀನಿವಾಸ ಜೋಯಿಸರ ಗ್ರಂಥ ಪ್ರಕಟಣಾ ಸಮಿತಿ, ಚಿತ್ರದುರ್ಗ.

ಲಕ್ಷ್ಮಣ್ ತೆಲಗಾವಿ, (ಸಂ)., ೧೯೮೯; **ಹರತಿಸಿರಿ,** ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.

ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ್ ಎಂ.ವಿ. (ಸಂ)., ೧೯೯೫; **ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು,** ಹುಲ್ಲೂರು ಶ್ರೀನಿವಾಸ ಜೋಯಿಸರ ಗ್ರಂಥ ಪ್ರಕಟಣಾ ಸಮಿತಿ, ಚಿತ್ರದುರ್ಗ.

ಲಕ್ಷ್ಮಣ್ ತೆಲಗಾವಿ, ೨೦೦೪; **ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನದ ವ್ಯಾಪಕತೆ ಮತ್ತು ಸಾಧ್ಯತೆ ಒಂದು ಶತಮಾನ,** ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.

ಲಕ್ಷ್ಮಣ್ ತೆಲಗಾವಿ., ೨೦೦೪; **ಮೌರ್ಯ ಮತ್ತು ಶಾತವಾಹನ ಯುಗ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಲಕ್ಷ್ಮಣ್ ತೆಲಗಾವಿ., ೨೦೦೯; **ಚಿತ್ರದುರ್ಗ ನಾಯಕ ಅರಸರು: ರಾಜಕೀಯ ಚಿತ್ರ,** ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.

ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೨; **ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಿವತಾರಕ್ ಕೆ.ಬಿ., ೨೦೦೧; **ಕರ್ನಾಟಕದ ಪುರಾತತ್ವ ನೆಲೆಗಳು,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಿವಕುಮಾರಸ್ವಾಮಿ ಸಿ.ಎಸ್., ೧೯೮೮; **ಕರ್ನಾಟಕ ಜಾತ್ರೆಗಳು,** ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಶ್ರೀಶೈಲ ಆರಾಧ್ಯ ಎಚ್., ೧೯೮೩; **ಸಂಶೋಧನೆಯ ಹಾದಿಯಲ್ಲಿ,** ಆರೋಹಣ ಪ್ರಕಾಶನ, ಚಿತ್ರದುರ್ಗ.

ಶ್ರೀನಿವಾಸ ಎಲ್., ೨೦೧;, **ಹಂಪಿ ಪರಿಸರದ ಆದಿ ಮಾನವನ ನೆಲೆಗಳು,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸುಂದರ ಅ., ೧೯೭೩: **ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ,** ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ಸುಂದರ ಅ., ೧೯೯೪; **ಕರ್ನಾಟಕ ಪ್ರಾಗಿತಿಹಾಸ ಚಿತ್ರಕಲೆ,** ಕರ್ನಾಟಕ ಚಿತ್ರಕಲಾ ಅಕಾಡೆಮಿ, ಬೆಂಗಳೂರು.

ಸೋಮಶೇಖರ್ ಎಸ್.ವೈ (ಸಂ)., ೨೦೧೦; **ಜಗಲೂರು (ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ–೪),** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸೋಮಶೇಖರ್ ಎಸ್.ವೈ (ಸಂ)., ೨೦೧೦; **ಬ್ರಹ್ಮಗಿರಿ (ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ–೩),** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಜ್ಞಾನಾನಂದ ಜಿ., ೨೦೦೧; **ಶಿಲ್ಪಾದರ್ಶ. ಸಂಪುಟ–೧,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಜ್ಞಾನಾನಂದ ಜಿ., ೨೦೦೨; **ಶಿಲ್ಪಾದರ್ಶ. ಸಂಪುಟ–೨,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಜ್ಞಾನಾನಂದ ಜಿ., ೨೦೦೬; **ಶ್ರೀ ಕಾಶ್ಯಪ ಶಿಲ್ಪಶಾಸ್ತ್ರಂ, ಸಂಪುಟ–೨,** ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

ಲೇಖನಗಳು

ಅನುರಾಧ ವಿ., ೨೦೧೧; **ಕರ್ನಾಟಕದ ದೇವಾಲಯಗಳಲ್ಲಿ ಮಕರ ತೋರಣಗಳು,** ಇತಿಹಾಸ ದರ್ಶನ, ಸಂಪುಟು–೨೬, ನಾಗರಾಜು ಎಂ.ಜಿ., ಕೃಷ್ಣಮೂರ್ತಿ ಪಿ.ವಿ. (ಸಂ), ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ಅಪರ್ಣ ಕೂ.ಸ., ೧೯೯೮; **ವಾಸ್ತುಶಿಲ್ಪ ಶಾಸ್ತ್ರದ ಹಿನ್ನೆಲೆಯಲ್ಲಿ ದೇವಾಲಯದ ಮಂಟಪಗಳು,** ಇತಿಹಾಸ ದರ್ಶನ, ಸಂಪುಟ–೧೩, ನಾರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ., (ಸಂ), ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ನಾಗರಾಜ ಟಿ.ವಿ., ೨೦೦೭; **ಚಿತ್ರದುರ್ಗ ಜಿಲ್ಲೆಯ ಶಾಸನೋಕ್ತ ಕೆರೆ ನೀರಾವರಿ, ಇತಿಹಾಸ ದರ್ಶನ ಸಂಪುಟ–೨೨,** ನಾಗರಾಜು ಎಂ.ಟಿ., ಕೃಷ್ಣಮೂರ್ತಿ ಪಿ.ವಿ., (ಸಂ), ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ಬಸವರಾಜಪ್ಪ ಎಚ್.ಈ., ೨೦೦೨; **ಚಿತ್ರದುರ್ಗ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಮೇಲೆ ಹೊಸ ಬೆಳಕು,** ಇತಿಹಾಸ ದರ್ಶನ, ಸಂಪುಟ–೧೭, ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ., (ಸಂ), ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ಮಹಂತೇಶ್ ಎಸ್.ಎಸ್., ೨೦೧೨; **ಹೊಳಲ್ಕೆರೆ ತಾಲೂಕಿನಲ್ಲಿ ಕೆಲವು ಬೃಹತ್ ಶಿಲಾಯುಗದ ನೆಲೆಗಳ ಶೋಧ,** ಇತಿಹಾಸ ದರ್ಶನ ಸಂಪುಟ–೨೭, ಕೃಷ್ಣಮೂರ್ತಿ ಪಿ.ವಿ., ದೇವರಾಜಸ್ವಾಮಿ ಜಿ.ಕೆ., (ಸಂ), ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ರಾಮದಾಸರೆಡ್ಡಿ ಎಸ್.ಜಿ., ೨೦೧೦; **ಇತಿಹಾಸ ಆರಂಭ ಕಾಲದ ಕ್ಯಾವಲೀನ್ ಪೈಂಟೆಡ್ ಮಡಿಕೆ ಚೂರುಗಳು,** ಇತಿಹಾಸ ದರ್ಶನ, ಸಂಪುಟ-೨೫, ನಾರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ., (ಸಂ), ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ಲಕ್ಷ್ಮಣ್ ತೆಲಗಾವಿ, ೨೦೦೨; **ವೇದಾವತಿ ನದಿದಂಡೆ ಹಾಗೂ ಚಂದ್ರವಳ್ಳಿ ನಿವೇಶನಗಳಲ್ಲಿ ದೊರೆತ ಶಾತವಾಹನ ಕಾಲೀನ ಹೊಸ ನಾಣ್ಯಗಳು,** ಇತಿಹಾಸ ದರ್ಶನ, ಸಂಪುಟ-೧೭, ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ., (ಸಂ), ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ಅಪ್ರಕಟಿತ ಸಂಶೋಧನ ಪ್ರಬಂಧಗಳು

ಅಜೇಯ ಕುಮಾರ್ ವಿ.ಎಚ್., ೨೦೦೮; **ಜಗಳೂರು ತಾಲೂಕಿನ ಸ್ಥಳನಾಮಗಳು (ಅಪ್ರಕಟಿತ ಎಂ.ಫಿಲ್ ಪ್ರೌಢ ಪ್ರಬಂಧ),** ಮದರಾಸು ವಿಶ್ವವಿದ್ಯಲಯ, ಚೆನ್ನೈ.

ಅಮರೇಶ ಯತಗಲ್, ೨೦೦೫; **ಕರ್ನಾಟಕ ನಾಯಕ ಅರಸು ಮನೆತನಗಳ ವಿಶಿಷ್ಟ ಸಾಂಸ್ಕೃತಿಕ ಆಚರಣೆಗಳು : ಒಂದು ಚಾರಿತ್ರಿಕ ಅಧ್ಯಯನ (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ),** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕೃಷ್ಣಪ್ಪ ಎನ್., ೨೦೦೬; **ಕರ್ನಾಟಕದಲ್ಲಿ ಉತ್ಖನನ ನೆಲೆಗಳು : ಸಾಂಸ್ಕೃತಿಕ ಅಧ್ಯಯನ, (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ),** ಮೈಸೂರು ವಿಶ್ವವಿದ್ಯಲಯ, ಮೈಸೂರು.

ಜಯಣ್ಣ ಯು., ೨೦೦೨; **ಮೊಳಕಾಲ್ಮೂರು ತಾಲೂಕಿನ ಪುರಾತತ್ವೀಯ ಪರಿಸರ, (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ),** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ತಿಪ್ಪೇಸ್ವಾಮಿ ಎಸ್., ೨೦೦೪; **ದಾವಣಗೆರೆ ಜಿಲ್ಲೆಯ ದೇವಾಲಯಗಳು, (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ),** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ತಿಪ್ಪೇಸ್ವಾಮಿ ಎಸ್., ೨೦೦೪; **ಚಿತ್ರದುರ್ಗ ಜಿಲ್ಲೆ: ರಕ್ಷಣಾ ವಾಸ್ತು ಶಿಲ್ಪ (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ),** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪದ್ಮ ಎಂ.ವಿ., ೨೦೧೦; **ತುರುವೇಕೆರೆ ತಾಲೂಕಿನ ಕೆರೆಗಳು : ಸಾಂಸ್ಕೃತಿಕ ಅಧ್ಯಯನ, (ಅಪ್ರಕಟಿತ ಎಂ.ಫಿಲ್ ನಿಬಂಧ),** ಕನ್ನಡ ವಿಶ್ವವಿದ್ಯಲಯ, ಹಂಪಿ.

ಮಹದೇವ ಸಿ., ಸಂ: ೨೦೧೧; **ನಾಗಮಂಗಲ ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ-2** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹದೇವ ಸಿ., ೨೦೦೧; **ಪುರಾತತ್ವ ಶೋಧ,** ಲಕ್ಷ್ಮೀ ಪ್ರಕಾಶನ, ಶ್ರೀರಂಗಪಟ್ಟಣ

ಮಂಜುನಾಥ ಡಿ., ೨೦೦೪; **ಮಧ್ಯಕಾಲದಲ್ಲಿ ದೇವಾಲಯದ ಆಶ್ರಯ ಪಾಲನೆ ಮತ್ತು ನಿರ್ವಹಣೆ ಹರಿಹರ ದೇವಾಲಯ ಒಂದು ಅಧ್ಯಯನ,** ಶಾಸನಗಳ ಆಧಾರದಿಂದ, (ಅಪ್ರಕಟಿತ ಎಂ.ಫಿಲ್ ನಿಂಬಂಧ), ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.

ಮಂಜುನಾಥ ಟಿ., ೨೦೦೬; **ಚಿತ್ರದುರ್ಗ ಹಾಗೂ ಸುತ್ತಮುತ್ತಲಿನ ಪಾಳೆಯಗಾರರ ಸಾಂಸ್ಕೃತಿಕ ಇತಿಹಾಸ, (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ)**, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.

ಮಂಜಣ್ಣ ಪಿ.ಬಿ., ೨೦೧೦; **ಕಣಕುಪ್ಪೆ ಪರಿಸರ : ಚಾರ್ರಿತಿಕ ಅಧ್ಯಯನ, (ಅಪ್ರಕಟಿತ ಎಂ.ಫಿಲ್ ನಿಂಬಂಧ)**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹಂತೇಶ್ ಎನ್.ಎಸ್., ೨೦೦೮; **ಹೊಸದುರ್ಗ ಪರಿಸರದ ದೇವಾಲಯಗಳು, (ಅಪ್ರಕಟಿತ ಎಂ.ಫಿಲ್ ನಿಂಬಂದ)**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹಂತೇಶ್ ಎನ್.ಎಸ್., ೨೦೧೨; **ಹೊಸದುರ್ಗ ತಾಲೂಕು ಪರಿಸರ ಸಾಂಸ್ಕೃತಿಕ ಅಧ್ಯಯನ, (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ)**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

English Books

Annual Report of the Mysore Archaeological Deprtment, 1918Z; University of Mysore.

Annual Report of the Mysore Archaeological Department,1927; University of Mysore.

Annual Report of the Mysore Archaeological De[art,emt. 1964; Government of Mysore, Mysore.

Devarak D.v., 1996; Nagachandrika (Acompendiumof writing od Dr.M.S. Nagaraja Rao),Directorate of Archaeology and Huseums, Mysore.

Gururaja Rao B.k., 1972; The Megalithic culture in south India, University of Mysore, Mysore.

Gupta S.P., Shashi Prabha Asthana., 2002; Elements of Indian Art (Including Temple Architecture, Iconography and Iconometry), IndraprasthaMuseum of Art and Archaeology, New Delhi.

Krishna M.H., 1929; Excavations at Chandravalli, Mysore Archaeological Department, Mysore.

Krishnatmurthy M.S., 1980; The Nolambas, University of Mysore,Mysore. Mysore Archaeological Department Annual Report-1946,1956, Government Press, Bangalore.

Mysore Archaeological Department Annual Report-1947-1956, 1964; Government Press, Bangalore.

Rice B.L., (Ed), 1903; Epigraphia Carnatica Vol-XI, (Inscription in the Chitrdurga District), Mysore Government Central Press, Bangalore.

Sri Sathyan B.N., 1967; Chitradurga District Gazeteer, Government Press, Bangalore.

Sundara A., 1975; The Early Chamber Tombs of South India, University publishers, Delhi.

Suryanath U. Kamath (c.ed), Karanataka State Gazetter, Part-I, Governement Of Karnataka, Bangalore.

Suresh K.M., Temples of Karnataka (Grand plants and Elevations), VoI-I, Bharatiya kala prakashana, Delhi.


Shantaram Bhalachandra Deo (Ed), 1972; Archaeological congress and seminar Papers, Nagapura University, Nagapura.

ಚಿತ್ರದುರ್ಗ ಜಿಲ್ಲಾ ನಕಾಶೆ




ಹೊಳಲ್ಕೆರೆ ತಾಲೂಕು ನಕಾಶೆ






೧.ವೇಣುಗೋಪಾಲಸ್ವಾಮಿ ದೇವಾಲಯದ ತಲನಕ್ಷೆ



೨.ಕಾಲಭೈರವಸ್ವಾಮಿ ದೇವಾಲಯದ ತಲನಕ್ಷೆ



೩.ವೀರಭದ್ರಸ್ವಾಮಿ ದೇವಾಲಯದ ತಲನಕ್ಷೆ



೧.ವೇಣುಗೋಪಾಲಸ್ವಾಮಿ ದೇವಾಲಯ.



೨.ವೀರಭದ್ರಸ್ವಾಮಿ ದೇವಾಲಯ.



೩.ಕಾಲಭೈರವಸ್ವಾಮಿ ದೇವಾಲಯ.



೪. ಗಣಪತಿ ದೇವಾಲಯದ ಪಾರ್ಶ್ವ ನೋಟ.



೫. ಸೋಮೇಶ್ವರ ದೇವಾಲಯದ ಪಾರ್ಶ್ವ ನೋಟ.



೬.ವೇಣುಗೋಪಾಲಸ್ವಾಮಿ ದೇವಾಲಯದ ಮಹಾದ್ವಾರ.



೭.ವೇಣುಗೋಪಾಲಸ್ವಾಮಿ ದೇವಾಲಯದ ನವರಂಗ ಕಂಬಗಳು.



೮ .ವೇಣುಗೋಪಾಲಸ್ವಾಮಿ ದೇವಾಲಯದ ಕಂಬ.



೯.ವೇಣುಗೋಪಾಲಸ್ವಾಮಿ ದೇವಾಲಯದ ಕಂಬ.



೧೦.ವೀರಭದ್ರಸ್ವಾಮಿ ದೇವಾಲಯದ ಕಂಬ.



೧೧.ಕಾಲಭೈರವ ದೇವಾಲಯದ ಕಂಬ.




೧೨.ಶಂಕರಲಿಂಗ ದೇವಾಲಯದ ಕಂಬ.




೧೩.ಪ್ರಸನ್ನ ಗಣಪತಿಯ ಶಿಲ್ಪ.



೧೪.ವೇಣುಗೋಪಾಲಸ್ವಾಮಿ ಶಿಲ್ಪ.




೧೫.ವೇಣುಗೋಪಾಲಸ್ವಾಮಿ ದೇವಾಲಯ ಬಳಿಯ ವಿಷ್ಣುಶಿಲ್ಪ.



೧೬.ವೀರಭದ್ರಸ್ವಾಮಿ ಶಿಲ್ಪ.



೧೭.ಕಾಲಭೈರವಸ್ವಾಮಿ ಶಿಲ್ಪ.




೧೯.ಶಂಕರಲಿಂಗ ದೇವಾಲಯ ಬಳಿಯ ಭೈರವಿಶಿಲ್ಪ.



೨೦.ಕಾಲಭೈರವ ದೇವಾಲಯ ಬಳಿ ಇರುವ ತುರುಗೋಳ್ ವೀರಗಲ್ಲು ಶಿಲ್ಪ.



೧೮.ಊರ ಬಾಗಿಲ ಬಳಿ ಹೊನ್ನಮ್ಮ.



೨೧.ಶಂಕರಲಿಂಗ ದೇವಾಲಯ ಬಳಿ ಇರುವ ವೀರಗಲ್ಲು ಶಿಲ್ಪಗಳು.




೨೨.ಕಾಲಭೈರವನ ದೇವಾಸ್ಥಾನದ ಬಳಿ ಇರುವ ಸ್ಮಾರಕ ಶಿಲ್ಪಗಳು.




೨೩.ಹಳ್ಳದ ವೀರಭದ್ರ ದೇವಾಲಯ ಬಳಿಯ ಗುಂಡಯ್ಯ ಬ್ರಹ್ಮಯ ಶಿಲ್ಪ




೨೪.ಶಂಕರಲಿಂಗ ಬಳಿ ಇರುವ ಶಾಸನ.



೨೫.ಆಂಜನೇಯನ ದೇವಾಲಯ ಬಳಿ ಇರುವ ಶಾಸನ.



೨೬.ಈಶಾನ್ಯಮುಖ ಆಂಜನೇಯ.



೨೭.ಕಾಲಭೈರವನ ಬಳಿ ಇರುವ ಪುಷ್ಕರಣಿ.



೨೮.ಒಂಟಿಕಂಬದ ಮಠದ ಬಳಿ ಇರುವ ಪುಷ್ಕರಣಿ.



೨೯.ತೋಟದಲ್ಲಿ ಇರುವ ಪುಷ್ಕರಣಿ.



೩೦.ಒಂಟಿಕಂಬ.



೩೧.ಹಿರೇಕೆರೆ.




೩೨.ಶಂಕರ ಲಿಂಗ.



೩೩.ಕಲ್ಲೆ ಲಿಂಗ.



೩೪.ತೋಟದಲ್ಲಿ ಇರುವ ನಂದಿ.




೩೫.ಕಾಲಭೈರವನ ದೇವಾಲಯ ಬಳಿ ಇರುವ ನಂದಿ.



೩೬.ಶಂಕರಲಿಂಗ ದೇವಾಲಯ ಬಳಿ ಇರುವ ನಂದಿ.



೩೭.ಲಿಂಗೇಶ್ವರ ದೇವಾಲಯ ನಂದಿ ಲಿಂಗ.



೩೮.ಜೈನ ಶಿಲ್ಪ.



೩೯.ಕಾಲಭೈರವ ಸ್ವಾಮಿಯ ರಥೋತ್ಸವ.

